ಪ್ರಚಾರಪುಸ್ತಕಮಾಲೆ 115

ಅಲ್ಲಮಪ್ರಭು

ಡಾ|| ಟಿ. ಜಿ. ಸಿದ್ಧಪ್ಪಾರಾಧ್ಯ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೧೧೫

ಅಲ್ಲಮ ಪ್ರಭು

ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ, ಎಂ. ಎ., ಪಿಎಚ್. ಡಿ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

೧೯೮೦

ಮೊದಲನೆಯ ಮುದ್ರಣ: ೧೯೭೨
ಎರಡನೆಯ ಮುದ್ರಣ: ೧೯೮೦
೧೦,೦೦೦ ಪ್ರತಿಗಳು

ಬೆಲೆ: ೨೫ ಪೈಸೆ

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ, ಮೈಸೂರು–೫೭೦೦೧೨

ಮುದ್ರಕರು
ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ, ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆ ಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನವಿದ್ವಾಂಸರು ಜನರು ಅಪೇಕ್ಷಿಸಿದ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನಗಳು ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು,

ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದ ಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರ ಬಿದ್ದಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೆ ಭೌತ ವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ವೈದ್ಯ ವಿಜ್ಞಾನ, ಗಣಿತ ವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ, ಮುಂತಾದ ವಿಷಯಗಳನ್ನು ಕುರಿತ ನೂರ ಹದಿನಾಲ್ಕು ಪುಸ್ತಕ

ಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಡಾ|| ಟಿ. ಜಿ. ಸಿದ್ಧಪ್ಪಾರಾಧ್ಯ ಅವರ 'ಅಲ್ಲಮಪ್ರಭು' ಹೆಚ್ಚು ಜನಪ್ರಿಯ ವಾಗಲೆಂದು ನಾನು ಆಶಿಸುತ್ತೇನೆ.

ನಾರಾಯಣರಾವ್ ಅಪ್ಪೂರಾವ್ ನಿಕಂ

೧೫-೬-೧೯೬೨ ವೈಸ್-ಛಾನ್ಸಲರ್

ಕೃತಜ್ಞತೆ

ಅಲ್ಲಮಪ್ರಭು ಭೂಲೋಕದಲ್ಲಿ ಅವತರಿಸುವಾಗಲೇ ಪರಿಪೂರ್ಣನೂ, ಯೋಗಸಿದ್ಧನೂ ಆಗಿದ್ದನೆಂದೂ, ಅವನೇ ನಿರಂಜನ ಪೀಠದ ಸ್ಥಾಪಕನೆಂದೂ, ವೀರಶೈವ ಸಂಪ್ರದಾಯದ ಪ್ರವರ್ತಕನೆಂದೂ ಅನೇಕರು ತಿಳಿದಿದ್ದಾರೆ. ಇದರ ಯುಕ್ತಾಯುಕ್ತತೆಯನ್ನು ಅವನ ವಚನಗಳಿಂದಲೇ ಪರಿಶೀಲಿಸಬೇಕೆಂಬ ಉದ್ದೇಶದಿಂದ ಈ ಕಿರುಹೊತ್ತಗೆಯನ್ನು ಪ್ರಕಟಿಸಲಾಗಿದೆ.

ಅವನು ಹುಟ್ಟುವಾಗಲೇ ಪರಿಪೂರ್ಣನಾಗಿರಲಿಲ್ಲವೆಂದೂ, ಅವನು ಉಗ್ರಸಾಧನೆಯಿಂದ ಯೋಗಸಿದ್ಧಿಯನ್ನು ಪಡೆದನೆಂದೂ ಅವನ ವಚನಗಳಿಂದಲೇ ತಿಳಿದುಬರುತ್ತದೆ. ಇವನು ನಿರಂಜನ ಜಂಗಮನಾಗಿ ಲೋಕದಲ್ಲಿ ಹೇಗೆ ನಿರ್ಲಿಪ್ತತೆಯಿಂದ ಬಾಳಬೇಕೆಂಬ ಆದರ್ಶವನ್ನು ಜನತೆಗೆ ತೋರಿಸಿರುವುದೇನೊ ನಿಜ. ಆದರೆ ಇವನೇ ನಿರಂಜನಪೀಠವನ್ನು ಸ್ಥಾಪಿಸಿದವನಲ್ಲವೆಂಬುದು ಇವನ ವಚನಗಳಿಂದಲೇ ಸ್ಪಷ್ಟಪಡುತ್ತದೆ. ಇವನ ಬರುವಿಕೆಯನ್ನೇ ನಿರೀಕ್ಷಿಸುತ್ತಲಿದ್ದ ಹಣ್ಣಣ್ಣು ಮುದುಕ ಅನಿಮಿಷಯ್ಯನು ಲಿಂಗದಲ್ಲಿ ನೆಟ್ಟದೃಷ್ಟಿಯಿಂದ ನಿರಂಜನ ಜಂಗಮನಾಗಿ ಗೋಚರಿಸುವನು. ಅವನಿಗಿಂತಲೂ ಬಹಳ ಹಿಂದೆಯೇ ನಿಷ್ಕಲ ಪರಮಶಿವನ ಪಂಚಮುಖಗಳಿಂದ ಉದ್ಭವಿಸಿದ ಪಂಚ ಸಾದಾಖ್ಯಗಳನ್ನು ಭೂಲೋಕದಲ್ಲಿ ಪ್ರತಿನಿಧಿಸಿದ ಪಂಚಾಚಾರ್ಯರಲ್ಲಿ ಒಬ್ಬರಾದ ಏಕೋರಾಮಾರಾಧ್ಯರು ಕೇದಾರಲಿಂಗದಿಂದ ಉದ್ಭವಿಸಿ ಆಕಾಶದಂತಹ ತಮ್ಮ ಬಯಲಸ್ವರೂಪವನ್ನು ಜಗತ್ತಿಗೆ ಆದರ್ಶವಾಗಿ ತೋರಿಸಿದ್ದರು.

ಉಳಿದ ನಾಲ್ಕು ಆಚಾರ್ಯರು ನಾಲ್ಕು ಕಡೆ ಗುರು ಪೀಠ

ಗಳನ್ನು ಸ್ಥಾಪಿಸಿರುವಂತೆಯೇ ಏಕೋರಾಮಾರಾಧ್ಯರೂ ನಿರಂಜನ ಜಂಗಮಪೀಠವನ್ನು ಕೇದಾರಕ್ಷೇತ್ರದಲ್ಲಿ ಸ್ಥಾಪಿಸಿರುವರು. ಅದು ಈಗಲೂ ನಿರಂಜನಮೂರ್ತಿಗಳೆಲ್ಲರಿಗೂ ದಿವ್ಯವಾದ ಆಕರ್ಷಣೆಯಾಗಿ ಶೋಭಿಸುತ್ತಲಿದೆ. ಆ ನಿರಂಜನ ತತ್ವವನ್ನು ಅನುಸರಿಸಿಕೊಂಡು ಬಂದ ಅಲ್ಲಮಪ್ರಭು ಬಯಲಲ್ಲಿ ಬಯಲಾಗಿದ್ದರೂ, ನಿರಂಜನಸ್ಥಿತಿಯ ದಿವ್ಯ ಆದರ್ಶವನ್ನು ಜನತೆಗೆ ಆಚರಿಸಿ ತೋರಿಸಿದ್ದರಿಂದ ದಿವ್ಯಜ್ಯೋತಿಯಾಗಿ ಇಂದಿಗೂ ಎಲ್ಲರ ಹೃದಯದಲ್ಲೂ ವಿರಾಜಿಸುತ್ತಿದ್ದಾನೆ.

ಹಿಂದಿನಿಂದ ಅನೇಕ ಶಿವಯೋಗಿಗಳು ಆಚರಿಸಿ ತೋರಿಸಿರುವ ವೀರಶೈವ ಸಂಪ್ರದಾಯದ ಸ್ವರೂಪವನ್ನು ಅಲ್ಲಮಪ್ರಭು ತನ್ನ ಆಚರಣೆಯಿಂದ ಎಲ್ಲರಿಗೂ ಅವರವರ ಯೋಗ್ಯತೆಗೆ ಅನುಗುಣವಾಗುವಂತೆ ಹಿತವಾಗಿ ಬೋಧಿಸಿದ್ದಾನೆಂಬುದೇ ಅವನ ವಚನಗಳಿಂದ ಸ್ಪಷ್ಟಪಡುತ್ತದೆಯಾದ್ದರಿಂದ ಅಲ್ಲಮಪ್ರಭುವನ್ನು ವೀರಶೈವ ಸಂಪ್ರದಾಯದ ಪ್ರವರ್ತಕನೆಂದು ಹೇಳುವುದು ಯುಕ್ತವಲ್ಲ. ಈ ಕಾರ್ಯವನ್ನು ರೇಣುಕಾಚಾರ್ಯರು ಬಹಳ ಹಿಂದೆಯೇ ಮಾಡಿರುವುದು ಲೋಕಪ್ರಸಿದ್ಧವಾಗಿದೆ. ಗುರುಲಿಂಗ ಜಂಗಮರಲ್ಲಿ ಏಕರೂಪತೆ, ಇಷ್ಟಲಿಂಗದಲ್ಲಿ ಪ್ರಾಣಭಾವನೆ, ಸರ್ವಜೀವಿಗಳಲ್ಲಿ ಆತ್ಮೀಯತೆ, ಲಿಂಗಪ್ರೀತ್ಯರ್ಥವಾಗಿಯೇ ಎಲ್ಲಾ ವ್ಯವಹಾರಗಳ ನಿರ್ವಹಣೆ, ಸಮಸ್ತ ಭೋಜ್ಯವಸ್ತುಗಳಲ್ಲಿಯೂ ಪ್ರಸಾದಭಾವನೆ ಇವು ವೀರಶೈವ ಸಂಪ್ರದಾಯದಲ್ಲಿ ಮುಖ್ಯವಾದ ರೂಪರೇಖೆಗಳು. ಇವು ಬಹಳ ಹಿಂದೆಯೇ ಅಂದರೆ ದ್ರಾವಿಡ ಸಂಸ್ಕೃತಿಗೆ ಮೂಲಪುರುಷನಾದ ಅಗಸ್ತ್ಯನ ಕಾಲದಲ್ಲಿಯೇ ರೇಣುಕಾಚಾರ್ಯರಿಂದ ಉಪದಿಷ್ಟವಾಗಿ ವೈಯಕ್ತಿಕ ಆಚರಣೆಯಲ್ಲಿದ್ದವು. ಇವನ್ನು ಅಲ್ಲಮಪ್ರಭು ಸಾಮೂಹಿಕವಾಗಿ ಎಲ್ಲರ ಆಚರಣೆಗೂ ಸುಲಭ

ವಾಗಿ ದೊರೆಯುವಂತೆ ತನ್ನ ಆಚರಣೆಯಿಂದ ತೋರಿಸಿಕೊಟ್ಟು ಸಾಧಕರಿಗೆ ಅಮೋಘವಾದ ಸೇವೆಯನ್ನು ಸಲ್ಲಿಸಿ ಉತ್ತಮವಾದ ಮಾರ್ಗದರ್ಶಕನಾಗಿದ್ದಾನೆ.

'ಒಳಗೆ ವಿರಕ್ತಿ ಹೊರಗೆ ಆಸಕ್ತಿ' ಈ ಬಗೆಯ ವರ್ತನೆ ಮಾನವ ವಿಕಾಸಕ್ಕೆ ಆವಶ್ಯಕವೆನಿಸಿದೆ. ಆದರೆ ಲೋಕೋತ್ತರ ವ್ಯಕ್ತಿಗಳಿಗೆ ಈ ಹೊರಗಿನ ಆಸಕ್ತಿಯೂ ಲೋಕ ಕಲ್ಯಾಣಕ್ಕಾಗಿಯೇ ಸಂಭವಿಸುತ್ತದೆ. ಅದರಿಂದ ಸಮಾಜದ ಹಿತರಕ್ಷಣೆಯಾಗುತ್ತದೆ. ಅಲ್ಲಮಪ್ರಭುವೂ ಇಂತಹ ಲೋಕೋತ್ತರ ವ್ಯಕ್ತಿಗಳಲ್ಲಿ ಒಬ್ಬನಾದ್ದರಿಂದ, ಅವನ ಲೋಕಾನುಗ್ರಹಲೀಲೆಯೂ ಮತ್ತು ಅಂತರಂಗದ ದೃಢವೈರಾಗ್ಯವೂ ಮಾನವನ ಸರ್ವತೋಮುಖವಾದ ಶ್ರೇಯಸ್ಸಿಗೆ ಸಂಜೀವಿನಿ ಎನಿಸಿವೆ. ಒಳಗೆ ವೈರಾಗ್ಯಶೀಲನಾಗಿ ಮಾನವನು ಸ್ವಾರ್ಥದ ಕಿಲುಬಿಗೆ ಅಂಟಿಕೊಳ್ಳದೆ ಇಡೀ ಮಾನವವರ್ಗದ ಶ್ರೇಯೋಭಿವೃದ್ಧಿಗಾಗಿ ನಿರಭಿಮಾನದಿಂದಲೂ, ಉತ್ಸಾಹದಿಂದಲೂ, ತ್ರಿಕರಣಪೂರ್ವಕವಾಗಿ ದುಡಿಯುತ್ತ ಆತ್ಮಕಲ್ಯಾಣವನ್ನು ಸಾಧಿಸಬೇಕೆಂಬ ಹಿರಿಯ ಆದರ್ಶವನ್ನು ಅಲ್ಲಮಪ್ರಭು ಮಾನವವರ್ಗಕ್ಕೆ ಸಾರಿರುವನು. ಆದ್ದರಿಂದ ಅವನು ನಮ್ಮ ಹೃದಯಾಕಾಶದಲ್ಲಿ ಧ್ರುವ ನಕ್ಷತ್ರನಾಗಿ ನೆಲಸಿದ್ದಾನೆ. ಅದನ್ನು ಎಲ್ಲರೂ ತಿಳಿದು ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಲೆಂಬ ಸದಾಶಯದಿಂದ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರ ಶಾಖೆಯು ಈ ಕಿರುಹೊತ್ತಗೆಯನ್ನು ಪ್ರಕಟಿಸಿದೆ.

ಇಂತಹ ಅಲ್ಲಮಪ್ರಭುವಿನ ಈ ದಿವ್ಯ ಆದರ್ಶದ ಬಗ್ಗೆ ಕೊಡನೂರಿನಲ್ಲಿ ಪ್ರಸಾರಾಂಗದ ಆಶ್ರಯದಲ್ಲಿ ಮಾಡಿದ ಭಾಷಣದ ಆಧಾರದ ಮೇಲೆ ಈ ಕಿರುಹೊತ್ತಗೆಯನ್ನು ಜನತೆಗೆ ಸಲ್ಲಿಸಲು ಸದವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಪ್ರಸಾರಾಂಗದ ಅಧಿಕಾರಿ

ಗಳಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್.ಸಿ., ಅವರಿಗೂ ಮತ್ತು ಅವರ ಸಹಾಯಾಧಿಕಾರಿಗಳಾದ ಶ್ರೀ ನರಸಣ್ಣ, ಎಂ.ಎ., ಅವರಿಗೂ ನಾನು ತುಂಬ ಕೃತಜ್ಞನಾಗಿದ್ದೇನೆ. ವಿಶ್ವವಿದ್ಯಾನಿಲಯದ ಜ್ಞಾನಪ್ರಸಾರ ಕಾರ್ಯವನ್ನು ಉತ್ಸಾಹದಿಂದಲೂ, ಔದಾರ್ಯ ದಿಂದಲೂ, ನಿಷ್ಠೆಯಿಂದಲೂ ನೆರವೇರಿಸುತ್ತ ಜನತೆಗೆ ಬೆಳಕನ್ನು ನೀಡುತ್ತಿರುವುದರಿಂದ, ಇವರಿಗೆ ಅಲ್ಲಮಪ್ರಭು ಸುಖ ಶಾಂತಿ ಗಳನ್ನು ಅನುಗ್ರಹಿಸಲೆಂದು ಭಕ್ತಿಯಿಂದ ಪ್ರಾರ್ಥಿಸುತ್ತೇನೆ. ಅಲ್ಲಮಪ್ರಭುವಿನ ದಿವ್ಯ ಆದರ್ಶವು ಸಾಧಕರೆಲ್ಲರಿಗೂ ಜೀವನದಲ್ಲಿ ಶಕ್ತಿವಿಕಾಸವನ್ನುಂಟುಮಾಡಲೆಂದು ಬಯಸುತ್ತೇನೆ.

ಮಾನಸಗಂಗೋತ್ರಿ
ಮೈಸೂರು
೧೪–೬–೧೯೬೨

ಟಿ. ಜಿ. ಸಿದ್ಧಪ್ಪಾರಾಧ್ಯ

ವಿಷಯ ಸೂಚಿಕೆ

ಬಾಲ್ಯ

ಚಾಮರಸನು ಪ್ರಭುಲಿಂಗಲೀಲೆಯಲ್ಲೂ, ಹರಿಹರನು ಪ್ರಭು ದೇವರ ರಗಳೆಯಲ್ಲೂ ಅಲ್ಲಮಪ್ರಭುವಿನ ಚರಿತ್ರೆಯನ್ನು ಸುಂದರ ವಾಗಿ ಚಿತ್ರಿಸಿದ್ದಾರೆ. ಚಾಮರಸನ ದೃಷ್ಟಿಯಲ್ಲಿ ಅಲ್ಲಮಪ್ರಭು ಸಾಮಾನ್ಯ ವ್ಯಕ್ತಿಯಲ್ಲ; ಅವನು ಪರಶಿವನ ಅವತಾರ. ಸಾಕ್ಷಾತ್ ಶಿವರೂಪಿಯೆಂದು ಆತನನ್ನು ಶರಣರು ಜೀವಿತಕಾಲ ದಲ್ಲಿಯೇ ತಿಳಿದಿದ್ದರು. ವೀರಶೈವಧರ್ಮದ ಜೀರ್ಣೋದ್ಧಾರ ಕ್ಕಾಗಿ ಅವತರಿಸಿದ್ದ ಬಸವಾದಿ ಪ್ರಮಥರಿಗೆ ಬೆಂಬಲವಾಗಿ ನಿಂತು ಜ್ಞಾನಬೋಧೆಮಾಡಿದ ಮಹಾತ್ಮನಾತನು. ಆತನು ಶರಣರಲ್ಲೆಲ್ಲಾ ಅತ್ಯಂತ ಮೇಧಾವಿ, ವೈರಾಗ್ಯಶೀಲ ಮತ್ತು ದಿವ್ಯ ಜ್ಞಾನಸಂಪನ್ನ. ಬಸವಣ್ಣನು ಜನರ ಮನದಲ್ಲಿ ಭಕ್ತಿಯನ್ನು ಅರಳಿಸುವ ಮೂಲ ವಿಗ್ರಹವಾದರೆ, ಅಲ್ಲಮಪ್ರಭು ಆ ಭಕ್ತಿಗೆ ಪ್ರೇರಕನಾದ ಉತ್ಸವ ಮೂರ್ತಿಯಾಗಿದ್ದನು. ದೇಶದೇಶಗಳಲ್ಲಿ ನಿರಂಜನಜಂಗಮನಾಗಿ ಸಂಚರಿಸುತ್ತ ಅಲ್ಲಮನು ಮುಮುಕ್ಷುಗಳನ್ನು ಎಚ್ಚರಗೊಳಿಸಿದನು. ಅವನು ಸಾಧಿಸಿದ ಸಿದ್ಧಿ ಸೋಽಹಂಜ್ಞಾನ, ಉಪದೇಶಿಸಿದ ಮಾರ್ಗ ದಾಸೋಽಹಂಭಾವ. "ಸೋಽಹಂ ಎಂಬುದ ಕೇಳಿ ದಾಸೋಹಂ ಭಾವವನಾಚರಿಸದಿರ್ದೊಡೆ ಅತಿಗಳೆವೆ ಗುಹೇಶ್ವರ" ಎಂದು ಪ್ರಭು ಹೇಳಿರುವುದನ್ನು ನೋಡಿದರೆ ಜ್ಞಾನಕ್ರಿಯೆಗಳೆರಡೂ ಯೋಗಸಾಧನೆಗೆ ಆವಶ್ಯಕವೆಂದು 'ಭಾವಿಸಬೇಕಾಗುವುದು.

ಆತನ ವಚನಗಳನ್ನು ನೋಡಿದರೆ, ಆತನು ಮೊದಲಿನಲ್ಲೇ ಪರಿಪೂರ್ಣನೂ, ಜಿತಕಾಮನೂ, ವೈರಾಗ್ಯಮೂರ್ತಿಯೂ ಆಗಿ ಗೋಚರಿಸುತ್ತಾನೆ. ಆತನು ಪಕ್ವಸ್ಥಿತಿಗೆ ಬಂದ ಮೆಟ್ಟಲುಗಳು ನಮಗೆ ಕಾಣುವುದಿಲ್ಲ. ಕೈಲಾಸದಲ್ಲಿ ನಿರ್ಮಾಯನೆಂಬ ಶರಣ

ನೊಬ್ಬನು ಹೆಣ್ಣೊಂದನ್ನು ಕಾಮಿಸಿದ್ದಕ್ಕಾಗಿ ಶಾಪದಿಂದ ಭೂಲೋಕದಲ್ಲಿ ಅವತರಿಸಿ ಅಲ್ಲಮನೆನಿಸಿಕೊಂಡನು ಎಂದು ಹರಿಹರನು ತಿಳಿಸುತ್ತಾನೆ: ಅಲ್ಲಮನು ನಿರ್ಮಾಯನೆಂಬ ಶರಣನಲ್ಲ, ಅವನು ಪರಶಿವನ ನೇರವಾದ ಅವತಾರ ಎಂದು ಚಾಮರಸ ಹೇಳಿದ್ದಾನೆ. ಅಲ್ಲಮಪ್ರಭು ಕೃತ, ತ್ರೇತಾ, ದ್ವಾಪರಯುಗಗಳಲ್ಲಿ ಕ್ರಮವಾಗಿ ಸ್ಥೂಲಕಾಯ, ಶೂನ್ಯಕಾಯ, ಅನಿಮಿಷ ಎಂಬ ಅವತಾರಗಳನ್ನೆತ್ತಿದ್ದನೆಂದೂ, ಕಲಿಯುಗದಲ್ಲಿ ಪ್ರಭುವೆಂಬ ಜಂಗಮನಾಗಿ ಅವತರಿಸಿದನೆಂದೂ ಅವನ ವಚನವೇ ತಿಳಿಸುತ್ತದೆ. ಬಳ್ಳಿಗಾವಿಯಲ್ಲಿ ಅಲ್ಲಮನು ಹುಟ್ಟಿದನೆಂದು ಹರಿಹರನು ಹೇಳುತ್ತಾನೆ. ಪ್ರಭುಲಿಂಗಲೀಲೆಯಿಂದ ಇದು ಬನವಾಸಿಯ ಬಳಿ ಇದ್ದಿತೆಂದು ತಿಳಿದುಬರುತ್ತದೆ. ಬಳ್ಳಿಗಾವಿಯಲ್ಲಿ ವಾಸವಾಗಿದ್ದ ನಿರಹಂಕಾರ, ಸುಜ್ಞಾನಿ ಎಂಬ ಶಿವಭಕ್ತ ದಂಪತಿಗಳಿಗೆ ಅಲ್ಲಮನು ಮಗನಾಗಿ ಹುಟ್ಟುತ್ತಾನೆ. ದಂಪತಿಗಳೀರ್ವರೂ ಸಚ್ಚರಿತರಾದ ಶೈವ ಬ್ರಾಹ್ಮಣವಂಶಸ್ಥರೆಂದು ಶಿವತತ್ತ್ವಚಿಂತಾಮಣಿ ತಿಳಿಸುತ್ತದೆ. ಇವರ ಹೆಸರುಗಳು ತಿಳಿಸುವಂತೆಯೇ ಇವರು ವಿನೀತರೂ, ವಿವೇಕಿಗಳೂ, ಭಕ್ತಿಮಂತರೂ ಆಗಿದ್ದರು. ನಿರಹಂಕಾರ ಸುಜ್ಞಾನಿಗಳಿಗೆ ಮಗನಾಗಿ ಜನಿಸಿದವನು ನಿರಹಂಕಾರಸ್ಥಿತಿ ಮತ್ತು ದಿವ್ಯಜ್ಞಾನಗಳಿಂದ ಕೂಡಿ ಶೋಭಿಸುವುದು ಸಹಜವೇ ಆಗಿದೆ. ಹುಟ್ಟಿದ ಶಿಶು ಕೈಯಲ್ಲಿ ಲಿಂಗವನ್ನು ಹಿಡಿದು ಅದರಲ್ಲಿಯೇ ದೃಷ್ಟಿ ನೆಟ್ಟಿದ್ದುದನ್ನು ತಾಯಿತಂದೆಗಳು ಕಂಡು ಆಶ್ಚರ್ಯಗೊಂಡರು. ಅವರು ಆ ಲಿಂಗವನ್ನು ತೆಗೆದು ಬಂಗಾರದ ಸೆಜ್ಜೆಯಲ್ಲಿ ಮೂರ್ತಿಗೊಳಿಸಿ ಪೂಜಿಸುತ್ತಿದ್ದರೆಂದು ಎಳಂದೂರು ಹರೀಶ್ವರರು ಪ್ರಭುದೇವಪುರಾಣದಲ್ಲಿ ತಿಳಿಸಿದ್ದಾರೆ. ಅಂತೂ ಶಿಶು ಕಣ್ತೆರೆಯುವಾಗ್ಗೆ ಲಿಂಗದಂಘ್ರಿಯಲ್ಲಿ ದೃಷ್ಟಿಯಿಟ್ಟು, ದೇಹದ ಜಾಡ್ಯ ಜಂಜಾಟ

ಗಳಿಗಂಟದೆ, ಅವೆಲ್ಲವನ್ನೂ ತಾನು ಅಲ್ಲವೆನಿಸುವಷ್ಟು ಧೀರನೂ ಪ್ರಶಾಂತನೂ ಆಗಿ ಕಂಡದ್ದರಿಂದ ಶಿಶುವಿಗೆ ಅಲ್ಲಮನೆಂದು ನಾಮಕರಣವಾಗುತ್ತದೆ.

ಮಗುವಿಗೆ ಏಳುವರ್ಷವಾಗಲು ವೇದಾಗಮಪುರಾಣಶಾಸ್ತ್ರಗಳು ನೆನೆದಾಕ್ಷಣಕ್ಕೆ ಅನುಭವಕ್ಕೆ ಬಂದವೆಂದು ಚಾಮರಸ ಹರೀಶ್ವರರು ಹೇಳಿದ್ದಾರೆ. ಈ ಕಾಲದಲ್ಲಿ ತಂದೆಯೊಡನೆ ಅಲ್ಲಮನು ದೇವಾಲಯಕ್ಕೆ ಹೋಗುತ್ತಿದ್ದು, "ಅಲ್ಲಿ ಇರುವ ದೇವನು ಈ ದೇಹದಲ್ಲಿ ಏಕೆ ಇರಬಾರದು? ಸರ್ವವ್ಯಾಪಿಯಾದವನು ಈ ದೇವಾಲಯದಲ್ಲಿ ಮಾತ್ರವೇ ಇರುವನೆಂದು ನಂಬುವುದು ಹೇಗೆ? ಜೀವನದಲ್ಲಿ ಒದಗಬಹುದಾದ ವಿಪತ್ಪರಂಪರೆಗಳನ್ನು ತಪ್ಪಿಸಲು ದೇವಾಲಯದ ದೇವನು ಹೇಗೆ ನಮಗೆ ನೆರವಾಗಬಲ್ಲನು? ಆದ್ದರಿಂದ ನಮ್ಮನ್ನು ರಕ್ಷಿಸಲು ದೇವನು ಈ ದೇಹದಲ್ಲಿಯೂ ನಮ್ಮೊಡನೆ ಇರಲಿಕ್ಕೇಬೇಕು" ಹೀಗೆ ಆಲೋಚಿಸುತ್ತ ಅಲ್ಲಮನು ಶಿವನು ತನ್ನಲ್ಲಿಯೇ ನೆಲಸಿರುವನೆಂದು ತಿಳಿಯತೊಡಗಿದನು. ತನ್ನಲ್ಲಿ ದೇವನಿರುವನೆಂದು ತಿಳಿದಮೇಲೆ ತಾನೇ ಆ ದೇವನೆಂಬ ಅರಿವೂ ಕ್ರಮಕ್ರಮವಾಗಿ ಅವನಿಗೆ ಅನುಭವಕ್ಕೆ ಬಂದಿರಬೇಕು. ಈ ಅರಿವು ಪ್ರಭುವಿಗೆ ಒಮ್ಮೆ ಉಂಟಾಗಲಿಲ್ಲ. ಇದಕ್ಕೆ ಅನೇಕ ವಿಘ್ನಗಳು ಸಂಭವಿಸಿದುವು. ಅವನು ಅವನ್ನು ಧೈರ್ಯದಿಂದ ಎದುರಿಸಬೇಕಾಯಿತು. ಹರಿಹರನ ಪ್ರಕಾರ ಅಲ್ಲಮನು ಯುವಕನಾದಮೇಲೆ ಬಳ್ಳಿಗಾವಿಯಲ್ಲಿ ಕಾಮಲತೆ ಎಂಬುವಳನ್ನು ಪ್ರೀತಿಸಿ ಅವಳೊಡನೆ ಸುಖವಾಗಿ ಹಲವು ವರ್ಷಗಳ ಕಾಲ ಸಂಸಾರಮಾಡಿಕೊಂಡಿದ್ದನು. ಅವಳು ಜ್ವರ ಬಂದು ಸತ್ತಮೇಲೆ ಅವನು ಮನದೊಳಗೆ ಅತಿವಿರಕ್ತಿಯನ್ನು ಹೊಂದಿ, ಭೂಗರ್ಭದ ಶಿವಾಲಯದಲ್ಲಿದ್ದ ಅನಿಮಿಷಯೋಗಿಯಿಂದ ಶಿವಲಿಂಗವನ್ನು ಪಡೆದು—ಲಿಂಗ

ಒಯ್ಯುವ ಕಡೆಗೆ ಅವನು ಹೋಗಲಾರಂಭಿಸುವನು. ಹೀಗೆ ಅಲ್ಲಮನು ದಟ್ಟವಾದ ಅರಣ್ಯವನ್ನು ಪ್ರವೇಶಿಸಿ ಅದೆಷ್ಟುಕಾಲ ತಪಸ್ಸುಮಾಡಿದನೋ, ಎಷ್ಟು ಯೋಗಿಗಳನ್ನು ಸಂದರ್ಶಿಸಿದನೋ, ತನ್ನ ಯೋಗಸಾಧನೆಯಲ್ಲಿ ಯಾರು ಯಾರಿಂದ ಎಷ್ಟೆಷ್ಟು ಫಲ ಪಡೆದನೋ ಅವೊಂದೂ ನಮಗೆ ಯಾವ ಮೂಲದಿಂದಲೂ ಎಳ್ಳಷ್ಟೂ ತಿಳಿಯಬರುವುದಿಲ್ಲ. ಅವನ ಜೀವಮಾನದ ಈ ಘಟ್ಟವು ಬಹಳ ಗೋಪ್ಯವೂ, ಗಹನವೂ, ಗಂಭೀರವೂ ಆಗಿರುವುದು. ಅವನ ಸಿದ್ಧಿಯಂತೂ ಪರಿಪೂರ್ಣವೂ, ವಿಶಾಲವೂ ಆದುದು. ಆತನಲ್ಲಿ ಸಂಕಲ್ಪಸಿದ್ಧಿ ಮಹತ್ತಾಗಿ ಇದ್ದಿತು, ಹಾಗೆಯೇ ನಿಗ್ರಹಾನುಗ್ರಹಶಕ್ತಿಯೂ ವಿಶೇಷವಾಗಿತ್ತು. ಆದ್ದರಿಂದ ಸಾಧನೆ ಎಲ್ಲವೂ ಅಂತರಂಗದಲ್ಲಿ ನಡೆದು ಬೇಗನೆ ಆತನು ಜ್ಞಾನದ ಗಣಿಯಾದನು.

"ನಾನೆಂಬ ಅಹಂಕಾರದಲ್ಲಿ ನಾನುಂಡೆನಾದರೆ ನನಗದೇ ಭಂಗ; ಸ್ತುತಿನಿಂದೆಗೆ ನೊಂದೆನಾದೊಡೆ ಅಂಗೈಯಲ್ಲಿರ್ಪ ಗುಹೇಶ್ವರ ಲಿಂಗಕ್ಕೆ ದೂರ" ಎಂದು ಅವನು ಹೇಳಿರುವುದನ್ನು ನೋಡಿದರೆ, ಅವನು ಅದ್ವಿತೀಯವಾದ ಒಂದು ದಿವ್ಯಶಕ್ತಿ, ಮಹಾಚೇತನ ಮತ್ತು ಪರಿಪೂರ್ಣವ್ಯಕ್ತಿ ಎಂಬ ಅರಿವು ನಮಗಾಗುವುದು. ದೇಹ ಸಂಬಂಧವಾದ ಪ್ರಾಕೃತ ಅಹಂಕಾರವನ್ನು ಜಯಿಸಿ ಪರಾಹಂತಾ ಸ್ಥಿತಿಯಲ್ಲಿ ನಿರಭಿಮಾನದಿಂದ ನಿಂತ ಮಹಾತ್ಮನಾತನು ಎಂಬ ಬಗ್ಗೆ ಯಾರಿಗೂ ಯಾವ ಸಂಶಯವೂ ತೋರುವುದಿಲ್ಲ. ಆದ್ದರಿಂದಲೇ ಅವನು ಪ್ರಭುಪದವಿಯನ್ನು ಜೀವನದ ಆರಂಭದಲ್ಲಿಯೇ ಪಡೆದಿರಬೇಕು. ಸರ್ವ ಜೀವಿಗಳ ಮೇಲೆ ಉನ್ನತವಾದ ಪರಿಣಾಮ ಪ್ರಭಾವಗಳನ್ನು ಬೀರುವ ಸಾಮರ್ಥ್ಯ ಅವನಲ್ಲಿ ಸಹಜವಾಗಿ ಹುಟ್ಟಿ ಬೆಳದಿರಬೇಕು. ಆದರೂ ಅವನು ಈ ಮಟ್ಟಕ್ಕೇರಲು ಕೈಕೊಂಡ ಸಾಧನಮಾರ್ಗ ಎಂತಹದಿರಬೇಕೆಂಬ ಕುತೂಹಲ ನಮಗೆ

ಸಹಜವಾಗಿ ಉಂಟಾಗುತ್ತದೆ. ಆದರೆ, ಈಗ ನಮ್ಮಲ್ಲಿರುವ ಕಾವ್ಯಗಳಿಂದ ಇದಕ್ಕೆ ಸಮಾಧಾನ ನಮಗೆ ದೊರೆಯುವುದಿಲ್ಲ. ಇವೆಲ್ಲವೂ 'ಅವನೊಬ್ಬ ಕೇವಲ ಅಸಾಧಾರಣ ವ್ಯಕ್ತಿ; ಲೀಲೆಗಾಗಿಯೇ ಈ ಪ್ರಪಂಚಕ್ಕೆ ಇಳಿದುಬಂದವನು' ಎಂಬ ಭಾವನೆಯನ್ನು ನಮಗೆ ಹುಟ್ಟಿಸುತ್ತವೆ. ಇದರಿಂದ ಅಲ್ಲಮನ ವ್ಯಕ್ತಿತ್ವದ ಸ್ವಾರಸ್ಯವೇ ನಮಗೆ ಅಷ್ಟಾಗಿ ತಿಳಿಯುವುದಿಲ್ಲ. ಅವನ ವಚನಗಳನ್ನು ನೋಡಿದರೆ ಅವನು ಹುಟ್ಟುತ್ತಲೇ ಸಿದ್ಧನಾದವನೆಂದು ಹೇಳಲಾಗುವುದಿಲ್ಲ. ಅವನು ಮಹಾತ್ಮನಾದುದರಿಂದ ಹಿಂದಿನ ಜನ್ಮಗಳ ಸ್ಮರಣೆಯೂ ಅವನಿಗಿದ್ದಿತ್ತು. ಕಲಿಯುಗದಲ್ಲಿ ಪ್ರಭುವೆಂಬ ಜಂಗಮನಾಗಿ ಅವತರಿಸಿರುವುದಾಗಿ ಅವನೇ ಹೇಳಿದ್ದಾನೆ. ಆದರೂ ಸ್ವಸಾಮರ್ಥ್ಯದಿಂದ ಆಧ್ಯಾತ್ಮಿಕ ತೇಜಸ್ಸನ್ನೂ, ಅದ್ವಿತೀಯ ಶಕ್ತಿಯನ್ನೂ ಅವನು ಪಡೆದಿರುವುದಾಗಿ ಅವನ ವಚನಗಳಿಂದ ನಮಗೆ ತಿಳಿದುಬರುತ್ತದೆ. ಅವನು ಎಲ್ಲರಂತೆ ಲೋಕದಲ್ಲಿ ಹುಟ್ಟಿ, ಎಲ್ಲರೊಡನೆ ಬಾಳಿ ಬದುಕಿ—ಈ ಬದುಕಿನ ಮೂಲಕವೇ ಇದರಾಚೆಯ ನಿತ್ಯಜೀವನವನ್ನು ಕಂಡುಕೊಂಡು ಮಹಾತ್ಮನಾದವನು; ಎಲ್ಲರಂತೆ ಕತ್ತಲೆಯಲ್ಲಿ ಪರದಾಡುತ್ತಲೇ ಬೆಳಕನ್ನು ಕಂಡವನು; ಸ್ವಸಾಮ್ಯರ್ಥದಿಂದ ಜೀವನದಲ್ಲಿ ವಿಕಾಸಸ್ಥಿತಿಯನ್ನು ಅನುಭವಿಸಿದವನು. ಮೃತ್ಯುವಿನಿಂದ ಅಮೃತದೆಡೆಗೆ ಏರಿ, ತಾನು ಮಾತ್ರವಲ್ಲದೆ ಮಾನವಸಮಾಜವನ್ನೇ ತನ್ನೊಡನೆ ಒಯ್ಯಲು ಹವಣಿಸಿದ ಅಸಾಮಾನ್ಯವೂ, ಅದ್ಭುತವೂ ಆದ ಶಕ್ತಿ ಅಲ್ಲಮ ಪ್ರಭುವೆನಿಸಿ ಲೋಕದಲ್ಲಿ ಲೀಲೆಯನ್ನು ನಡೆಸಿರುವುದು.

ಮಾಯೆಯ ತಿರಸ್ಕಾರ

“ಎಸೆಯದಿರು ಎಸೆಯದಿರು ಕಾಮ, ನಿನ್ನ ಬಾಣ ಹುಸಿಯುಲೇಕೋ? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಇವು ಸಾಲದೇ ನಿನಗೆ? ಗುಹೇಶ್ವರ ಲಿಂಗದ ವಿರಹದಲ್ಲಿ ಬೆಂದವರ ಮರಳಿ ಸುಡಲುಂಟೆ, ಮರುಳ ಕಾಮ” ಎಂದು ಪ್ರಭು ಹೇಳಿರುವುದನ್ನು ನೋಡಿದರೆ ಯೌವನಕಾಲದಲ್ಲಿ ಅವನು ಕಾಮನಿಗ್ರಹಕ್ಕಾಗಿ ಬಹಳ ವ್ಯಥೆಪಟ್ಟಿರುವುದಾಗಿ ತಿಳಿದುಬರುತ್ತದೆ. ಅವನಿಗೆ ಮದುವೆಯ ವಯಸ್ಸು ಸಂಭವಿಸಿದಾಗ ತಾಯಿತಂದೆಗಳು ಅವನಿಗೆ ಮದುವೆಮಾಡಲು ಬಹಳವಾಗಿ ಹೆಣಗಾಡಿರಬೇಕು. ಆಗ ಪ್ರಭು ಕಾಮನ ಬಾಧೆಯಿಂದ ಪಾರಾಗಲು ಪರಮೇಶ್ವರನಿಗೆ ಶರಣಾಗತನಾಗಿ ಅವನ ದರ್ಶನಕ್ಕಾಗಿ ಮನೆಯಿಂದ ಹೊರಟಿರಬೇಕು. ಒಂದು ಹೆಣ್ಣನ್ನು ಮದುವೆಯಾಗಿ ಅವಳೊಡನೆ ಸುಖಪಡುವುದಕ್ಕಿಂತ ಈಶ್ವರನೊಡನೆ ಬಾಳುವುದೇ ಅವನಿಗೆ ಹೆಚ್ಚಿನ ಸುಖವೆಂದು ತೋರಿರಬೇಕು. ಈಶ್ವರನು ಅಖಂಡ ಪರಿಪೂರ್ಣಾನಂದನೆಂಬ ಅಂಶವನ್ನು ಪ್ರಭು ತಿಳಿದು, ಲೋಕದ ಅಲ್ಪಸುಖವನ್ನು ಸಂತೋಷದಿಂದ ತೊರೆಯುವನು. ಈಶ್ವರ ದರ್ಶನಕ್ಕಾಗಿ ಮನೆಬಿಟ್ಟು ಹೊರಟವನು ಹಸಿವು, ಬಾಯಾರಿಕೆ, ಮಾನ, ಅಪಮಾನ, ಸ್ತುತಿ ನಿಂದೆಗಳನ್ನು ಸಹಿಸಿಕೊಂಡು, ಹೊಟ್ಟೆಬಟ್ಟೆಗಳಿಗಾಗಿ ಯಾರನ್ನೂ ಕಾಡದೆ ಬೇಡದೆ, ಇದ್ದಷ್ಟರಲ್ಲಿ ತೃಪ್ತಿಹೊಂದುತ್ತ ಕೆಲವುಕಾಲ ಸಂಚರಿಸಿರಬೇಕು. ಆ ಬಗೆಯ ಸಂಚಾರವೇ ಅವನಿಗೆ ಉತ್ತಮ ಶಿಕ್ಷಣವನ್ನು ದೊರಕಿಸಿ, ಅವನ ಅಹಂಕಾರಮಮಕಾರಗಳನ್ನು ತೊಲಗಿಸಿರಬೇಕು. ಲೋಕದ ತಿರಸ್ಕಾರ ಅವನ ಹಮ್ಮು ಅಭಿಮಾನಗಳನ್ನು ತೊಲಗಿಸಿದಂತೆ, ಲೋಕದ ಪುರಸ್ಕಾರ ಅವನ ಆತ್ಮ

ವಿಶ್ವಾಸ ಮತ್ತು ನಿಶ್ಚಯಜ್ಞಾನಗಳನ್ನು ಹೆಚ್ಚಿಸಿರಬೇಕು. ಹೀಗೆ ಲೋಕಯಾತ್ರೆಯೇ ಅವನಿಗೆ ಉನ್ನತಮಟ್ಟದ ಸಾಧನಮಾರ್ಗ ವಾಯಿತು.

ಯಾತ್ರೆಯ ಆರಂಭದಲ್ಲಿ ಪ್ರಭು ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಮಧುಕೇಶ್ವರನ ದರ್ಶನಕ್ಕಾಗಿ ಹೋಗುವನು. ಅಲ್ಲಿ ಅವನಿಗೆ ಒಂದು ಹೊಸ ಸಂಘಟನೆ ಸಂಭವಿಸುವುದು. ಆ ಊರಿನ ರಾಜ ಮಮಕಾರ–ಅವನ ಪಟ್ಟದರಸಿ ಮೋಹಿನಿ–ಇವರ ಮಗಳು ಮಾಯಾದೇವಿ ತನಗೆ ಮಧುಕೇಶ್ವರನೇ ಯೋಗ್ಯನಾದ ವರನೆಂದು ಭಾವಿಸಿ ಅವನನ್ನು ಒಲಿಸಿಕೊಳ್ಳಲು ಅವನ ಅರ್ಚನೆ ಯಲ್ಲಿ ತೊಡಗಿರುವಳು. ಅರ್ಚನೆ ಮುಗಿದಮೇಲೆ ಮಾಯಾದೇವಿ ಮಧುಕೇಶ್ವರನನ್ನು ಮೆಚ್ಚಿಸಲಿಕ್ಕಾಗಿ ಭರತನಾಟ್ಯವನ್ನು ಅಭಿನಯಿ ಸುವಳು. ಇಂಪಾದ ವೀಣಾಧ್ವನಿ ಮತ್ತು ಮೃದಂಗ ಮೊದಲಾದ ವಾದ್ಯಗಳ ಜೊತೆಗೆ ಮಾಯಾದೇವಿಯ ಕಾಲಿನ ಗೆಜ್ಜೆಗಳ ಮಂಜುಳ ಶಬ್ದವೂ ಕೇಳಿಬರುತ್ತಿತ್ತು. ಪ್ರಭುವಿಗೆ ಈ ಸಮಯದಲ್ಲಿ ತಾನೂ ಸ್ವಲ್ಪ ಆಟವಾಡಿ ಈಶ್ವರನನ್ನು ಮೆಚ್ಚಿಸಬೇಕೆನ್ನಿಸಿತು. ಆಗ ಪ್ರಭು ತಾನು ಮನೆಯಿಂದ ತನ್ನೊಡನೆ ತಂದಿದ್ದ ಮದ್ದಳೆಯನ್ನು ಮೃದಂಗಶಬ್ದಕ್ಕನುಗುಣವಾಗಿ ಬಾರಿಸುತ್ತ ಆವೇಶದಿಂದ ಕುಣಿಯ ತೊಡಗಿದನು. ಈ ಅನೀರಿಕ್ಷಿತವಾದ ಮದ್ದಳೆಯ ಶಬ್ದದಿಂದ ಅಲ್ಲಿ ಸೇರಿದ್ದ ಜನರೆಲ್ಲರೂ ಚಕಿತರಾದರು. ಮಾಯೆ ಚಿತ್ರದಲ್ಲಿ ಬರೆದ ಗೊಂಬೆಯಂತೆ ನಿಂತು ಮದ್ದಳೆಯ ಶಬ್ದವನ್ನು ಆಲಿಸಿದಳು. ಆತನನ್ನು ಒಳಕ್ಕೆ ಕರೆಯಿಸಿ ನೋಡಿದ ಕೂಡಲೆ ಆಕೆ ಅವನನ್ನು ಮೋಹಿಸತೊಡಗಿದಳು. ಆಕೆಯ ಸ್ಥಿತಿಯನ್ನು ಕಂಡ ಸಖಿಯರು ಅಲ್ಲಮನನ್ನು ಸುತ್ತಿಕೊಂಡು "ನೀನು ಯಾವ ದೇಶದವನು, ನಿನಗಾವ ಹೆಸರು, ನೀನೀರುವ ಸ್ಥಳ ಯಾವುದು" ಎಂದು ಅವ

ನನ್ನು ವಿನಯದಿಂದ ಕೇಳಿದರು. ಅಲ್ಲಮನು ನಸುನಗುತ್ತ "ದೇಶ ವೆಮ್ಮದು ಹೇಳುವಡೆ ಪರದೇಶ, ಬಿರುದಿನ ಬಿಂಕಕಾರರ ವಾಸಿಗ ರನು ಅಲ್ಲೆನಿಸುವ ಅಲ್ಲಮನೆಂಬ ಪೆಸರೆನಗೆ. ಲೇಸುಮಾಡುವ ಠಾವುಗಳಲ್ಲಿ ಅಭಿಲಾಷೆಯಿಲ್ಲದೆ ಹೊದ್ದುವೆವು, ಸುಖವಾಸಿಗಳು ನಾವು" ಎಂದು ಉತ್ತರಕೊಡುವನು. ಸಖಿಯರು ಸಂತೋಷ ಪಟ್ಟು "ಒಳ್ಳಿತಾಯಿತು ಕಾರ್ಯ. ನೀನು ಇನ್ನು ಅಲ್ಲಿಗಲ್ಲಿಗೆ ಹೋಹಬುದ್ಧಿಯ ಸಲ್ಲವಿಡು, ಸುಖದಿಂದಲೆಮ್ಮೊಡತಿಯ ಸಮೀಪದಲಿ ಎಮ್ಮೆಲ್ಲರೋಪಾದಿಯಲಿ ಮನಬಂದಲ್ಲಿ ನೀನಿ ಹುದು" ಎಂದು ಹೇಳಿದರು. ಈ ಅನಿರೀಕ್ಷಿತವಾದ ಘಟನೆಯಿಂದ ಮುಂದೇನಾಗುವುದೋ ನೋಡೋಣವೆಂದು ಅಲ್ಲಮನು ಇದಕ್ಕೆ ಸಮ್ಮತಿಸಿದನು. ಬಳಿಕ ಮಾಯೆ ಅಲ್ಲಮನನ್ನು ಕರೆದೊಯ್ದು ತಂದೆಗೆ ತೋರಿಸಿ ಅವನ ಅನುಮತಿಯಂತೆ ಅವನನ್ನು ನಾಟ್ಯಾ ಚಾರ್ಯನನ್ನಾಗಿ ನೇಮಿಸಿಕೊಂಡಳು.

ಅಲ್ಲಮನಿಗೆ ಅಂತಃಪುರದ ಒಂದು ಕಡೆಯಲ್ಲಿಯೇ ಬಿಡಾರ ವಾಯಿತು. ಅವನನ್ನು ನೋಡಿದಮೇಲೆ ಮಾಯೆ ವಿರಹವ್ಯಥೆ ಯಿಂದ ದಿನದಿನಕ್ಕೆ ಕೃಶಳಾಗತೊಡಗಿದಳು. ಭರತನಾಟ್ಯದ ವಿವರಗಳನ್ನು ತಿಳಿಯುವ ನೆಪದಿಂದ ಆಕೆ ಅಲ್ಲಮನ ಬಳಿಸಾರಿ ಅವನನ್ನು ಮಾತನಾಡಿಸುವಳು. ಅವನ ಚಿಂತನೆಯಲ್ಲಿಯೇ ಕಾಲಕಳೆಯುತ್ತ, ಅವನೊಡನೆ ಸಮಾಗಮಕ್ಕಾಗಿ ಕಾತರಪಡು ತ್ತಿರುವ ಮಾಯೆಯ ಸ್ಥಿತಿ ಚಿಂತಾಜನಕವಾಯಿತು. ಅವಳ ವರ್ತನೆಯಲ್ಲಿ ಆದ ಬದಲಾವಣೆಯನ್ನು ಗಮನಿಸಿ ಸಖಿಯರು ಅವಳ ಇಚ್ಛೆಯಂತೆ ಮಾಯೆ ಅಲ್ಲಮ ಇವರಿಬ್ಬರೂ ಒಂದೆಡೆಗೆ ಸಂಧಿಸುವ ಏರ್ಪಾಟು ಮಾಡಿದರು. ಅದರಂತೆ ಒಂದು ರಾತ್ರಿ ಅವರಿಬ್ಬರೂ ಒಂದೆಡೆ ಸೇರುವರು. ಆದರೆ ಅಲ್ಲಮನು ಮಾಯೆಗೆ

ವಶನಾಗದೆ ನಿರ್ಲಿಪ್ತನಾಗಿರುವುದನ್ನು ಕಂಡು ಮಾಯೆ ಶೋಕ ಪಡುವಳು. ಅಲ್ಲಮನು ದೃಢನಿರ್ಧಾರದಿಂದ ಮಾಯೆಯ ಬಯಕೆಯನ್ನು ತಿರಸ್ಕರಿಸುವನು. ನಾಟ್ಯವನ್ನು ಕಲಿಸಬೇಕೆಂದು ತನ್ನನ್ನು ಅರಮನೆಗೆ ಬರಮಾಡಿಕೊಂಡು ಮಾಯೆ ಹೀಗೆ ಕಾಮ ವಶಳಾದುದಕ್ಕೆ ಅಲ್ಲಮನು ಬೇಸರಗೊಳ್ಳುವನು. ಮಾಯೆ ನಿರಾಶಳಾಗಿ ಹಿಂದಕ್ಕೆ ಸರಿಯಬೇಕಾಯಿತು. ಅಲ್ಲಮನು ಮಾಯೆಯ ಬಯಕೆಗೆ ಆಶ್ಚರ್ಯಪಡುತ್ತ ಸದಮಲಸ್ವರೂಪವು ಮಾಯೆಗೆ ಕಾಣಿಸದೆಂದು ಸಾರುತ್ತ ಮದ್ದಳೆಯನ್ನು ಬಿಸಾಡಿ ನಗುತ್ತ ಅರಮನೆಯಿಂದ ತೆರಳುವನು. ಮಾಯೆ ಶೋಕಸಂತಪ್ತ ಳಾಗಿ ದೈನ್ಯದಿಂದ ಸಖಿಯಾದ ವಿಮಲೆಯೊಡನೆ ಅಲ್ಲಮನನ್ನು ಹುಡುಕಲು ಹೊರಟಳು.

ಅವರಿಬ್ಬರೂ ಅರಣ್ಯವನ್ನು ಪ್ರವೇಶಿಸಿ ಕಲ್ಲುಮುಳ್ಳುಗಳ ದಾರಿ ಯಲ್ಲಿ ನಡೆದು ಬಿಸಿಲು ಸುಂಟರಗಾಳಿಗೆ ಸಿಕ್ಕಿ ಬಳಲಿ ಬೆಂಡಾಗಿ ಬರುತ್ತಿದ್ದರು. ಮಾಯೆಯನ್ನು ಕಂಡು ತಪಸ್ವಿಗಳು ಹುಲಿಗಂಡ ಹುಲ್ಲೆಗಳಂತೆ ದೆಸೆದೆಸೆಗೆ ಎದ್ದೋಡಿದರು. ಅಲ್ಲಮನು ಋಷಿಗಳ ಸ್ಥಿತಿಗೂ ಮಾಯೆಯ ಕಷ್ಟಕ್ಕೂ ಮರುಗುತ್ತ ಕಾಣಿಸಿಕೊಳ್ಳುವನು. ಆಗ ವಿಮಲೆ ಅವನನ್ನು ಪ್ರಶ್ನಿಸತೊಡಗಿದಳು. “ಲೇಸುಮಾಡಿದೆ ಯಯ್ಯಾ, ಮಾಯೆಯನು ಈಸುದಿನ ಮನವೊಲಿಸಿ, ಕಡೆಯಲಿ ಘಾಸಿಮಾಡುವುದು ಉಚಿತವೇ ನಿನಗೆ ?” ಎಂದು ವಿಮಲೆ ಕೇಳುವಳು. ಆಗ ಅಲ್ಲಮನು “ಆರು ಮೊದಲಲಿ ಬಯಸ ಹೇಳಿದರು? ಆರು ಕಾಣುತ್ತ ಕರೆಸಹೇಳಿದರು? ಆರು ತನ್ನನು ಬಳಿಕ ಉದಾಸೀನ ಮಾಡಹೇಳಿದರು? ನಾರಿಯರಿಗಿದು ಸಹಜ. ತನ್ನ ತಾನೇ ದೂರಿದೊಡೆ ಆನೇನ ಮಾಡುವೆ? ” ಎಂದು ಉತ್ತರ ಕೊಟ್ಟನು. ಹೀಗೆ ಅಲ್ಲಮನಿಗೂ ವಿಮಲೆಗೂ ವಾಗ್ವಾದ

ನಡೆಯುವುದು. ತನ್ನದೇನೂ ತಪ್ಪಿಲ್ಲವೆಂದು ಅಲ್ಲಮನು ಹೇಳಿಬಿಡುವನು. ಮಾಯೆ ಕೋಪದುಃಖಗಳಿಂದಲೂ, ಪ್ರೇಮದ ಭರವಸೆಯಿಂದಲೂ ಹೀಗೆ ಮಾತನಾಡುವಳು. "ಅಯ್ಯಾ ಧೂರ್ತ, ನಿನ್ನನ್ನು ನಂಬಿದುದಕ್ಕೆ ಒಳ್ಳೆಯದನ್ನು ಮಾಡಿದೆ? ಬಳಿಕ ಮತ್ತೇನಾಗಬೇಕು? ನೀನು ಇಷ್ಟು ಮೋಸಗಾರನೆಂದು ನಾನು ಮೊದಲು ತಿಳಿದಿರಲಿಲ್ಲ" ಎಂದು ಮಾಯೆ ಹೇಳುವಳು. ಅದಕ್ಕೆ ಅಲ್ಲಮನು ಸ್ಥಿರಚಿತ್ತನಾಗಿ ಉತ್ತರಕೊಡುವನು. "ಈ ಕೆಟ್ಟ ಗುಣಗಳೆಲ್ಲವೂ ನನ್ನಲ್ಲಿರುವುವೋ, ನಿನ್ನಲ್ಲಿರುವುವೋ ಎಂಬುದನ್ನು ಹರಿಬ್ರಹ್ಮಾದಿಗಳಿಂದಲೂ, ಸಿದ್ಧಸಾಧಕರಿಂದಲೂ ತಿಳಿಯೋಣ" ಎಂದು ಅಲ್ಲಮನು ಹೇಳುವನು. ಅದಕ್ಕೆ ಮಾಯೆ "ಹರಿಯುನೆದೆಯನ್ನು ಮೆಟ್ಟಿದೆನು, ಶಂಕರನ ಅರ್ಧಾಂಗದೊಳು ವ್ಯಾಪಿಸಿರುವೆನು. ಬ್ರಹ್ಮನ ಬಾಯ ಮುದ್ರಿಸಿದೆ. ಉಳಿದ ದೇವ ದಾನವ ಮಾನವರೆಲ್ಲರೂ ನನಗೆ ಶರಣುಹೊಕ್ಕಿರುವರು. ಅಲ್ಪಮತಿಗಳಾದ ಸಿದ್ಧಸಾಧಕರು ಯಾರೂ ನನ್ನೆದುರಿಗೆ ನಿಲ್ಲಲಾರರು. ನಾ ಮುನಿದರೆ ಎಂತಹ ಯೋಗಿಗಳೂ ಎದೆಗುಂದುವರು. ಕಾನನದ ಮರುಳರನು ಏನ ಕೇಳುವೆ ?" ಎಂದು ಹೇಳುತ್ತ ತನ್ನ ಪ್ರತಾಪವನ್ನು ಕೊಚ್ಚಿಕೊಳ್ಳುವಳು. "ಹರಿಹರಬ್ರಹ್ಮಾದಿಗಳನ್ನೆಲ್ಲರನ್ನೂ ನಿನ್ನ ಅಧೀನದಲ್ಲಿರಿಸಿಕೊಂಡು ಕಾಡಿಸುತ್ತಿರುವೆನೆಂದು ನೀನು ನುಡಿಯುತ್ತಿರುವೆ ಮರುಳೆ, ಈಗ ನಿನ್ನನ್ನು ನಾನಾ ಪರಿಯಲ್ಲಿ ಓಡಾಡಿಸುತ್ತಿರುವವರು ಯಾರು? ನನಗೆ ಇಚ್ಛೆ ಇಲ್ಲದಿದ್ದರೂ ನೀನು ನನ್ನನ್ನು ಅರಸಿಕೊಂಡು ಅಲೆಯಲು ಕಾರಣವೇನು? ನೀನಿದನ್ನು ಪರೀಕ್ಷಿಸದೆ ಗರ್ವದಲ್ಲಿ ಹೀಗೆ ನುಡಿಯಬಹುದೆ?" ಎಂದು ಅಲ್ಲಮನು ಕೇಳುವನು. "ಯಾರನ್ನು ಯಾರು ಆಡಿಸುವರು ಎಂಬುದನ್ನು ಬಲ್ಲವರು ಯಾರು? ಸಾಕು,

ಬರಿಯ ವಿಚಾರ ಹಾಗಿರಲಿ. ನೀನು ನನ್ನೊಡನೆ ಬರಿಯ ಮಾತನಾಡುತ್ತಿದ್ದರೆ ನನ್ನ ಸಂಕಲ್ಪ ಈಡೇರಲಾರದು ; ನಿನ್ನ ಧೂರ್ತವಿಕಾರವೆಲ್ಲವನ್ನು ಬಿಟ್ಟು ನನ್ನ ಮೇಲೆ ಕೃಪೆಮಾಡು, ಪ್ರಭುವೇ" ಎಂದು ಬೇಡಿದಳು. "ನಿನ್ನ ಕೋರಿಕೆ ಈಡೇರ ಲಾಗದು. ನೀನು ಹಿಂತಿರುಗು" ಎಂದು ಅಲ್ಲಮನು ತನ್ನ ದೃಢನಿಶ್ಚಯವನ್ನು ತಿಳಿಸಿ ಮಾಯೆಯನ್ನು ತಿರಸ್ಕರಿಸುವನು. ಆಗ ವಿಮಲೆ ತಾನಾದರೂ ತನ್ನ ಚಮತ್ಕಾರದಿಂದ ಅಲ್ಲಮನನ್ನು ಮಾಯೆಗೆ ವಶಪಡಿಸಬೇಕೆಂದು ಪ್ರಯತ್ನಿಸಿದಳು. ಆಕೆ ಹೇಳಿದು ದಕ್ಕೆಲ್ಲ ಅಲ್ಲಮನು ಪ್ರತ್ಯುತ್ತರ ಕೊಡುವನು. "ಸಮುದ್ರದ ನೀರೆಲ್ಲವೂ ಅಮೃತವಾಗಬಹುದು. ಕಾಡಿನ ಗಿಡಗಳೆಲ್ಲವೂ ಯಾವುದಾದರೊಂದು ಕಾಲಕ್ಕೆ ಕಲ್ಪವೃಕ್ಷಗಳಾಗಬಹುದು. ಆದರೆ, ಮಡದಿ ಮಾಯೆಗೆ ಪರಮಾತ್ಮ ತತ್ತ್ವಜ್ಞಾನ ಎಂದಿಗೂ ಲಭಿ ಸದು" ಎಂದು ಖಂಡಿತವಾಗಿ ಹೇಳಿ ಅಲ್ಲಮನು ಮುಂದೆ ಸಾಗು ವನು. ತಮ್ಮ ಪ್ರಯತ್ನ ವಿಫಲವಾಯಿತೆಂದು ಮಾಯೆಯೂ, ವಿಮಲೆಯೂ ಚಿಂತಿಸುತ್ತಿರುವರು. ಅಷ್ಟರೊಳಗೆ ಮಮಕಾರ ಮೋಹಿನಿಯರು ಮಗಳನ್ನು ಹುಡುಕಿಕೊಂಡು ಅಲ್ಲಿಗೆ ಬರುವರು. ಮಗಳ ಅವಿವೇಕಕ್ಕೆ ದುಃಖಪಟ್ಟು ತಾಯಿತಂದೆಗಳು ಅವಳನ್ನು ಸಮಾಧಾನಗೊಳಿಸುವರು.

ಯೋಗಸಾಧನೆ

ಹೀಗೆ ಮಾಯೆಯನ್ನು ತಿರಸ್ಕರಿಸಿ ಅಲ್ಲಮನು ಮುಂದೆ ಹೊರಟನು. ಮಾಯೆ ಅವನ ಪಾಲಿಗೆ ಮಾಯೆಯಾಗಿ ಉಳಿಯ ಲಿಲ್ಲ. ಮಾಯೆ ಹೆಣ್ಣಿನಲ್ಲಿಲ್ಲ, ಆದರೆ ಅವಳನ್ನು ನೋಡುವ

ಕಣ್ಣಿನಲ್ಲಿದೆ ಎಂಬ ಭಾವನೆ ಪ್ರಭುವಿಗೆ ಗೋಚರವಾಯಿತು. ಮುಂದೆ ನಡೆಯುತ್ತ ಪ್ರಭು ಇದನ್ನು ಬಹಳವಾಗಿ ಯೋಚಿಸ ತೊಡಗಿದನು. ಮಾಯೆಯ ಸ್ವರೂಪದ ಮೂಲ ಎಲ್ಲಿದೆ? ಕಾಮಿನೀಕಾಂಚನಗಳಾಗಲೀ ಪ್ರಪಂಚದ ಇತರ ವಸ್ತುಗಳಾಗಲೀ ಮಾಯೆ ಎನಿಸಲಾರವು. ಈ ವಸ್ತುಗಳಲ್ಲಿ ಮಾಯೆಯಿಲ್ಲ; ಆದರೆ ಇವುಗಳನ್ನು ನೋಡುವ ದೃಷ್ಟಿಯಲ್ಲಿ ಮಾಯೆ ಇದೆ. ಹೀಗೆ ಯೋಚಿಸುತ್ತ ಪ್ರಪಂಚ–ಮಾಯೆ–ಆಕರ್ಷಣಗಳ ಬಗೆ ಪ್ರಭು ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ. "ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆ ಎಂಬರು ಮಣ್ಣು ಮಾಯೆಯಲ್ಲ, ಮನದ ಮುಂದಣ ಆಶೆಯೇ ಮಾಯೆ ಕಾಣಾ". ಈ ಮಾತು ಗಹನವಾದ ಅರ್ಥವನ್ನು ಒಳಗೊಂಡಿದೆ. ಪ್ರಪಂಚದಲ್ಲಿ ಬಾಳುತ್ತಿರುವಾಗ ನಮ್ಮ ಎಲ್ಲಾ ಆಶೆಗಳ ಮೂಲ ಈ ದೇಹವೇ ನಾನೆಂಬ ಭಾವನೆ. ನಾನೆಂಬ ವಸ್ತುವೇ ಈ ದೇಹವೆಂದು ಭಾವಿಸಿ ಇದನ್ನು ರಕ್ಷಿಸಲು ಮತ್ತು ತೃಪ್ತಿಪಡಿಸಲು ನಾವು ಶಕ್ತಿಮೀರಿ ಪ್ರಯತ್ನಿಸುತ್ತೇವೆ. ನಾವು ದೇಹವಲ್ಲ ಎಂದು ಚೆನ್ನಾಗಿ ತಿಳಿದರೆ ಆಗ ನಾವು ಯಾರೊಡನೆಯೂ ಹೋರಾಡ ಬೇಕಾಗಿಲ್ಲ. ಆದ್ದರಿಂದಲೇ ಪ್ರಪಂಚದಲ್ಲಿ ನಾವು ಸತ್ತಂತೆ ಇರ ಬೇಕು. ದೇಹವಿದ್ದರೂ ದೇಹವಿಲ್ಲದಂತಹ ನಿರ್ಲಿಪ್ತಸ್ಥಿತಿಯನ್ನು ನಾವು ಸಾಧಿಸಲಿಕ್ಕಾಗಿಯೇ ಈ ದೇಹ ನಮಗೆ ಬಂದಿದೆ. ಏನು ಬೇಕಾದರೂ ಬರಲಿ, ಈಶ್ವರನ ಇಚ್ಛೆಯಂತೆ ಆಗಬೇಕಾದದ್ದು ಆಗಿ ಹೋಗಲಿ. ಆಗುವುದನ್ನು ತಪ್ಪಿಸಲಿಕ್ಕೂ, ಆಗದಿರುವುದನ್ನು ಆಗುವಂತೆ ಮಾಡಲಿಕ್ಕೂ ನಮಗೆ ಅಧಿಕಾರವಿಲ್ಲ. ಜೀವನದ ಆಗುಹೋಗುಗಳನ್ನು ತಪ್ಪಿಸಲಿಕ್ಕೆ ನಮಗೆ ಅವಕಾಶವೇ ಇಲ್ಲ

ದಿರುವಾಗ, ಅವಕ್ಕಾಗಿ ಚಿಂತಿಸಿ ಆಗುವ ಫಲವಾದರೂ ಏನು? ಉರಿಬರಲಿ ಸಿರಿಬರಲಿ ಬೇಕು ಬೇಡೆನ್ನದೆ ಆಯಾಕಾಲದಲ್ಲಿ ತನ್ನ ಪಾಲಿಗೆ ಬಂದದ್ದನ್ನು ಸಂತೋಷದಿಂದ ಅನುಭವಿಸುವ ಎದೆಗಾರಿಕೆ ಮಾನವನ ಸಾಧನೆಯ ಹೆಗ್ಗುರುತು. ಇಂತಹ ಸ್ಥಿತಿಯನ್ನು ಪಡೆಯಲಿಕ್ಕಾಗಿಯೇ ಪ್ರಭು ಮನೆಬಿಟ್ಟು ಮಾಯೆಯನ್ನು ತೊರೆದು ಮುಂದೆ ಹೊರಟಿರುವನು. ಈ ದೇಹದೊಳಗೆ ಮಳೆ ಗಾಳಿ ಬಿಸಿಲುಗಳಿಗೆ ಅಂಟದಂತೆ ನಿರ್ಲಿಪ್ತನಾಗಿ ನೆಲಸಿರುವ ಈಶ್ವರ ನನ್ನು ಕಂಡು ಅವನಲ್ಲಿ ಸಮರಸವಾಗಿ ಬೆರೆಯಬೇಕೆಂಬುದೇ ಪ್ರಭುವಿನ ಹಿರಿಯ ಆಶೆ.

ಇಂತಹ ಬಯಕೆ ಈಡೇರಬೇಕಾದರೆ, ಮಾನವನು ತನ್ನಲ್ಲಿ ಸಹಜವಾಗಿ ಅಂಟಿಕೊಂಡಿರುವ ಮಾನ, ಅಭಿಮಾನ, ಅವಮಾನ ಗಳಿಂದಾಚೆಗೆ ಹೋಗಬೇಕು. ಮನಸ್ಸಿನ ಉದ್ವೇಗ, ಆವೇಶ, ಆಗ್ರಹಗಳು ದೂರಸರಿಯಬೇಕು. ಲೋಕದ ಸ್ತುತಿನಿಂದೆಗಳನ್ನು ಕೇಳಿ ಮನದಲ್ಲಿ ಕೋಪವ ತಾಳದೆ ಸಮಾಧಾನವಾಗಿರುವ ಸ್ಥಿತಿ ಬರಬೇಕು. ಈ ಬಗೆಯ ಸಮಸ್ಥಿತಿ ನಮಗೆ ಅನುಭವದಿಂದ ಬಂದರೆ ಮಾತ್ರ ಸ್ಥಿರವಾಗಿ ನಿಲ್ಲಬಲ್ಲುದು. ಗೀತೋಪನಿಷತ್ತು ಗಳಿಂದ ನಿರ್ಲಿಪ್ತಸ್ಥಿತಿ ಎಂತಹದೆಂದು ತಿಳಿದಿದ್ದರೂ, ಅದನ್ನು ಆಚರಿಸುವಾಗ ನಾವು ಮುಗ್ಗರಿಸುತ್ತೇವೆ. ಭಿನ್ನ ಭಿನ್ನ ಸ್ವಭಾವದ ಜನರೊಡನೆ ವ್ಯವಹರಿಸುವಾಗ, ನಾವು ತಾಳ್ಮೆಮೀರಿ ಅತಿಕ್ರಮಿಸಿ ಪ್ರವರ್ತಿಸುವುದು ಸಹಜ. ಸತ್ಯಶೋಧನೆಗಾಗಿ ಮನೆಬಿಟ್ಟು ಹೊರಟ ಪ್ರಭು ಆಹಾರಕ್ಕಾಗಿ ನಾಲ್ಕಾರು ಮನೆಗಳಲ್ಲಿ ಭಿಕ್ಷೆ ಬೇಡಬೇಕಾಗಿ ಬಂದಿತು. ಎಷ್ಟೋ ಮನೆಗಳಲ್ಲಿ ಅವನಿಗೆ ತಿರಸ್ಕಾರವೂ ಉಂಟಾಯಿತು. ಆದರೂ ಪರಮೇಶ್ವರನು ಪ್ರಭು ವಿನ ದೇಹರಕ್ಷಣೆಗೆ ಬೇಕಾದಷ್ಟು ಆಹಾರವನ್ನು ಕೆಲವು ಮನೆಗಳಲ್ಲಿ

ದೊರಕಿಸಿದನು. ಅಂತಹ ಮನೆಗಳಲ್ಲಿ ಅವನಿಗೆ ದೊರೆತ ಆದರಾತಿಥ್ಯಗಳನ್ನೂ, ಸತೀಪತಿಗಳ ವಿಶಾಲಪ್ರೇಮವನ್ನೂ, ಉದಾರವರ್ತನೆಗಳನ್ನೂ ಭಕ್ತಿನಮ್ರತೆಯನ್ನೂ ಕಂಡು ಪ್ರಭು ಮೆಚ್ಚಿ ಹೇಳಿದ್ದಾನೆ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದು ಪ್ರಭು ಹೇಳಿರುವುದನ್ನು ನೋಡಿದರೆ ಅವನು ಲೋಕದಲ್ಲಿ ಒಳ್ಳೆಯವರು ಕೆಟ್ಟವರು ಎಲ್ಲರೊಡನೆ ಬೆರೆತು, ಕಲೆತು, ಸುಖದುಃಖಗಳನ್ನು ಅನುಭವಿಸಿ, ಅವನ್ನು ಸಮಭಾವದಿಂದ ಪುರಸ್ಕರಿಸಿ, ಶಾಂತಿಸಮಾಧಾನಗಳನ್ನು ಪಡೆದಿದ್ದನೆಂದು ಸ್ಪಷ್ಟಪಡುವುದು.

ಲೋಕದ ಪ್ರತಿಯೊಂದು ಜೀವಕ್ಕೂ ಹಿನ್ನೆಲೆ ಎನಿಸಿದ ಸತ್ಯ ನಿತ್ಯ ಸನಾತನನೂ ಶುದ್ಧನೂ ಆದ ಆತ್ಮನನ್ನು ಕಂಡನುಭವಿಸಲಿಕ್ಕಾಗಿಯೇ ಪ್ರಭು ಸಣ್ಣಮನೆಯನ್ನು ಬಿಟ್ಟು ವಿಶಾಲಜಗತ್ತನ್ನು ಪ್ರವೇಶಿಸಿದನು. ಪತಿತನಲ್ಲಿ ಮತ್ತು ಪವಿತ್ರನಲ್ಲಿ, ಸುಖಿಯಲ್ಲಿ ಮತ್ತು ದುಃಖಿಯಲ್ಲಿ, ಸುಂದರನಲ್ಲಿ ಮತ್ತು ಕುರೂಪಿಯಲ್ಲಿ, ಮಾನವನಲ್ಲಿ ಮತ್ತು ಪ್ರಾಣಿಯಲ್ಲಿ ಸಮನಾಗಿ ನೆಲಸಿರುವ ಪರಂಜ್ಯೋತಿಯನ್ನು ಕಾಣಬೇಕೆಂಬುದೇ ಅವನ ಬಯಕೆ. ಲೋಕದ ಜನರೆಲ್ಲರಿಗೂ ಪ್ರೀತಿಪಾತ್ರವಾದ ವಸ್ತು ಆತ್ಮ ಒಂದೇ ಎಂಬುದನ್ನು ಅವನು ಅನುಭವದ ಮೂಲಕ ಮನಗಂಡನು. ಜನರು ಯಾವಾಗಲೂ ಕಾಮಿನೀಕಾಂಚನಗಳಿಗೂ, ಕೀರ್ತಿ ಪ್ರತಿಷ್ಠೆಪ್ರಶಂಸೆಗಳಿಗೂ ಹೆಣಗಾಡುತ್ತಿರುವರು. "ಹೊನ್ನಿಗಾಗಿ ಸತ್ತವರು ಕೋಟಿ, ಹೆಣ್ಣಿಗಾಗಿ ಸತ್ತವರು ಕೋಟಿ, ಮಣ್ಣಿಗಾಗಿ ಸತ್ತವರು ಕೋಟಿ—ಗುಹೇಶ್ವರಾ, ನಿನಗಾಗಿ ಸತ್ತವರನಾರನೂ ಕಾಣೆ" ಎಂದು ಅವನು ಹೇಳುವುದನ್ನು ಕೇಳಿದರೆ ಈಶ್ವರನ ದರ್ಶನಕ್ಕಾಗಿ ನಡುಕಟ್ಟಿಕೊಂಡು ನಿಂತವರು ಲೋಕದಲ್ಲಿ ವಿರಳ

ರೆಂದು ಸ್ಪಷ್ಟಪಡುತ್ತದೆ. ಲೋಕದ ವರ್ತನೆಯನ್ನು ಪ್ರಭು ಗಮನಿಸಿ ಎಚ್ಚರಿಸುತ್ತಾನೆ. ಒಬ್ಬನು ಮತ್ತೊಬ್ಬನನ್ನು ಪ್ರೀತಿಸುವುದು ತನ್ನ ಆತ್ಮದ ಸಲುವಾಗಿ ಎಂಬುದನ್ನು ಪ್ರಭು ಕಂಡು ಇಂತಹ ಸ್ವಾರ್ಥಸಾಧನೆಯ ವ್ಯಾಮೋಹ ಹಾನಿಕರವೆಂದು ಭಾವಿಸುತ್ತಾನೆ. ಈ ಬಗೆಯ ವ್ಯಾಮೋಹ ಯಾರಿಗೂ ಎಂದಿಗೂ ನಿತ್ಯಸುಖವನ್ನು ಕೊಡಲಾರದು. ದೇಹವೇ ತಾನೆಂದೂ, ತನ್ನದೆಂದೂ ಅಭಿಮಾನಿಸಿ ವ್ಯವಹರಿಸುವ ಅವಿವೇಕಿಗಳಿಗೆ ಒಂದಲ್ಲೊಂದು ವೇಳೆ ಬಲವಾದ ಪೆಟ್ಟು ಬೀಳುವುದು ಸಹಜ. ಆಗ ಈ ಪ್ರಪಂಚದ ವ್ಯಾಮೋಹ ಎಂತಹದು ಎಂಬುದು ಅವರಿಗೆ ಸ್ವಲ್ಪ ಅರಿವಾಗುವುದು. ಮಾನವರು ಅವಿವೇಕದಿಂದ ದೇಹವನ್ನು ಮೋಹಿಸುತ್ತಿದ್ದರೂ, ಈ ದೇಹದಲ್ಲಿ ಆತ್ಮನನ್ನು ವಿನಾ ಬೇರೆ ಯಾವುದನ್ನೂ ಪ್ರೀತಿಸಲಾರರು. ಸತಿಯು ಪತಿಯನ್ನು ಪ್ರೀತಿಸುವುದು ಪತಿಗಾಗಲ್ಲ, ಆದರೆ, ಆತ್ಮನಿಗಾಗಿ. ಪತಿಯು ಸತಿಯನ್ನು ಪ್ರೀತಿಸುವುದು ಸತಿಗಾಗಲ್ಲ, ಆದರೆ, ಆತ್ಮನಿಗಾಗಿ. ಮಕ್ಕಳಿಗಾಗಲ್ಲ ಮಕ್ಕಳನ್ನು ಪ್ರೀತಿಸುವುದು, ಆದರೆ, ಆತ್ಮನಿಗಾಗಿ. ಐಶ್ವರ್ಯವನ್ನು ನಾವು ಪ್ರೀತಿಸುವುದು ಐಶ್ವರ್ಯಕ್ಕಾಗಿಯಲ್ಲ, ಆದರೆ, ಆತ್ಮನಿಗಾಗಿ. ಪ್ರಪಂಚಕ್ಕೋಸ್ಕರ ಯಾರೂ ಪ್ರಪಂಚವನ್ನು ಪ್ರೀತಿಸುವುದಿಲ್ಲ, ಆದರೆ, ಆತ್ಮನಿಗಾಗಿ ಎಲ್ಲರೂ ಪ್ರಪಂಚವನ್ನು ಪ್ರೀತಿಸುವರು. ಯಾರೂ ಯಾವ ವಸ್ತುವನ್ನೂ ಅದಕ್ಕಾಗಿಯೇ ಪ್ರೀತಿಸುವುದಿಲ್ಲ; ಆದರೆ ಆತ್ಮನಿಗಾಗಿ ಪ್ರೀತಿಸುವರು. ಈ ಆತ್ಮನೇ ಪರಮೇಶ್ವರನು. ಆದಕಾರಣ ಎಲ್ಲರಲ್ಲೂ ಒಂದೇ ಬಗೆಯಾಗಿ ನೆಲಸಿರುವ ಇವನನ್ನು ಕಾಣುವುದೇ ಬಾಳಿನ ಗುರಿ ಎಂದು ಭಾವಿಸಿ ಪ್ರಭು ಮನೆಯನ್ನು ಬಿಟ್ಟು ಅಲೆಯುವನು.

ಆದರೆ, ಮಾನವನು ತನ್ನ ಸಲುವಾಗಿಯೇ ಎಲ್ಲರನ್ನೂ ಪ್ರೀತಿ

ಸುತ್ತ, ಎಲ್ಲರೂ ತನ್ನ ಹಿತಕ್ಕಾಗಿಯೇ ಇರುವರೆಂದು ಭಾವಿಸುತ್ತ, ತನ್ನ ಹಿತ ಒಂದನ್ನೇ ಗಮನಿಸತೊಡಗಿರುವನು. ಹೆಂಡತಿ ಗಂಡನನ್ನು ಪ್ರೀತಿಸುವುದಾಗಿ ಹೇಳಿ ಮುತ್ತಿಡುತ್ತಿರುವಳು. ಆದರೆ, ಅವನು ತೀರಿಕೊಂಡೊಡನೆ ಅವಳ ಮನದಲ್ಲಿ ಮೊದಲು ಹುಟ್ಟುವ ಆಲೋಚನೆ 'ನಾಳೆ ಖರ್ಚಿಗೆ ಏನು ಗತಿ' ಎಂಬುದು. ಅವನು ಬ್ಯಾಂಕಿನಲ್ಲಿ ಎಷ್ಟು ದುಡ್ಡಿಟ್ಟಿರುವನು ಎಂಬುದೇ ಅವಳ ಮುಖ್ಯವಾದ ಆಲೋಚನೆಯಾಗುವುದು. ಗಂಡನು ಹೆಂಡತಿಯನ್ನು ಪ್ರೀತಿಸುವನು. ಆದರೆ ಅವಳು ರೋಗದಲ್ಲಿ ನರಳುತ್ತ ಸೌಂದರ್ಯವನ್ನು ಕಳೆದುಕೊಂಡು ಕುರೂಪಿಯಾದರೆ, ಅವನು ಅವಳನ್ನು ಗಣನೆಗೇ ತರುವುದಿಲ್ಲ. ಈ ಪ್ರಪಂಚದ ವ್ಯಾಮೋಹವೆಲ್ಲ ಹೀಗೆ ಸ್ವಾರ್ಥಸಾಧನೆಯ ಮೂಲವೆನಿಸಿದೆ, ಇದರಲ್ಲಿ ಹುರುಳಿಲ್ಲ. ಈ ಬಗೆಯ ವ್ಯಾಮೋಹದ ಜೀವನವನ್ನು ಪ್ರಭು ಚೆನ್ನಾಗಿ ಪರ್ಯಾಲೋಚಿಸಿ ಇದರಲ್ಲಿ ಸಾರವತ್ತಾದ ಭಾಗ ಆತ್ಮಪ್ರೇಮವೆಂಬುದನ್ನು ಮನಗಂಡನು. ಎಲ್ಲೆಲ್ಲಿಯೂ ತುಂಬಿಕೊಂಡಿರುವ ಈಶ್ವರನು ನಮಗೆ ಗೋಚರಿಸಬೇಕಾದರೆ ದೇಹದ ವ್ಯಾಮೋಹ ಎಷ್ಟು ದೊಡ್ಡ ಅಡಚಣೆಯಾಗಿರುವುದೆಂಬುದನ್ನು ಪ್ರಭು ಕಣ್ಣಾರೆ ನೋಡುವನು. ಈ ದೇಹವೇ ನಾನೆಂಬ ಅಹಂಕಾರ, ಇದು ನನ್ನದೆಂಬ ವ್ಯಾಮೋಹ ಇವುಗಳ ಗೋಡೆಯಿಂದ ನಿರ್ಮಿತವಾಗಿರುವ ಈ ಕತ್ತಲು ಕೋಣೆಯಲ್ಲಿ ನಾವು ಸೆರೆಸಿಕ್ಕಿ ಯಥಾರ್ಥವಾದ ಬೆಳಕನ್ನು ಕಾಣದೆ ಕುರುಡರಾಗಿದ್ದೇವೆ. ಗೋಡೆಗಳನ್ನೊಡೆದು ಪುಡಿಮಾಡದ ಹೊರತು ನಮಗೆ ಆತ್ಮದ ಪರಿಚಯವಾಗದು, ನಮ್ಮ ಕಲ್ಯಾಣಸಾಧನೆಯಾಗದು; ನಮ್ಮ ಮುಂದಿನ ವಿಕಾಸವೂ ಸಾಧ್ಯವಾಗದು. ಪ್ರಭು ಲೋಕಯಾತ್ರೆಯಲ್ಲಿ ವಿವಿಧ ಸನ್ನಿವೇಶ ಸಂಘಟನೆಗಳನ್ನು ಕಂಡು, ಕ್ಷುದ್ರಭಾವನೆಗಳನ್ನು ತೊರೆದು

ವಿಶಾಲ ಹಾಗೂ ಉದಾತ್ತವರ್ತನೆಯನ್ನು ಸಹಜವಾಗಿ ಕಲಿತನು. ಲೋಕದಲ್ಲಿ ಸಂಚರಿಸುತ್ತಿದ್ದರೂ, ಯಾವ ಹಂಗಿಗೂ ಸಿಕ್ಕದೆ, ಕೋಪತಾಪಗಳನ್ನು ಸಹಿಸಿಕೊಂಡು ಪ್ರಭು ಆತ್ಮವಿಶ್ವಾಸವನ್ನು ಬೆಳೆಸಿಕೊಂಡನು. ಅವನಿಗೆ ವಿಶಾಲಭೂಮಿಯೇ ವಾಸದ ಮನೆಯೂ, ಆಕಾಶವೇ ಮೇಲ್ಹಾವಣಿಯೂ ಆದವು. ಇದೇ ಯೋಗಿಯ ಪರಮೈಶ್ವರ್ಯ; ಅನಂತವೂ, ಅಪಾರವೂ ಆದ ದಿವ್ಯ ಸಮೃದ್ಧಿ. ಇದರ ಮುಂದೆ ಸಂಸಾರಿಗಳ ಸಿರಿ ತೃಣಸಮವೆನಿಸಿತು ಪ್ರಭುವಿಗೆ. ಹೀಗೆ ವಿಶಾಲಜಗತ್ತಿನಲ್ಲಿ ನಿರ್ಲಿಪ್ತವಾಗಿ ವ್ಯಾಪಿಸಿರುವ ದಿವ್ಯತೇಜಸ್ಸನ್ನು ಕಾಣಲಿಕ್ಕಾಗಿ ಪ್ರಭು ಸಣ್ಣದೊಂದು ವಾಸಗೃಹವನ್ನೂ ಅಲ್ಲಿನ ದೈಹಿಕಸುಖವನ್ನೂ ತ್ಯಜಿಸಿದುದು ಸಹಜವೇ ಆಗಿದೆ. ಸಣ್ಣದರಲ್ಲಿ ನಿತ್ಯಸುಖವಿಲ್ಲವೆಂದು ಭಾವಿಸಿ ದೊಡ್ಡದನ್ನು ಹುಡುಕಿ ಕಾಣಲು ಅವನು ದೃಢನಿರ್ಧಾರಮಾಡಿ, ಲೋಕದ ಕಷ್ಟಕಾರ್ಪಣ್ಯಗಳನ್ನು ಶಾಂತಿಯಿಂದ ಸಹಿಸುತ್ತಿದ್ದುದು ನಮಗೆ ದಿವ್ಯವಾದ ಆದರ್ಶವೆನಿಸಿದೆ.

ನಿತ್ಯಸುಂದರವಾದ ಸತ್ಯದ ಅನ್ವೇಷಣಕ್ಕಾಗಿ ಹೊರಟ ಪ್ರಭು ಗಾಳಿ ಮಳೆ ಬಿಸಿಲು ಚಳಿಗಳನ್ನು ಲಕ್ಷಿಸದೆ ತನ್ನ ಗುರಿಯನ್ನು ಮುಟ್ಟುವ ಯೋಚನೆಯಲ್ಲಿಯೇ ಸ್ಥಿರಚಿತ್ತನಾಗಿ ಸಂಚರಿಸುವನು. ಆ ಕಾಲದಲ್ಲಿ ಯೋಗಸಾಧನೆಯಲ್ಲಿ ಸಿದ್ಧಿ ಹೊಂದಿದ್ದ ಅನೇಕ ಹಠಯೋಗಿಗಳನ್ನು ಅವನು ಸಂಧಿಸಿದನು. ಹಠಯೋಗವೆಂದರೆ ಅದೊಂದು ಅದ್ಭುತಸಾಧನೆ. ಅದನ್ನು ಸಾಧಿಸಿದರೆ ದೇಹ ವಜ್ರವಾಗುತ್ತದೆ. ಕತ್ತಿ ಅದನ್ನು ಇರಿಯಲಾರದು; ಬೆಂಕಿ ಅದನ್ನು ಸುಡಲಾರದು. ಅದರಿಂದ ದೇಹಕ್ಕೆ ಅದ್ಭುತವಾದ ಶಕ್ತಿ ದೊರಕುತ್ತದೆ. ಹೀಗೆ ಯಮ ನಿಯಮ ಆಸನಗಳ ಅಭ್ಯಾಸದಿಂದ ಸ್ಥೂಲ ದೇಹದ ಮೇಲೆ ಪ್ರಭು ಅಧಿಕಾರವನ್ನು ಪಡೆದನು; ಪ್ರಾಣಾ

ಯಾಮದಿಂದ ಪ್ರಾಣಶಕ್ತಿಯನ್ನು ವಶಪಡಿಸಿಕೊಂಡನು; ಪ್ರತ್ಯಾಹಾರದಿಂದ ಇಂದ್ರಿಯನಿಗ್ರಹಕ್ರಮವನ್ನು ಪಡೆದನು. ಇವೆಲ್ಲವನ್ನೂ ಆ ಕಾಲದ ಯೋಗಿಗಳಿಂದ ಪ್ರಭು ಕಲಿತನು. ಪದ್ಮಾಸನ, ಸಿದ್ಧಾಸನ ಹೀಗೆ ಒಂದೊಂದಾಗಿ ಆಸನಗಳನ್ನು ಕಲಿತು ಅವುಗಳ ಮೂಲಕ ದೇಹದಾರ್ಢ್ಯವನ್ನು ಪಡೆದನು. ಅನಂತರ ದೇಹಕ್ಕೆ ಸ್ಥಿರತೆಯನ್ನುಂಟುಮಾಡುವ ಖೇಚರಿ, ಶಾಂಭವಿ ಮೊದಲಾದ ಮುದ್ರೆಗಳನ್ನು ಅಭ್ಯಾಸಮಾಡಿದನು. ಷಟ್ಚಕ್ರಗಳ ಮರ್ಮವನ್ನೂ, ಕುಂಡಲಿನೀಶಕ್ತಿಯ ರಹಸ್ಯವನ್ನೂ ಅರಿತನು. ಪ್ರಾಣಾಯಾಮದ ಅಭ್ಯಾಸದಿಂದ ಕುಂಡಲಿನೀಶಕ್ತಿಯನ್ನು ಜಾಗ್ರತಗೊಳಿಸಿ ಅದನ್ನು ಸಹಸ್ರಾರಕ್ಕೇರಿಸುವ ಸಾಹಸದಲ್ಲಿ ಪ್ರಭು ತೊಡಗಿದನು. ಈ ಬಗೆಯ ಯೋಗಸಾಧನೆಯಿಂದ ದೇಹದಲ್ಲಿ ವಿಚಿತ್ರ ಪರಿವರ್ತನೆ ಆಗುತ್ತಿರುವಂತೆ ಅವನಿಗೆ ತೋರಿತು. ಅನೇಕ ಅಲೌಕಿಕ ಶಕ್ತಿಗಳೂ ಅವನಿಗೆ ಲಭಿಸಿದವು. ನಿಯತಿಕೃತವಾದ ನಿಯಮವನ್ನೇ ಉಲ್ಲಂಘಿಸಿ ನಿಲ್ಲುವ ಮಹಾಶಕ್ತಿಯನ್ನು ಅವನು ಪಡೆದನು. ಆದರೂ, ಇದೆಲ್ಲವೂ ದೇಹದ ಮೇಲೆ ಮಾತ್ರವೇ ಪ್ರಭುತ್ವವನ್ನು ನಡೆಸುವಂತಹದು. ಈ ಬಗೆಯ ಶಕ್ತಿಯಿಂದ ಮನುಷ್ಯನಿಗೆ ತೃಪ್ತಿಯಾಗದು. ಮನುಷ್ಯನೆಂದರೆ ಕೇವಲ ಮಾಂಸದ ಮುದ್ದೆಯಲ್ಲ; ಆದರೆ ಅವನು ಈ ದೇಹವನ್ನೆಲ್ಲಾ ಆಡಿಸುವ ಚೈತನ್ಯನಿರುವನು. ತನ್ನ ಸ್ವರೂಪದ ಪೂರ್ಣಪರಿಚಯ ಸಾಧಕನಿಗೆ ಆಗದಹೊರತು ಶಾಂತಿ ಲಭಿಸದು. ಲೋಕದ ಜನರಿಂದ ಮಹಿಮಾಪುರುಷನೆಂದು ಪೂಜಿಸಿಕೊಳ್ಳುವಷ್ಟು ವಜ್ರಕಾಯನನ್ನಾಗಿ ಪ್ರಭುವನ್ನು ಹಠಯೋಗ ಅನುಗ್ರಹಿಸಿತ್ತು. ಆದರೆ ಅದರಿಂದ ಅವನ ಮನಸ್ಸಿಗೆ ಶಾಂತಿ ದೊರಕಲಿಲ್ಲ. ಹಠಯೋಗದ ಸಿದ್ಧಿ ಸಾಧಕನಿಗೆ ಎಚ್ಚರ ದಪ್ಪಿದರೆ ನಾಶಕ್ಕೆ ಕಾರಣವಾಗಬಹುದು ಎಂಬುದನ್ನು ಪ್ರಭು

ತಿಳಿದನು; ಏಕೆಂದರೆ ಹಠಯೋಗವು ಅಹಂಕಾರವನ್ನು ನಾಶ ಮಾಡುವ ಬದಲು ಬಲಗೊಳಿಸಲು ಸಹಾಯಕವಾಗುವುದು. ಆದ್ದರಿಂದ ಪ್ರಭು ಹಠಯೋಗವನ್ನು ಪಡೆದಿದ್ದರೂ ಅದನ್ನು ಪ್ರದರ್ಶಿಸದೆ ಏನೂ ಅರಿಯದ ಸಾಮಾನ್ಯ ಸನ್ಯಾಸಿಯಂತೆ ಮತ್ತೆ ತನ್ನ ಸಂಚಾರವನ್ನು ಮುಂದುವರಿಸಿದನು. ಆತ್ಮತೇಜಸ್ಸನ್ನು ಹೆಚ್ಚಿಸಿಕೊಂಡಲ್ಲದೆ ಪೂರ್ಣಶಾಂತಿ ಲಭಿಸದೆಂದು ಅದನ್ನು ದೊರಕಿಸುವ ಗುರುವನ್ನು ಅವನು ಹುಡುಕಲಾರಂಭಿಸಿದನು.

ಹಠಯೋಗಸಿದ್ಧಿಯನ್ನು ಪಡೆದು ಪ್ರಭು ಧ್ಯಾನಧಾರಣ ಸಮಾಧಿಗಳ ಅಭ್ಯಾಸದಿಂದ ಮನಶ್ಶಕ್ತಿಯನ್ನು ಸಾಧಿಸಿದನು. ಮನೋವಿಕಾಸದಿಂದ ವಿಶ್ವವನ್ನೇ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವ ಅದ್ಭುತಶಕ್ತಿ ಅವನಿಗೆ ಬಂದಿತು. ತಾನು ಕುಳಿತಲ್ಲಿಯೇ ಇಡೀ ವಿಶ್ವದ ಮೇಲೆ ಪ್ರಭುತ್ವವನ್ನು ನಡೆಸಬಲ್ಲ ಶಕ್ತಿಯನ್ನು ರಾಜಯೋಗದಿಂದ ಅವನು ಪಡೆದನು. ಹೀಗೆ ಕೆಲವು ದಿವಸಗಳಲ್ಲಿ ರಾಜಯೋಗದ ರಹಸ್ಯವನ್ನರಿತು, ಪ್ರಭು ಹಠಯೋಗಕ್ಕಿಂತ ರಾಜಯೋಗ ಹೆಚ್ಚು ಅಂತರ್ಮುಖವಾದುದೆಂದು ಮನಗಂಡನು. ಆದರೂ ನಿರ್ವಿಕಲ್ಪಕಸಮಾಧಿಸ್ಥಿತಿ ಇನ್ನೂ ಅವನಿಗೆ ಲಭಿಸಲಿಲ್ಲ; ಎಡೆಬಿಡದೆ ಒಂದೇ ಸಮನಾಗಿ ಸಮಾಧಿಯಲ್ಲಿ ಅವನು ತೊಡಗಿದ್ದನು. ಮನುಷ್ಯನು ಪಡೆಯಬಹುದಾದ ಅತ್ಯುನ್ನತ ಸ್ಥಿತಿಯನ್ನು ರಾಜಯೋಗವು ತಂದುಕೊಡಬಲ್ಲುದಾದರೂ, ಅದು ನಿಜವಾದ ಸ್ಥಿತಿಯಲ್ಲವೆಂದೂ, ನಿಜವಾದ ಸಾಧಕನು ಇವೆರಡನ್ನೂ ಮೀರಿ ಮುಂದೆಹೋಗಬೇಕೆಂದೂ ಪ್ರಭು ಭಾವಿಸಿದನು. ಹಠಯೋಗ ರಾಜಯೋಗಗಳು ದೇಹದಂಡನೆ ಮತ್ತು ಚಿತ್ತವೃತ್ತಿನಿರೋಧಗಳನ್ನು ದೊರಕಿಸುತ್ತವೆ. ಆದರೆ ಸಾಧಕನು ಇಷ್ಟರಿಂದಲೇ ತೃಪ್ತನಾಗಲಾರನು. ನಿಜವಾದ ಸಿದ್ಧಿ ಅಂದರೆ ಮನುಷ್ಯತ್ವವನ್ನೇ ದಾಟಿ

ಸಾಧಕನು ದೇವತ್ವಕ್ಕೆ ಏರಬೇಕೆಂಬುದು. ನಾನು ಎನ್ನುವ ವಸ್ತು ಈ ದೇಹವೂ ಅಲ್ಲ, ಮನಸ್ಸೂ ಅಲ್ಲ; ಆದರೆ ದೇಹ ಮನಬುದ್ಧಿಗಳಿಗತೀತವಾದ ಚೇತನಶಕ್ತಿ. ಅದೇ ವಿಶ್ವದಲ್ಲಿ ಸಮಾನವಾಗಿ ವ್ಯಾಪಿಸಿರುವಂತಹದು. ತನ್ನೊಳಗೆ ಅಡಗಿರುವ ಈ ಚಿತ್ ಶಕ್ತಿಯನ್ನು ಕಂಡವನಿಗೆ ವಿಶ್ವದ ಪರಿಚಯುವೂ ಸುಗಮುವಾಗುವುದು. ಆಗಲೇ ಏಕವಿಜ್ಞಾನದಿಂದ ಸರ್ವವಿಜ್ಞಾನವೂ ಆಗುವುದೆಂಬ ಶ್ರುತಿ ನಮಗೆ ಅರ್ಥವಾಗುತ್ತದೆ. ಈ ಚೈತನ್ಯದ ನಿಜ ಸ್ವರೂಪವನ್ನು ಕಾಣಬೇಕಾದರೆ ದೇಹಮನಗಳೆರಡನ್ನೂ ನಾವು ದಾಟಿಹೋಗಬೇಕು. ವಿಶ್ವವ್ಯಾಪಕವಾದ ಚಿತ್‌ಶಕ್ತಿಯಲ್ಲಿ ವಿಶ್ವವನ್ನು, ವಿಶ್ವದಲ್ಲಿ ಆ ಶಕ್ತಿಯನ್ನು ಕಾಣುವುದೇ ಸಾಧನೆಯ ಅಂತಿಮ ಘಟ್ಟ.

'ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ'

ಎಂದು ಪರಮಾತ್ಮನು ಗೀತೆಯಲ್ಲಿ ಇದೇ ಆಶಯವನ್ನು ಸ್ಪಷ್ಟಪಡಿಸಿದ್ದಾನೆ.

ಈ ಕೊನೆಯ ಹಂತವನ್ನು ಮುಟ್ಟುವವರೆವಿಗೂ ಸಾಧಕನು ಬೆಳಕಿನ ಪೂರ್ಣಸ್ವರೂಪವನ್ನು ಕಾಣಲಾರನು. ಬೆಳಕಿನ ಹತ್ತಿರ ಬಂದು ನಿಂತಿರುವ ಪ್ರಭು ಬೆಳಕನ್ನು ಕಂಡೇ ಕಾಣಬೇಕೆಂದು ದೃಢಸಂಕಲ್ಪನಾಗಿ ಮುಂದೆ ಹೊರಡುವನು. ದಾರಿಯಲ್ಲಿ ಒಂದು ಗುಹೆ ಅವನ ಕಣ್ಣಿಗೆ ಬೀಳುವುದು, ಒಬ್ಬನು ಮಾತ್ರ ಬಗ್ಗಿ ಬಹಳ ಕಷ್ಟದಿಂದ ಒಳಗೆ ಪ್ರವೇಶಿಸಬಹುದಾದಷ್ಟು ಚಿಕ್ಕ ಬಾಗಿಲಿತ್ತು. ಪ್ರಭು ಕುತೂಹಲದಿಂದ ಒಳಗೆ ಬಗ್ಗಿ ನೋಡಿದನು. ಗುಹೆಯೊಳಗೊಬ್ಬ ಮೂರ್ತಿ ಕುಳಿತು ಅವನನ್ನು ಕೈಬೀಸಿ ಕರೆದಂತೆ ಅವನಿಗೆ ಕಾಣಿಸಿತು. ಆ ಮೂರ್ತಿಯನ್ನು ನೋಡಿದೊಡನೆ

ಪ್ರಭುವಿನ ಅಂತರಾತ್ಮ ತೃಪ್ತವಾಯಿತು. ಮನಸ್ಸು ಪ್ರಶಾಂತವಾಯಿತು. ಹೃದಯ ನಿರ್ಮಲವಾಯಿತು; ಕಡುಬಡವ ಸುವರ್ಣದ ನಿಧಿಯನ್ನು ಎಡವಿ ಕಂಡಂತಾಯಿತು ಪ್ರಭುವಿಗೆ; ಅರಸುವ ಬಳ್ಳಿ ತಾನಾಗಿಯೇ ಕಾಲಿಗೆ ಸುತ್ತಿಕೊಂಡಂತಾಯಿತು. ಪ್ರಭು ಗುಹೆಯೊಳಗೆ ಪ್ರವೇಶಿಸಿ ದಿವ್ಯಮೂರ್ತಿಯನ್ನು ಕಂಡನು. ಅವನ ಕರಸ್ಥಳದಲ್ಲಿ ಪರಮಾತ್ಮನ ಚೈತನ್ಯವೆನಿಸಿದ ಅಮೃತಲಿಂಗ ಕಂಗೊಳಿಸುತ್ತಿತ್ತು. ಅವನ ಇಂದ್ರಿಯವ್ಯಾಪಾರಗಳೆಲ್ಲವೂ ಆ ಲಿಂಗದಲ್ಲಿ ಲೀನವಾಗಿ, ಭಾವ ನಿರ್ಭಾವವಾಗಿ, ನಾನೆಂಬ ಅಹಂಕಾರ ತೊಲಗಿ, ನೀನೆಂಬ ಶಿವತತ್ತ್ವದಲ್ಲಿ ಆ ಮೂರ್ತಿ ಬೆರೆತು ನಿಶ್ಚಲನಾಗಿದ್ದನು. ಲಿಂಗವನ್ನು ನಿಮಿಷಾರ್ಧವೂ ಬಿಡದೆ ನೆಟ್ಟದೃಷ್ಟಿಯಿಂದ ನೋಡುತ್ತಿದ್ದುದರಿಂದ ಅವನು ಅನಿಮಿಷಯ್ಯನೆನಿಸಿಕೊಂಡು ಶಿವಯೋಗಸಮಾಧಿಯಲ್ಲಿ ಮಗ್ನನಾಗಿದ್ದನು. ಇಂತಹ ಯೋಗಿಯನ್ನು ಪ್ರಭುವೂ ಅನಿಮೇಷದೃಷ್ಟಿಯಿಂದಲೇ ನೋಡತೊಡಗಿದನು. ಅವನನ್ನು ನೋಡುತ್ತ ನಿಂತಂತೆಲ್ಲಾ ಪ್ರಭುವಿನ ಕಣ್ಣಿನ ಪೊರೆ ಅಳಿಯುತ್ತಿರುವಂತೆ ಅವನಿಗೆ ತೋರಿತು. ತನಗೆ ಏನು ಬೇಕೆಂಬುದನ್ನು ಬಾಯಿಂದ ಹೇಳಲಾರದ ಮಗುವಿಗೆ ಬೇಕಾದ ವಸ್ತುವನ್ನು ತಾಯಿ ತೋರಿಸಿದಾಗ ಮಗುವಿಗೆ ಹೇಗೆ ಸಂತೋಷವಾಗುವುದೋ ಹಾಗೆ ಪ್ರಭುವಿನ ಸ್ಥಿತಿಯಾಯಿತು. ಇದುವರೆಗೂ ತಾನು ಹುಡುಕುತ್ತಿದ್ದುದನ್ನು ಅನಿಮಿಷಯ್ಯನೆದುರಿಗೆ ಇಲ್ಲಿ ಪಡೆಯಬಹುದೆಂಬ ಸಮಾಧಾನ ಅವನಿಗುಂಟಾಯಿತು. ಆ ಮೂರ್ತಿಯ ಮುಂದೆ ಪ್ರಭು ಸಾಷ್ಟಾಂಗ ಪ್ರಣಾಮಮಾಡಿ ಮೇಲೆದ್ದು ಮೂರ್ತಿಯನ್ನೇ ದಿಟ್ಟಿಸಿ ನೋಡತೊಡಗಿದನು. ಆ ಮೂರ್ತಿ ಮೆಲ್ಲಗೆ ಕಣ್ತೆರೆದು ಪ್ರಭುವನ್ನೇ ನೋಡತೊಡಗಿದನು. ಪ್ರಭುವಿನ ದೇಹ ಇದರಿಂದ ರೋಮಾಂ

ಚನಗೊಂಡು ನಡುಗತೊಡಗಿತು. ಶಿವಯೋಗಿಯ ದೃಷ್ಟಿ ಎಷ್ಟು ಪ್ರಭಾವಶಾಲಿ ಮತ್ತು ಪರಿಣಾಮಕಾರಿ ಎಂಬುದನ್ನು ಕಂಡು ಪ್ರಭುವಿಗೆ ತುಂಬ ಸಂತೋಷವಾಯಿತು. ಆದರೆ ಶಿವಯೋಗಿ ಬಾಯಿಂದ ಮಾತನಾಡುವಂತಿರಲಿಲ್ಲ. ಆದರೂ, ಚಲಿಸದೆ ಅಲುಗಾಡದೆ ಸ್ತಬ್ಧನಾಗಿದ್ದನು. ಅವನ ಬಳಿಯಲ್ಲಿ ಬತ್ತಿ ಇಲ್ಲದೆ ಎಣ್ಣೆ ಇಲ್ಲದೆ ದೀಪ ಒಂದು ಬೆಳಗುತ್ತಿತ್ತು. ಅವನ ಸುತ್ತಲೂ ಶಿವಕಳೆಯ ಬೆಳಕು ವ್ಯಾಪಿಸಿತ್ತು. ಆ ದಿವ್ಯಪ್ರಕಾಶದಲ್ಲಿ ಅನಿಮಿಷಯ್ಯನು ಕಲ್ಪವೃಕ್ಷದಂತೆಯೂ, ಕಾಮಧೇನುವಿನಂತೆಯೂ, ಸಂಜೀವಿನಿಯಂತೆಯೂ ಅಲ್ಲಮನ ಕಣ್ಣಿಗೆ ಕಾಣಿಸುವನು.

ಅವನು ಮಾತನಾಡದಿದ್ದರೂ, ಅವನ ದೃಷ್ಟಿಯಿಂದಲೇ ಅಂತರಂಗದ ಸತ್ತ್ವವೆಲ್ಲವೂ ಪ್ರಭುವಿನ ದೇಹವನ್ನು ಹೊಕ್ಕಂತಾಯಿತು. ಇದರಿಂದ ಪ್ರಭುವಿಗೆ ತನ್ನ ಸಾಧನೆಯ ಗುರಿಯನ್ನು ಮುಟ್ಟಿದಷ್ಟು ಸಮಾಧಾನವಾಯಿತು. ತನ್ನ ಒಳಹೊರಗೆ ಸರ್ವಾಂಗಗಳಲ್ಲಿ ಬೆಳಗುತ್ತಿರುವ ದಿವ್ಯಜ್ಯೋತಿಯನ್ನು ಕಂಡಷ್ಟು ತೃಪ್ತಿಯಾಯಿತು ಅವನಿಗೆ. ತೃಪ್ತಿಗಿಂತ ಮಿಗಿಲಾದ ವಸ್ತು ಲೋಕದಲ್ಲಿ ದೊರಕಲಾರದು. ಅನಿಮಿಷಯ್ಯನನ್ನು ನೋಡಿದಾಗ ಅವನಿಗಾದ ತೃಪ್ತಿ ಅದ್ಭುತವೂ ಅನಂತವೂ ಆದುದು. ಅದನ್ನು ಅವನು ಹೀಗೆ ತಿಳಿಸಿದ್ದಾನೆ.

"ಕಾಣಬಾರದ ಗುರು ಕಣ್ಗೆ ಗೋಚರವಾದೊಡೆ ಹೇಳಲಿಲ್ಲದ ಬಿನ್ನಪ. ಮುಟ್ಟಲಿಲ್ಲದ ಹಸ್ತಮಸ್ತಕ ಸಂಯೋಗ. ಮಾಸಲಿಲ್ಲದ ವಿಭೂತಿಯ ಪಟ್ಟ. ಕೇಳಿಲಿಲ್ಲದ ಕರ್ಣಮಂತ್ರ. ತುಂಬಿ ತುಳುಕದ ಕಲಶಾಭಿಷೇಕ. ಆಗಮವಿಲ್ಲದ ದೀಕ್ಷೆ. ಪೂಜೆಗೆ ಬಾರದ ಲಿಂಗ. ಸಂಗವಿಲ್ಲದ ಸಂಬಂಧ ಸ್ವಯಮಪ್ಪನುಗ್ರಹವ ಅನುಗೊಂಬಂತೆ ಮಾಡಾ ಗುಹೇಶ್ವರ", "ಕುರುಹಳಿದ ಕರಸ್ಥಳದ ನಿಬ್ಬೆಳಗಿನ

ನೋಟದ ಎನ್ನ ಪರಮ ಗುರುವ ಕಂಡು ಬದುಕಿದೆನು ಕಾಣಾ ಗುಹೇಶ್ವರ". ಹೀಗೆ ಗುರುದರ್ಶನದಿಂದ ಅಂತರಂಗದ ಪ್ರಭೆ ಕೆರಳಿ ಈಶ್ವರನ ದರ್ಶನ ಪಡೆದು ಪ್ರಭು ತೃಪ್ತನಾಗುವನು. ಗುರುವಿನ ಕೃಪಾದೃಷ್ಟಿಯ ಮಹತ್ಪರಿಣಾಮವನ್ನು ಪ್ರಭು ಮನ ಮೆಚ್ಚಿ ಪ್ರಶಂಸಿಸುತ್ತಾನೆ. "ಕಾಣಬಾರದ ಕಾಯ, ನೋಡಬಾರದ ತೇಜ. ಉಪಮಿಸಬಾರದ ನಿಲವು. ಕಾರಣವಿಡಿದು ಕಣ್ಗೆ ಗೋಚರವಾದ ಸುಖವನೇನೆಂದು ಹೇಳುವೆ" ಎಂದು ಮುಂತಾಗಿ ಪ್ರಭು ನಲಿದಾಡುವನು. ಅನಿಮಿಷಯ್ಯನನ್ನು ತನ್ನ ಗುರುವೆಂದು ಭಾವಿಸಿ ಪ್ರಭು ಭಕ್ತಿಯಿಂದ ಬೇಡುತ್ತಾನೆ. "ನೀನೆನಗೆ ಗುರುವಪ್ಪಡೆ, ನಾ ನಿನಗೆ ಶಿಷ್ಯನಪ್ಪಡೆ, ಎನ್ನ ಕರಣಾದಿಗುಣಂಗಳ ಕಳೆದು, ಎನ್ನ ಕಾಯಧರ್ಮವ ತೊಡೆದು, ನೀನೆನ್ನ ಕಾಯದಲಡಗಿ, ನೀನೆನ್ನ ಪ್ರಾಣದಲಡಗಿ, ನೀನೆನ್ನ ಭಾವದಲಡಗಿ, ನೀನೆನ್ನ ಕರಸ್ಥಳಕೆ ಬಂದು ಕಾರುಣ್ಯವ ಮಾಡು ಗುಹೇಶ್ವರ" ಎಂದು ಪ್ರಭು ಗುರುವಿನೆದುರಿಗೆ ನಿಂತು ಭಕ್ತಿಯಿಂದ ಅಂಗಲಾಚಿ ಬೇಡುವನು. ಈ ಬಗೆಯ ಹೆಬ್ಬಯಕೆ ಸಾಧಕನಲ್ಲಿ ಯಾವಾಗ ಹುಟ್ಟುವುದೋ, ಆ ಕಾಲಕ್ಕೆ ಗುರುವು ಅನಾಯಾಸವಾಗಿ ದೊರಕುವನು. ಇದು ಸಾಧಕನ ಯೋಗ್ಯತೆಯನ್ನವಲಂಬಿಸಿರುವುದು. ಅವನಲ್ಲಿ ಉತ್ಕಟವಾದ ಇಚ್ಛೆ–ಅಂತಃಕರಣಶುದ್ಧಿ ಎಂದು ಸಹಜವಾಗಿ ಲಭಿಸುತ್ತವೆಯೋ ಅಂದೇ ಅವನಿಗೆ ಗುರುದರ್ಶನವಾಗುವುದೆಂಬುದಕ್ಕೆ ಪ್ರಭುವಿನ ಸಾಧನೆ ನಮಗೆ ದಿವ್ಯ ಆದರ್ಶವೆನಿಸಿದೆ.

ಶಿಷ್ಯನ ಭಕ್ತಿಗೆ ಮೆಚ್ಚಿ ಕಣ್ದೆರೆದು ನೋಡಿದ ಗುರು ಮತ್ತೆ ಕಣ್ಣನ್ನು ಮುಚ್ಚದಂತೆ ಅನಿಮಿಷದೃಷ್ಟಿಯಿಂದ ಶಿಷ್ಯನನ್ನೇ ನೋಡತೊಡಗಿದನು. ಅವನನ್ನು ತನ್ನ ಬಳಿಗೆ ಬರುವಂತೆ ಕಣ್ಣಿನಿಂದಲೇ ಸೂಚಿಸಿದನು. ಪ್ರಭು ಅವನ ಬಳಿಸಾರಿ ಕುಳಿತಾಗ, ಅವನಿಗೆ

ತನ್ನ ಕೈಯಲ್ಲಿದ್ದ ಲಿಂಗವನ್ನು ಕೊಟ್ಟನು. ಅನಿಮಿಷಯ್ಯನು ಪ್ರಭುವಿಗೆ ಲಿಂಗವನ್ನು ಅನುಗ್ರಹಿಸಿ ಆಶೀರ್ವದಿಸಲಿಕ್ಕಾಗಿಯೇ ಅವನಿಗಾಗಿ ಕಾದು ಕುಳಿತಿದ್ದನು. ಇನ್ನು ಅವನ ಕಾರ್ಯ ಮುಗಿಯಿತು. ಅವನೇ ಆ ಲಿಂಗದಲ್ಲಿ ಐಕ್ಯನಾಗಿ ಪ್ರಭುವಿನ ಕೈಗೆ ಸೇರಿದಂತಾಯಿತು. ಅದನ್ನು ದೇಹದ ಮೇಲೆ ಧರಿಸಿ ಭಕ್ತಿಯಿಂದ ಅರ್ಚಿಸುವಂತೆ ಗುರು ಪ್ರಭುವಿಗೆ ಆಜ್ಞಾಪಿಸುವನು. ಪ್ರಭು ಹಿಂದಿನಿಂದ ಪಡೆದಿದ್ದ 'ಯೋಗಸಾಧನೆಯ ಜೊತೆಗೆ ಭಕ್ತಿಯೂ ಸೇರಿದ್ದರಿಂದ ಅವನ ಯೋಗ ಪೂರ್ಣವಾಯಿತು ಎಂದು ಗುರು ಹರಸಿದನು. ಮಾನವನು ದೇಹ ಮನ ಬುದ್ಧಿ ಇವೆಲ್ಲವನ್ನೂ ಒಳಗೊಂಡು, ಇವೆಲ್ಲಕ್ಕೂ ಅತೀತ ಚೈತನ್ಯಸ್ವರೂಪನೂ ಆಗಿ ಎಲ್ಲದರಲ್ಲೂ ವ್ಯಾಪಿಸಿರುವನು. ವಿಶ್ವದ ಎಲ್ಲಾ ವಸ್ತುಗಳಲ್ಲೂ ಆ ಚೈತನ್ಯವನ್ನೂ, ಆ ಚೈತನ್ಯದಲ್ಲಿ ಎಲ್ಲವನ್ನೂ ಕಾಣುತ್ತ, ಇದ್ದೂ ಇಲ್ಲದಂತೆ ಬಾಳುವ ಸ್ಥಿತಿಯನ್ನು ಮಾನವನು ಪಡೆಯ ಬೇಕು. ಈ ಸ್ಥಿತಿಯನ್ನೂ ಮೀರಿ ಕೊನೆಗೆ ನಾನು ಎಂಬುದನ್ನೇ ಶಿವನಿಗರ್ಪಣೆಮಾಡಿ, ಅದು ತನ್ನಲ್ಲಿ ಸಂಪೂರ್ಣವಾಗಿ ಇಲ್ಲದಂತೆ ಮಾಡಿಕೊಳ್ಳಬೇಕು. ನಾನು ಗುರು ನೀನು ಶಿಷ್ಯ ಎಂಬುದು ಹೋಗಬೇಕು—ನಾನೆಂಬುದು ಅಜ್ಞಾನ, ನೀನೆಂಬುದು ಮಾಯೆ; ನಾನೆಂಬ ಜೀವಭಾವ, ನೀನೆಂಬ ಶಿವಭಾವ ಇವೆರಡೂ ಇಲ್ಲದ ಶೂನ್ಯಸ್ಥಿತಿಯನ್ನು ಸಂಪಾದಿಸುವುದೇ ನಿಜವಾದ ಯೋಗ. ಇದೇ ಶಿವಯೋಗ; ಇದು ಹಠಯೋಗ. ರಾಜಯೋಗಗಳಿಗಿಂತ ಮಿಗಿಲಾದುದು. ಆಕಾರವಿದ್ದರೂ ಆಕಾರದ ಅಭಿಮಾನ ವ್ಯಾಮೋಹಗಳು ಪೂರ್ಣವಾಗಿ ತೊಲಗಿರುವುದರಿಂದ ಕೇವಲ ಚೈತನ್ಯಸ್ಥಿತಿಯೊಂದೇ ಈ ಶೂನ್ಯಸ್ಥಿತಿಯಲ್ಲಿ ಇರುವಂತಹದು. ಚೈತನ್ಯದ ಪೂರ್ಣವಿಕಾಸವೊಂದೇ ಈ ಸ್ಥಿತಿಯಲ್ಲಿ ಉಳಿಯು

ವಂತಹದು. ಅನಿಮಿಷಯ್ಯನು ಈ ಸ್ಥಿತಿಯಲ್ಲಿ ಇದ್ದು, ಪ್ರಭುವಿಗೂ ಇದೇ ಸ್ಥಿತಿಯನ್ನು ದರ್ಶನದಿಂದಲೂ, ಲಿಂಗವನ್ನು ಅನುಗ್ರಹಿಸಿಯೂ ಆಶೀರ್ವದಿಸುತ್ತಾನೆ. "ನೀನು ಇನ್ನು ಎಲ್ಲಿದ್ದರೂ ಇದ್ದು ಬದ್ಧನಲ್ಲ–ಸುಳಿದು ಸೂತಕಿಯಲ್ಲ. ನೀನು ಲಿಂಗನಾಗಿ, ಜಗತ್ಕಲ್ಯಾಣಕ್ಕಾಗಿ ಲಿಂಗಲೀಲೆಯನ್ನು ತೋರಿಸು" ಎಂದು ಹೇಳುತ್ತ ಅನಿಮಿಷಯ್ಯನು ಹಾಗೆಯೇ ಕಣ್ಣುಮುಚ್ಚಿದನು. ಮಿಂಚಿನಂತಹ ಪ್ರಭೆಯೊಂದು ಅವನ ದೇಹದಿಂದ ಸಿಡಿದು ಬಂದು ತನ್ನ ಕೈಯಲ್ಲಿದ್ದ ಲಿಂಗದಲ್ಲಿ ಐಕ್ಯವಾದಂತೆ ಪ್ರಭು ಕಂಡನು.

ಪ್ರಭುವಿನ ಮೈಯಲ್ಲಿ ದಿವ್ಯಪ್ರಭೆ ವ್ಯಾಪಿಸಿತು; ಕಣ್ಣಿನಿಂದ ಆನಂದಬಾಷ್ಪಗಳು ಸುರಿದುವು. ಲಿಂಗವನ್ನು ಕಣ್ಣಿಗೊತ್ತಿಕೊಂಡು ತಲೆಯಮೇಲೆ ಹೊತ್ತುಕೊಂಡು ನಲಿದಾಡಿದನು. "ಈಶ್ವರ, ಇಷ್ಟು ಕಾಲದಮೇಲೆ ನಿನಗೆ ನನ್ನ ಮೇಲೆ ಕರುಣೆ ಬಂದಿತೇ? ನಿನ್ನನ್ನೇ ಹುಡುಕಿಕೊಂಡು ಅಲೆದೆ. ಇಂದು ಈ ಗವಿಯಲ್ಲಿ ನೀನು ನನಗೆ ಲಭಿಸಿದೆಯಾ, ಗುಹೇಶ್ವರ". ಎಂದು ಪ್ರಭು ಕಣ್ಣೀರಿಡುವನು. ಗುಹೆಯೊಳಗಿದ್ದ ಗುರುವು ಶಿವಲಿಂಗವನ್ನು ಅನುಗ್ರಹಿಸಿದ್ದುದರಿಂದ ಅದನ್ನೇ ತನ್ನ ಇಷ್ಟಲಿಂಗವೆಂದೂ, ತನ್ನ ಹೃದಯವೆಂಬ ಗುಹೆಯ ಈಶ್ವರನೆಂದೂ, ತನ್ನ ಪ್ರಾಣಲಿಂಗವೆಂದೂ ಪ್ರಭು ಭಾವಿಸುತ್ತಾನೆ. ಆತ್ಮಸಾಕ್ಷಿಯ ಸ್ಥಾನದಲ್ಲಿ ತನ್ನ ಹೃದಯದಲ್ಲಿ ಗೋಪ್ಯವಾಗಿದ್ದ ಗುಹೇಶ್ವರನನ್ನು ಗುರುಲಿಂಗವು ಎಚ್ಚರಗೊಳಿಸಿದುದಕ್ಕಾಗಿ ಪ್ರಭು ಆ ಲಿಂಗವನ್ನು ಗುಹೇಶ್ವರನೆಂಬ ಹೆಸರಿನಿಂದಲೇ ಕರೆದಿರುವನು. ಗುಹೇಶ್ವರ ಎಂಬ ಅಂಕಿತವೂ ಅವನ ವಚನಗಳಿಗೆ ಚೆನ್ನಾಗಿ ಒಪ್ಪುತ್ತದೆ. ಪ್ರಭುವಿಗೆ ಜೀವನದ ಗುರಿ ಸಿದ್ಧಿಸಿತು. ಅವನ ಅಂಗವೆಲ್ಲವೂ ಲಿಂಗಸಂಬಂಧದಿಂದ ಪಾವನವಾಯಿತು. ಇದರಿಂದ ಅವನಿಗೆ ಕರ್ಪುರದ ಗಿರಿಯನ್ನು

ಜೆಂಕಿ ವ್ಯಾಪಿಸಿದಂತಾಯಿತು. ಅವನ ಚೈತನ್ಯ ವಿಶ್ವವ್ಯಾಪಕವಾದ ಅಖಂಡಲಿಂಗದಲ್ಲಿ ಸಮರಸವಾಗಿ ಬೆರೆತು ವಿಶ್ವಮಯವಾಯಿತು. ಅಂದಿನಿಂದ ಪ್ರಭು ವಿಶ್ವದ ಮಹಾಶಕ್ತಿಯೂ ದಿವ್ಯಜ್ಯೋತಿಯೂ ವಿಶ್ವಪ್ರೇಮಿಯೂ ಆಗಿ ವಿಶ್ವವನ್ನು ಗುಪ್ತಶಕ್ತಿಯ ಕಡೆಗೆ ಎಚ್ಚರಿಸ ತೊಡಗಿದನು.

ಪ್ರಭುವಿಗೆ ಗುರುವಿನ ಪೂರ್ಣಾನುಗ್ರಹ ದೊರೆತರೂ ಗುರುವಿನೊಡನೆ ನಾಲ್ಕು ಮಾತನಾಡಲು ಅವಕಾಶವಾಗಲಿಲ್ಲವೆಂಬ ವ್ಯಥೆಯಾಗುವುದು. ಆದರೂ, ಗುರು ಹೇಳಬೇಕಾದ್ದನ್ನೆಲ್ಲಾ ಹೇಳಿದ್ದಾನೆ; ಮಾತಿಗೆ ಮೀರಿದ ಸತ್ಯವನ್ನು ತನ್ನ ನೋಟದಿಂದಲೇ, ಶಿಷ್ಯನ ಹೃದಯಕ್ಕೆ ತುಂಬಿದ್ದಾನೆ. ವಾಸ್ತವವಾಗಿ ನೋಡಿದರೆ ಗುರು ಯಾರು, ಶಿಷ್ಯನಾರು? ಒಬ್ಬನೇ ಇಬ್ಬರೂ ಆಗಿರುವನು. "ಗುರುಶಿಷ್ಯಸಂಬಂಧವನರಸಲೆಂದು ಹೋದರೆ ತಾನೇ ಗುರುವಾದ, ತಾನೇ ಶಿಷ್ಯನಾದ, ತಾನೇ ಲಿಂಗವಾದ, ಗುಹೇಶ್ವರ, ನಿಮ್ಮ ಶರಣನ ಕಾಯದ ಕೈಯಲ್ಲಿ ಲಿಂಗವ ಕೊಟ್ಟರೆ ಭಾವ ಬತ್ತಲೆಯಾಯಿತ್ತು". "ಜ್ಯೋತಿಯೊಳಗಣ ಕರ್ಪುರಕ್ಕೆ, ಅಪ್ಪುವಿನೊಳಗಿಪ್ಪ ಉಪ್ಪಿಂಗೆ, ಶ್ರೀ ಗುರುವಿನ ಹಸ್ತದೊಳಗಿರ್ಪ ಶಿಷ್ಯಂಗೆ, ಈ ಮೂರಕ್ಕೆಯೂ ಬೇರೆ ಕ್ರಿಯಾವರ್ತನೆಯುಂಟೇ ಗುಹೇಶ್ವರಾ", "ಕಾಣಬಾರದ ಲಿಂಗವು ಕರಸ್ಥಳಕ್ಕೆ ಬಂದರೆ ಎನಗಿದು ಸೋಜಿಗ., ಎನಗಿದು ಸೋಜಿಗ, ಅಹುದೆನಲಮ್ಮೆನು, ಅಲ್ಲೆನಲಮ್ಮೆನು, ಗುಹೇಶ್ವರಲಿಂಗ ನಿರಾಳ ನಿರಾಕಾರ, ಬಯಲು ಆಕಾರವಾದರೆ". "ಘನಕ್ಕೆ ಘನವಾದ ವಸ್ತು ತಾನೇ ಗುರುವಾದ, ತಾನೇ ಲಿಂಗವಾದ, ತಾನೇ ಜಂಗಮವಾದ, ತಾನೇ ಪ್ರಸಾದವಾದ, ತಾನೇ ಮಂತ್ರವಾದ, ತಾನೇ ಸಕಲ ವಿದ್ಯಾಸ್ವರೂಪವಾದ. ಇಂತಿವೆಲ್ಲವನೊಳಕೊಂಡು ಎನ್ನ ಕರಸ್ಥಳಕ್ಕೆ ಬಂದು ಇನ್ನು ನಿರ್ವಿಕಾರ

ಗುಹೇಶ್ವರ” ಎಂದು ಕರಸ್ಥಳದ ಇಷ್ಟಲಿಂಗದಲ್ಲಿ ಪ್ರಭು ಗುರುವನ್ನೂ, ತನ್ನ ಪ್ರಾಣಕಲೆಯನ್ನೂ, ಅವರಂತೆ ವಿಶ್ವವ್ಯಾಪಕವಾದ ವಿಶ್ವಾತ್ಮನನ್ನೂ ಕಂಡು ಮನದಲ್ಲಿ ಪೂರ್ಣತೃಪ್ತಿಹೊಂದುವನು. ಕಾಣಬೇಕಾದುದನ್ನು ಕಾಣಲಿಕ್ಕಾಗಿ ಪ್ರಭು ಇಷ್ಟುಕಾಲ ಅಲೆದಾಡಿದನು. ಇಷ್ಟವಾದ ವಸ್ತುವನ್ನು ಕಂಡು ಪಡೆದಮೇಲೆ ಇನ್ನು ಏನನ್ನು ಹುಡುಕಬೇಕು? ಕಾಣದುದನ್ನು ಅರಸುವರಲ್ಲದೆ ಕಂಡದ್ದನ್ನು ಅರಸುವರೆ? ವಿಶ್ವವೆಲ್ಲಕ್ಕೂ ಕಾರಣವಾದ ಪರಾತ್ಪರ ಸತ್ಯವೇ ಲಿಂಗಸ್ವರೂಪದಿಂದ ತನ್ನ ಕರಸ್ಥಲದಲ್ಲಿ ಅಡಕವಾಗಿರಲು ತಾನು ಸಂಪೂರ್ಣ ನಿರ್ವಿಕಾರ ನಿರಂಜನನಾದೆನೆಂದು ಪ್ರಭು ತನ್ನ ಕೈಯಲ್ಲಿರುವ ಲಿಂಗವನ್ನು ನೋಡುತ್ತ ಪರಮಾನಂದಗೊಂಡನು. ಅದನ್ನು ಒಂದು ವಸ್ತ್ರದಲ್ಲಿ ಕಟ್ಟಿ ಕೊರಳಿಗೆ ಕಟ್ಟಿಕೊಂಡು ಗುರು ಅನಿಮಿಷದೇವನನ್ನು ಸ್ಮರಿಸಿ ನಮಸ್ಕರಿಸಿ ಗವಿಯಿಂದ ಮುಂದೆ ಹೊರಡುವನು.

ಪ್ರಭುವಿನ ಷಟ್ಸ್ಥಲ ಉಪದೇಶ

ಪ್ರಭು ಗುರುಕೃಪೆಯಿಂದ ಪೂರ್ಣಸಿದ್ಧನಾಗಿ ತಾನು ಕಂಡ ಬೆಳಕನ್ನು ಜಗತ್ತಿಗೆ ಹರಡಲು ಮುಂದೆ ಹೊರಟನು. ಆಗಿನ ಕಾಲದ ಭಕ್ತರ ಸ್ಥಿತಿಯನ್ನು ಕಂಡು ಪ್ರಭು ಮನನೊಂದು ಹೇಳುತ್ತಾನೆ. ಭಕ್ತನಾಗಿ ಭವನಾಸ್ತಿಯಾಗದಿದ್ದರೆ, ಆ ಉಪದೇಶವ ಕೊಟ್ಟ ಗುರು, ಪಡೆದ ಶಿಷ್ಯ ಇವರಿಬ್ಬರ ಮನೆಯಲ್ಲಿ ಮಾರಿ ಹೋಗಲಿ, ಗುಹೇಶ್ವರಲಿಂಗ ಅತ್ತಲೆ ಹೋಗಲಿ. ಗುರು ಭವಿಯನ್ನು ಭಕ್ತನನ್ನಾಗಿಸಿ, ಅವನ ಪೂರ್ವಾಶ್ರಯವಾದ ಭವಿತನವನ್ನು ಕಳೆದು ಪುನರ್ಜನ್ಮವನ್ನು ದೊರಕಿಸಿದ ಮೇಲೆ ಮರಳಿ,

ಪೂರ್ವಸ್ಥಿತಿಯನ್ನು ಸ್ಮರಿಸುವ ಗುರುದ್ರೋಹಿ ಶಿವಪಥಕ್ಕೆ ಸಲ್ಲನು. ಹೆಸರಿಲ್ಲದ ಲಿಂಗಕ್ಕೆ ಹೆಸರಿಡುವ ಲಿಂಗದ್ರೋಹಿ ಶಿವಾನುಗ್ರಹಕ್ಕೆ ದೂರವಾಗುವನು. ಹೆಸರಿಲ್ಲದ ಗುರು-ಹೆಸರಿಲ್ಲದ ಲಿಂಗ—ಹೆಸರಿಲ್ಲದ ಶಿಷ್ಯ, ಇಂತೀ ತ್ರಿವಿಧ ಸ್ಥಲವನರಿಯದೆ ಕೆಟ್ಟರು ನಿಜವನರಿಯದ ಭಕ್ತರು. ಲಿಂಗವನ್ನರಿಯದೆ ಬೇರೆ ಏನನ್ನರಿದರೂ ಫಲವಿಲ್ಲ. ಲಿಂಗವನ್ನರಿದ ಬಳಿಕ ಮತ್ತೆ ಏನನ್ನೂ ಅರಿಯುವ ಆವಶ್ಯಕತೆ ಇಲ್ಲ. ಸರ್ವಕ್ಕೂ ಕಾರಣವೆಂದು ಲಿಂಗವನ್ನು ತಿಳಿದು ಲಿಂಗಸಂಗವ ಮಾಡಿ ಸಂಗಸುಖದೊಳಗೋಲಾಡುವವನು ಸದ್ಭಕ್ತನೆನಿಸುವನು. ಆದರೆ ಲಿಂಗವನ್ನು ತನ್ನೊಳಗೆ ಸಮಾವೇಶಗೊಳಿಸಲು ಸತ್ಕ್ರಿಯಾಚರಣೆ ಆವಶ್ಯಕ. ಕ್ರಿಯಾಮಥನವಿಲ್ಲದೆ ಇಕ್ಷುವಿನೊಳಗಿನ ಮಾಧುರ್ಯ ಕಾಣಲಾರದು. ಅದರಂತೆ ತಿಲದೊಳಗಿನ ತೈಲವೂ ಹೊರಗೆ ಬರಲಾರದು. ಹಾಗೆಯೇ, ಕ್ಷೀರದೊಳಗಿನ ತುಪ್ಪವೂ ಕಾಣಲಾರದು. ಹೀಗೆ ಸತ್ಕ್ರಿಯಾಚರಣೆಯಿಂದ ಕರಸ್ಥಲದ ಲಿಂಗವನ್ನು ಮನಸ್ಸಿಗೆ ತಂದುಕೊಂಡು, ಮನದ ಲಿಂಗವನ್ನು ಸರ್ವಾಂಗದೊಳಗೆ ಸಮನ್ವಯಿಸಿಕೊಂಡವನಿಗೆ ಲಿಂಗದೊಡನೆ ಸಮರಸವಾಗಿ ಬೆರೆಯುವ ಶಿವಯೋಗ ಸಂಘಟಿಸುವುದು. ಈ ಬಗೆಯ ಲಿಂಗಸಂಬಂಧದಿಂದಲೇ ದೇಹಪ್ರಾಣಭಾವಗಳೂ ಲಿಂಗವಾಗಿ ಭಕ್ತನು ಉರಿಯುಂಡ ಕರ್ಪುರವಾಗುವನು. ಈ ಬಗೆಯ ಲಿಂಗನಿಷ್ಠೆಯಿಲ್ಲದೆ ಮನಬಂದ ಪರಿಯಲ್ಲಿ ಲೋಕದ ವಿಷಯಗಳನ್ನು ಬಯಸುವವರಿಗೆ ಪ್ರಭು ಹೀಗೆ ಹೇಳಿದ್ದಾನೆ. “ಕ್ಷೀರಸಾಗರದೊಳಗಿದ್ದ ಹಂಸೆ ಹಾಲ ಬಯಸಲುಂಟೆ? ಪುಷ್ಪದೊಳಗಿದ್ದ ದುಂಬಿ ಪರಿಮಳವ ನರಸಲುಂಟೆ? ಕಡಲೊಳಗಿದ್ದ ಕಪ್ಪೆ ಜಲವ ಬಯಸಲುಂಟೆ? ಇದೆಂತಯ್ಯಾ, ತಾ ಲಿಂಗದೊಳಗಿದ್ದು ಬೇರೆ ಇತರ ಕಾಮ್ಯ

ದೊಳಗಿಪ್ಪ ಭ್ರಾಂತರನೇನೆಂಬೆನಯ್ಯ ಗುಹೇಶ್ವರ". ಹೀಗೆ ಲಿಂಗದೇವನು ಭಕ್ತನ ಸಕಲ ಅನಿಷ್ಟಗಳನ್ನು ಪರಿಹರಿಸುತ್ತ ಅವನ ಯೋಗಕ್ಷೇಮಗಳನ್ನು ವಹಿಸಿಕೊಂಡು ಅವನೊಡನೆಯೇ ಇರುವಾಗ್ಗೆ ಭಕ್ತನು ಅವನನ್ನು ಗಮನಿಸದೆ, ಅವನಿಗಾಗಿ ಹೊರಗಡೆ ಹುಡುಕಾಡುವುದು ಶೋಚನೀಯವೆನಿಸಿದೆ. ತನ್ನೊಳಗೆ ಗುಪ್ತವಾಗಿ ನೆಲಸಿರುವ ಲಿಂಗದೇವನನ್ನು ಗುರುವಿನಿಂದ ಹೊರಗೆ ಪಡೆದಮೇಲೆಯೂ ಭಕ್ತನು ಧಾವತಿಗೊಂಡು ದುಃಖಕ್ಲೇಶಗಳಿಂದ ನರಳುವುದಾದರೆ ಅಂತಹ ಧಾವತಿಗಿಂತ ಹಿಂದಿನ ಭವಿತನವೇ ಲೇಸೆನಿಸುವುದು. ಹೀಗೆ ಆತ್ಮವಿಶ್ವಾಸವಿಲ್ಲದೆ ಮಾಡುವ ಅರ್ಚನೆ ಆತ್ಮೈಕ್ಯತೆಯನ್ನು ಎಂದಿಗೂ ಸಾಧಿಸಲಾರದು. ವ್ಯವಸಾಯ ಮಾಡಿದ ಮೇಲೆ, ಮನೆಯ ಜನರಿಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಪಡೆಯದ ಮೇಲೆ ಅಂತಹ ವ್ಯವಸಾಯದಿಂದಾಗುವ ಫಲವೇನು? ವ್ಯವಹಾರ ಮಾಡುವವನು ತನ್ನ ಜೀವನಕ್ಕೆ ಬೇಕಾದಷ್ಟು ಹಣವನ್ನು ಸಂಪಾದಿಸದಿದ್ದರೆ, ಅಂತಹ ವ್ಯವಹಾರದಿಂದ ಆಗುವ ಫಲವಾದರೂ ಏನು? ಒಬ್ಬ ಪ್ರಭುವನ್ನಾಶ್ರಯಿಸಿ ತನಗೆ ಬೇಕಾದ ಸಲಕರಣೆಗಳನ್ನು ಪಡೆಯದಮೇಲೆ, ಆ ಬಗೆಯ ಆಶ್ರಯದಿಂದ ಆಗುವ ಫಲವಾದರೂ ಏನು? ಲಿಂಗವನ್ನು ಪಡೆದಮೇಲೆ ಲಿಂಗದ ಸ್ವಭಾವಗುಣಗಳು ಭಕ್ತನಲ್ಲಿ ವ್ಯಾಪಿಸದೇ ಇದ್ದರೆ ಮತ್ತು ಅವನ ಅಭಿಮಾನ ಅಹಂಕಾರಗಳು ತೊಲಗದಿದ್ದರೆ, ಅಂತಹ ಲಿಂಗ ಭಕ್ತರ ಸಂಬಂಧದಿಂದಾಗುವ ಪ್ರಯೋಜನವಾದರೂ ಏನು? ಲಿಂಗಪೂಜಕನೂ ಆಸೆರೋಷಗಳಿಂದ ಸಂಕಟಪಡುವುದಾದರೆ, ಅವನು ಹಿಂದಿನ ದಾರಿದ್ರ್ಯದೌರ್ಬಲ್ಯಗಳಲ್ಲಿಯೇ ತೊಳಲುತ್ತಿರುವುದು ಮೇಲಲ್ಲವೆ? ಮೇರುವನ್ನು ಸೇರಿದರೂ ಕಾಗೆ ಹೊಂಬಣ್ಣವಾಗದಿದ್ದರೆ ಅದಕ್ಕೆ ಮೇರುವಿಗಿಂತಲೂ ಹುಲ್ಲು

ಮೊರಡಿ ಸಾಲದೆ? ಮೇರುವೆಂಬುದು ಸುವರ್ಣಪರ್ವತ ವೆನಿಸಿದೆ. ಅದರ ಸಂಪರ್ಕದಿಂದ ಕಾಗೆಯೂ ಹೊಂಬಣ್ಣ ವಾಗಲೇಬೇಕು. ಹಾಗೆ ಆಗದಿದ್ದರೆ ಅದಕ್ಕಿಂತಲೂ ಇಲ್ಲಿಯೇ ನೆಲದಲ್ಲಿ ಕಾಗೆ ಬಿದ್ದು ಹೊರಳಾಡುವುದು ಮೇಲು. ಹಾಗೆ ಭಕ್ತನು ತನ್ನ ಚಿತ್ಕಲೆಯನ್ನು ಗುರುವಿನಿಂದ ಪಡೆದು ಅರ್ಚಿಸುತ್ತ, ಧೈರ್ಯ ವಿಶ್ವಾಸ ನಿಶ್ಚಯಗಳನ್ನು ತಾಳದೆ, ನಿತ್ಯವೂ ಭಯಭ್ರಾಂತಿ ಗಳಿಂದ ಸಾಯುತ್ತಿದ್ದರೆ, ಇಂತಹ ಅರ್ಚನೆಗಿಂತಲೂ ಹೊರಗಿನ ಯಮನ ಬಾಧೆಯೇ ಉತ್ತಮವೆನಿಸುವುದಲ್ಲವೆ? ಪಂಚೇಂದ್ರಿಯ ಗಳಿಂದ ಕೂಡಿದ ಈ ದೇಹದೊಳಗಿದ್ದು ಮಾನವರು ತಾವಾರೆಂದರಿ ಯದೆ ಬಾಯಿಗೆ ಬಂದಂತೆ ನುಡಿವರು ಮತ್ತು ಮನಬಂದಂತೆ ಭೋಗಿಸುವರು. ತಾವು ಜ್ಞಾನಿಗಳೆಂದು ಅಹಂಕಾರಪಡುವವರನ್ನು ನೋಡಿ ಪ್ರಭು ಹೀಗೆ ಎಚ್ಚರಿಸುತ್ತಾನೆ. ಗುರುಹಿರಿಯರು ತೋರಿಸಿದ ಉಪದೇಶದಿಂದ ತಾನೇ ಬ್ರಹ್ಮವೆಂದು ಹೇಳುತ್ತ, ವಾಗದ್ವೈತವ ಕಲಿತು ವಾದಿಸುವ ಜನರು ಭಕ್ತಿಯನರಿಯರು, ಯುಕ್ತಿಯನರಿಯರು, ಮುಕ್ತಿಯನರಿಯರು, ಆಗುಹೋಗೆಂಬುದ ನರಿಯರು. ತಾನೇ ಬ್ರಹ್ಮವೆಂದು ಬಾಯಿಂದ ಹೇಳಿದ ಮಾತ್ರಕ್ಕೆ ಮಾನವನು ಮಾಯೆಯ ಬಾಧೆಯಿಂದ ಪಾರಾಗಲಾರನು. ಭಕ್ತಿ ಯನ್ನಾಚರಿಸಿ ದೇಹೇಂದ್ರಿಯಗಳನ್ನು ಗುರುಜಂಗಮಸೇವೆಗೆ ಉಪ ಯೋಗಿಸಿ ಸಕಲಸುಖಗಳನ್ನೂ ಲಿಂಗಕ್ಕರ್ಪಿಸುತ್ತ, ಲಿಂಗದ ನಿರ್ಲಿಪ್ತಸ್ಥಿತಿಯನ್ನು ಭಕ್ತನು ಸಾಧಿಸಬೇಕಾಗಿದೆ. ಸೋऽಹಂ ಎಂಬುದನ್ನು ಗುರುವಿನಿಂದ ಕೇಳಿ ದಾಸೋಹವ ಮಾಡದವನಿಗೆ ಗುಹೇಶ್ವರನ ಸಾಕ್ಷಾತ್ಕಾರವಾಗಲಾರದು. ಹಣತೆ ಬತ್ತಿ ಎರಡೂ ಇದ್ದು ಎಣ್ಣೆ ಇಲ್ಲದಿದ್ದರೆ ಜ್ಯೋತಿ ಹೇಗೆ ಉರಿದೀತು? ಗುರು ಲಿಂಗ ಎರಡೂ ಇದ್ದು ಶಿಷ್ಯನಲ್ಲಿ ಸುಜ್ಞಾನ ಅಂಕುರಿಸದೇ ಇದ್ದಲ್ಲಿ

ಭಕ್ತಿ ಹೇಗೆ ದೊರಕೀತು? ಚಿತ್ರಗಾರನು ಸುಂದರವಾದ ಚಿತ್ರದಲ್ಲಿ ಒಂದು ರೂಪವನ್ನು ಬರೆಯುವನಲ್ಲದೆ ಪ್ರಾಣಕಲೆಯನ್ನು ಬರೆದು ತೋರಿಸಲಾರನು. ಹಾಗೆಯೇ ಶಿವಾಗಮದಲ್ಲಿ ಹೇಳಿರುವ ಪ್ರಕಾರ ಕ್ರಿಯಾದೀಕ್ಷೆಯನ್ನು ನಡೆಸಿ ಗುರುವು ಭಕ್ತನಿಗೆ ಲಿಂಗವನ್ನು ಅನುಗ್ರಹಿಸಬಹುದಲ್ಲದೆ ಭಕ್ತಿಯನ್ನು ಹೇಳಿ ತೋರಿಸಲಾರನು. ಪ್ರಾಣದಂತೆ ಭಕ್ತಿಯೂ ಅವರವರ ವಿಶ್ವಾಸಕ್ಕೆ ವಿಷಯವಾಗಿರುವುದು. ಅದನ್ನು ಭಕ್ತನು ತಿಳಿದು ಭಾವಿಸಿ ಆಚರಿಸಬೇಕೇ ಹೊರತು ಬೇರೆಯವರಿಂದ ಮಾಡಿಸಲಾಗುವುದಿಲ್ಲ. ಹೃದಯ ಶುದ್ಧಿ ಇಲ್ಲದವನಲ್ಲಿ ಭಕ್ತಿ ಹುಟ್ಟಲಾರದು. ಭಕ್ತಿ ಇಲ್ಲದವನಲ್ಲಿ ದೇವನೆಂದಿಗೂ ಇರಲಾರನು. ನಡೆವೆಡೆಯಲ್ಲಿ, ನುಡಿವೆಡೆಯಲ್ಲಿ, ನೋಡುವೆಡೆಯಲ್ಲಿ, ವಸ್ತುವಂ ಪಿಡಿವೆಡೆಯಲ್ಲಿ, ಭೋಗಿಪೆಡೆಯಲ್ಲಿ ಲಿಂಗವನ್ನು ಮುಂದುಮಾಡಿ, ಅದಕ್ಕೆ ತಾನು ದಾಸನಾಗಿ ಅದರ ಸೇವೆಮಾಡುವುದೇ ಭಕ್ತಿಮಾರ್ಗ. ಇಂತಹ ಭೃತ್ಯಾಚಾರವನ್ನೇ ಲಿಂಗದೇವನು ಭಕ್ತನಿಂದ ಅಪೇಕ್ಷಿಸುವನು. ಪ್ರಭು ಭಕ್ತರಿಗೆ ಭಕ್ತಿಯ ಮಹತ್ವವನ್ನು ಮನಮುಟ್ಟುವಂತೆ ಹೀಗೆ ಬೋಧಿಸಿ ಎಚ್ಚರಿಸುವನು.

"ಮುಂದುಜಾವದಲೆದ್ದು ಲಿಂಗದಂಘ್ರಿಯ ಮುಟ್ಟಿ ಸುಪ್ರಭಾತ ಸಮಯದಲ್ಲಿ ಸದ್ಭಕ್ತರ ಮುಖವ ನೋಡುವುದು. ಹುಟ್ಟಿದುದಕ್ಕಿದೇ ಸಫಲ ನೋಡಾ. ಸತ್ಯವಚನವಿಂತೆಂದುದು". ಪ್ರಭುವಿನ ಈ ವಚನ ಮಾನವಜನ್ಮದ ಉದ್ದೇಶವನ್ನು ಎಲ್ಲರಿಗೂ ಮನವರಿಕೆಮಾಡುತ್ತಿರುವುದು. ಭಕ್ತನು ಬೆಳಗಾದರೆ ಲಿಂಗದ ಧ್ಯಾನ, ಸ್ಮರಣೆ, ಸ್ಪರ್ಶ, ದರ್ಶನಗಳಿಂದ ತನ್ನ ಜನ್ಮದ ಸಾರ್ಥಕತೆಯನ್ನು ಸಾಧಿಸತೊಡಗಬೇಕು. ಈ ಸ್ಥಿತಿಯಲ್ಲಿ ಇಲ್ಲದವರನ್ನು ಗುಹೇಶ್ವರನು ಒಲ್ಲನು. ಹೀಗೆ ಪ್ರಭು ಕತ್ತಲೆಯ ಮರೆಯಲ್ಲಿ ಪರ

ದಾಡುವ ಸಾಧಕರಿಗೆ ತತ್ತ್ವದ ಹಾದಿಯನ್ನೂ, ಭಕ್ತಿಯ ಆಚರಣೆಯನ್ನೂ ಉಪದೇಶಿಸತೊಡಗಿದನು. ದೇಹದಿಂದ ವ್ಯವಹರಿಸುವ ಸಾಮರ್ಥ್ಯವಿರುವವರೆವಿಗೂ ಕಾಯಕ್ಕೆ ಮಜ್ಜನ, ಪ್ರಾಣಕ್ಕೆ ಓಗರ ಇವನ್ನು ಮಾಡಲೇಬೇಕು. ಸುಳಿವ ಸುಳುಹು ಉಳ್ಳನ್ನಕ್ಕರ ಇವನ್ನು ಮಾಡಲೇಬೇಕು. ಲಿಂಗವನ್ನೂ ಪ್ರಾಣವನ್ನೂ ಒಂದುಗೂಡಿಸಿ ನಿರಂಜನಸ್ಥಿತಿಯನ್ನು ಜೀವಿತಕಾಲದಲ್ಲಿಯೇ ಪಡೆಯುಲಿಕ್ಕಾಗಿ ಸಾಧಕನು ಭಕ್ತಿಯನ್ನಾಚರಿಸಬೇಕೆಂದು ಪ್ರಭು ಒತ್ತಿ ಹೇಳಿದ್ದಾನೆ. ಇಂದ್ರಿಯಗಳು ಯಾವಾಗಲೂ ವಿಶ್ವವ್ಯಾಪಕವಾದ ತೇಜಸ್ಸನ್ನೇ ನೋಡುವಂತೆಯೂ, ಕೇಳುವಂತೆಯೂ, ಮುಟ್ಟುವಂತೆಯೂ, ರುಚಿಸುವಂತೆಯೂ, ಮೂಸಿಸುವಂತೆಯೂ ಪ್ರೇರಿಸುವ ದಿವ್ಯ ಸಂಜೀವಿನಿಯೆಂದು ಭಕ್ತಿಯ ಮಹತ್ತ್ವವನ್ನು ಪ್ರಭು ಪ್ರಶಂಸಿಸಿದ್ದಾನೆ. ಕರಸ್ಥಳದೊಳಗೆ ಲಿಂಗವಿದ್ದ ಬಳಿಕ ಮತ್ತೆ ಬೇರೆ ಚಿಂತೆ ಏಕೆ ಮಾನವನಿಗೆ ಎಂದು ಕೇಳುತ್ತಾನೆ ಪ್ರಭು. ಅಮೃತ ಸಾಗರದೊಳಗೆ ಇರುವವನಿಗೆ ಆಕಳ ಚಿಂತೆ ಏಕೆ? ಶ್ರೀ ಗುರುವಿನೊಳಗಿದ್ದವನಿಗೆ ತತ್ತ್ವವಿದ್ಯೆಯ ಚಿಂತೆ ಏಕೆ? ಪ್ರಸಾದದೊಳಗಿರುವವನಿಗೆ ಬೇರೆ ಮುಕ್ತಿಯ ಚಿಂತೆ ಏಕೆ? ಸಾಧಕನು ತನಗೆ ದೊರೆಯುತ್ತಿರುವ ಇಂದ್ರಿಯಸುಖಗಳೆಲ್ಲವನ್ನೂ ಅಲ್ಲಲ್ಲಿಯೇ ಆಗಾಗಲೇ ತನ್ನಲ್ಲಿರುವ ಲಿಂಗದೇವನಿಗೆ ಅರ್ಪಿಸತೊಡಗಿದರೆ, ಅವೆಲ್ಲವೂ ಆವನ ಪಾಲಿಗೆ ಪ್ರಸಾದವೇ ಆಗತೊಡಗುವುವು. ಹೀಗೆ ಪ್ರಸಾದವನ್ನು ಲಿಂಗದೊಡನೆ ಭೋಗಿಸುವ ಸದ್ಭಕ್ತನಿಗೆ, ಆ ಪ್ರಸಾದವೇ ನಿತ್ಯಸುಖವಾಗಿರುವಾಗ, ಅದಲ್ಲದೆ ಬೇರೆ ಮುಕ್ತಿಯನ್ನು ಹುಡುಕಿ ಪಡೆಯಬೇಕೆಂಬ ಚಿಂತೆ ಎಲ್ಲಿಂದ ಬಂದೀತು? ಪ್ರಭುವಿನ ಈ ಮಾತನ್ನು ಕೇಳಿದ ಸಾಧಕರಿಗೆ ಹೆಚ್ಚಿನ ಆತ್ಮವಿಶ್ವಾಸನಿಶ್ಚಯಗಳು ಸಂಭವಿಸಿ, ದುಃಖದಾರಿದ್ರ್ಯ ದೌರ್ಬಲ್ಯಗಳು ತೊಲಗುತ್ತವೆ.

ಆದರೆ, ಲಿಂಗದೇವನ ಸೇವೆ—ಇಂದ್ರಿಯಸುಖಗಳ ಸಮರ್ಪಣೆ ಇವನ್ನು ಮಾತ್ರ ಭಕ್ತನು ನಿಷ್ಠೆಯಿಂದ ನಡೆಯಿಸಬೇಕು. ಎದೆಯ ಮೇಲೆ ಲಿಂಗವನ್ನು ಕಟ್ಟಿಕೊಂಡು, ಅನಾಚಾರದುರಾಚಾರಗಳಲ್ಲಿ ನಿರತನಾದವನಿಗೆ ಲಿಂಗಪ್ರಸಾದವೇ ದೊರೆಯದು. ಅಂಗ ಜೀವಿಗಳೆಲ್ಲ ಅಶನಕ್ಕೆ ಒಂದೆಡೆ ನೆರೆದು ಲಿಂಗವಾರ್ತೆಯನ್ನು ನುಡಿಯುವರು. ಕಾಯಜೀವಿಗಳೆಲ್ಲರೂ ಕಳವಳಿಸಿ ನುಡಿಯು ವರು. ಹೀಗೆ ಮನಬಂದ ಪರಿಯಲ್ಲಿ ನುಡಿವವರಿಗೆ ಲಿಂಗತತ್ತ್ವ ತಿಳಿಯದು. "ಸುತ್ತಿ ಸುತ್ತಿ ಬಂದಡಿಲ್ಲ. ಲಕ್ಷಗಂಗೆಯ ಮಿಂದ ಡಿಲ್ಲ. ಅಂದಂದಿಂಗೆ ಅತ್ತಲಿತ್ತ ಹರಿವ ಮನವ ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚ ಬರಿಯ ಬೆಳಗು ಲಿಂಗವು." ಹೀಗೆ ಮನಸ್ಸನ್ನು ವಿಷಯಗಳ ಕಡೆಯಿಂದ ತಪ್ಪಿಸಿ ಶಿವನ ಕಡೆಗೆ ತಿರುಗಿಸುವುದೇ ಶಿವಯೋಗ. ಆಯಾ ಕಾಲದಲ್ಲಿ ಒದಗುವ ಸುಖಭೋಗಗಳನ್ನು ಶಿವಪ್ರಸಾದವೆಂದು ಭಾವಿಸುವುದೊಂದೇ ಈ ಶಿವಯೋಗ ಸಾಧನೆಯ ಜೀವಾಳ. ಮನಸ್ಸು ಸಹಜವಾಗಿ ನಿರ್ಮಲವಾದದ್ದು; ಆದರೆ, ಅದರಲ್ಲಿ ಚಾಂಚಲ್ಯವೆಂಬ ದೋಷ ಒಂದಿದೆ. ಅದನ್ನು ತೊಲಗಿಸಿದರೆ ಅದೇ ಮಹಾಲಿಂಗವೆನಿಸುವುದು. ಪ್ರಭುವಿನ ದೃಷ್ಟಿಯಲ್ಲಿ ಮನಸ್ಸು ಕೇವಲ ಜ್ಯೋತಿ; ಅದು ವರ್ಣಾತೀತ. ಅದು ಯಾವ ವಿಷಯಕ್ಕೆ ಅಂಟುವುದೋ ಅದರ ಸ್ವರೂಪ ಸ್ವಭಾವಗಳನ್ನು ಹೊಂದುವುದು. ಹೊನ್ನು ಹೆಣ್ಣು ಮಣ್ಣು ಯಾವುದೂ ಮನಸ್ಸಿನ ವಿಷಯಗಳಲ್ಲ; ಅವೆಲ್ಲವೂ ಜಗಕ್ಕಿಕ್ಕಿದ ವಿಧಿ. ತನ್ನದೆಂಬುದು ಜ್ಞಾನರತ್ನ. ಅದನ್ನು ಮನಸ್ಸು ಅಲಂಕರಿಸಿದರೆ ಅದಕ್ಕಿಂತ ಬೇರೆ ಸಿರಿವಂತರು ಯಾರೂ ಇರ ಲಾರರು. ಹೀಗೆ ಮನಸ್ಸು ಮಹಾವಿಷಯನಾದ ಮಹಾದೇವನ ಚಿಂತನೆಯಲ್ಲಿ ತೊಡಗಿದರೆ, ನಿರಂಜನಮಹಾದೇವನಾಗಿ ಶೋಭಿಸ

ಬಲ್ಲುದು. ಇಂತಹ ನಿರ್ಮಲವಾದ ಮನದಲ್ಲಿ ಬೆರೆತವನು ನಿತ್ಯ ಸುಂದರನೂ ನಿರ್ಲಿಪ್ತನೂ ಆಗಿ ಶಿವಾನಂದವನ್ನನುಭವಿಸುತ್ತಿರು ವನು. ಹೀಗೆ ನಿರ್ಮಲವಾದ ಮನವೇ ಪರಮಾತ್ಮನ ಆವಾಸಸ್ಥಾನ ವೆನಿಸುವುದು.

'ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ'
"ನಾಹಂ ವಸಾಮಿ ಕೈಲಾಸೇ ನ ಮೇರೌ ನ ಚ ಮಂದರೇ।
ಮದ್ಭಕ್ತಾ ಯತ್ರ ತಿಷ್ಠಂತಿ ತತ್ರ ತಿಷ್ಠಾಮಿ ಪಾರ್ವತಿ॥"

ಇಂತಹ ಸದ್ಭಕ್ತರ ನಿರ್ಮಲವಾದ ಮನಸ್ಸಿನಲ್ಲಿ ಶಿವನು ನಿರ್ಲಿಪ್ತ ನಾಗಿ ನೆಲಸಿರುವುದಾಗಿ ಹೇಳಿದ್ದಾನೆ. ಭಕ್ತರ ಅಂಗಳವೇ ಅವನಿಗೆ ಕೈಲಾಸ. ಅಲ್ಲಿಯೇ ಎಲ್ಲಾ ತೀರ್ಥಗಳೂ ಸಮಸ್ತ ಪ್ರಮಥ ಗಣಗಳೂ ಇರುವುದರಿಂದ ಮನೋನೈರ್ಮಲ್ಯವೇ ಪರಮಾತ್ಮನ ದಿವ್ಯಪ್ರಭೆಯು ಪೂರ್ಣವ್ಯಾಪ್ತಿಗೆ ಪುಣ್ಯಕ್ಷೇತ್ರವೆನಿಸಿದೆ. ದೇಹ ದೊಳಗೆ ಇಂತಹದೊಂದು ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆಂದು ಭಕ್ತರಿಗೆ ಪ್ರಭು ಎಚ್ಚರಿಸುತ್ತಾನೆ. "ತನು ನಿಮ್ಮ ಪೂಜಿಸುವ ಕೃಪೆಗೆ ಸಂದುದು. ಮನ ನಿಮ್ಮ ನೆನೆವ ಧ್ಯಾನಕ್ಕೆ ಸಂದುದು. ಪ್ರಾಣ ನಿಮ್ಮ ರತಿಸುಖಕ್ಕೆ ಸಂದುದು. ಇಂತೀ ತನು ಮನ ಪ್ರಾಣ ನಿಮಗೆ ಸಂದಿಪ್ಪ ನಿಸ್ಸಂಗಿಯಾದ ನಿಶ್ಚಟನಿಜಲಿಂಗೈಕ್ಯನಾಗಬೇಕು" ಎಂದು ಪ್ರಭು ಭಕ್ತರಿಗೆ ಬೋಧಿಸುತ್ತಾನೆ. ಈ ಬಗೆಯ ಭಕ್ತಿನಿಷ್ಠೆ ಇಲ್ಲದವರನ್ನು ಕಂಡರೆ ಗುಹೇಶ್ವರನು ಮೆಚ್ಚನು.

ಭಕ್ತಿ ಇಲ್ಲದವರು ಕೀರ್ತಿಪ್ರತಿಷ್ಠೆಗಳಿಗಾಗಿ ಆಡಂಬರದಿಂದ ಸೇವೆಮಾಡಿದರೂ ಶಿವಪಥಕ್ಕೆ ಸಲ್ಲರು ಮತ್ತು ಶಿವಾನುಗ್ರಹ ವನ್ನು ಪಡೆಯರು. ಶಿವನ ಸೇವೆಮಾಡದೆ ಕೇವಲ ಸ್ಮರಣ ದಿಂದಲೇ ಯಾರೂ ಶಿವಾನುಗ್ರಹವನ್ನು ಪಡೆಯಲಾರರು.

ಕುರೂಪಿ ಸುರೂಪಿಯನ್ನು ನೆನೆಯುವುದರಿಂದಲೇ ಸುಂದರನಾಗಲಾರನು. ದರಿದ್ರನು ಧನವಂತನನ್ನು ಸ್ಮರಿಸಿಕೊಂಡ ಮಾತ್ರದಿಂದಲೇ ಧನಿಕನಾಗಲಾರನು. ಹಾಗೆ ಶಿವನನ್ನು ನೆನೆಯುತ್ತ ತಾವು ಕೃತಾರ್ಥರಾದೆವೆಂದು ಭಾವಿಸುವುದು ಅವಿವೇಕವೇ ಸರಿ. ಶಿವತತ್ತ್ವ ನೆನೆದಾಕ್ಷಣಕ್ಕೆ ಅನುಭವಕ್ಕೆ ಬಾರದು. ಅಹಂಕಾರಾಭಿಮಾನಗಳನ್ನು ತೊರೆದು ಸಮದೃಷ್ಟಿಯಿಂದ ಸೇವೆಮಾಡದಿದ್ದರೆ ಗುಹೇಶ್ವರನು ಪ್ರಸನ್ನನಾಗನು. ಅದನ್ನೂ ತನ್ನ ಕರ್ತವ್ಯವೆಂದು ಭಾವಿಸಿ ಫಲಾಪೇಕ್ಷೆಯಿಲ್ಲದೆ ಮಾಡಬೇಕು. ನಿಷ್ಕಾಮಸೇವೆಯೇ ಈಶ್ವರನನ್ನು ಮೆಚ್ಚಿಸುವ ಅತ್ಯುತ್ತಮಸಾಧನ. ಕಾಡಿ ಬೇಡಿ ಪೂಜಿಸುವವರು ಶಿವನ ಪೂರ್ಣಾನುಗ್ರಹವನ್ನು ಪಡೆಯಲಾರರು. ನಾವು ಮಾಡುವ ಭಕ್ತಿಗೆಲ್ಲಕ್ಕೂ ಫಲವನ್ನು ಬೇಡುತ್ತ ಕುಳಿತರೆ, ನಮ್ಮ ಬೇಡಿಕೆಗೆ ಕೊನೆ ಮೊದಲೇ ಇಲ್ಲದಂತಾಗುವುದು. ಮಾಡುವುದಷ್ಟೇ ನಮ್ಮ ಪಾಲಿಗೆ ಬಂದದ್ದು; ಫಲಕೊಡುವುದು ಬಿಡುವುದು ಈಶ್ವರನ ಪಾಲಿಗೆ ಸೇರಿದ್ದು. ಎಷ್ಟು ಫಲವನ್ನು ಯಾವಾಗ, ಹೇಗೆ ಕೊಡಬೇಕೆಂಬುದನ್ನು ಅವನೇ ನಿರ್ಧರಿಸಲು ಶಕ್ತನು. ಅವನು ಮಾಡುವ ಕೆಲಸಕ್ಕೆ ನಾವೇಕೆ ಪ್ರವೇಶಿಸಬೇಕು. ನಾವು ನಮ್ಮ ಭಾಗದ ಕೆಲಸವನ್ನು ಶ್ರದ್ಧೆಯಿಂದಲೂ ಸಂತೋಷದಿಂದಲೂ ಮಾಡುತ್ತಿರುವುದೊಂದನ್ನೇ ಈಶ್ವರನು ನಮ್ಮಿಂದ ನಿರೀಕ್ಷಿಸುತ್ತಿರುವನು. ದೇವನ ಪೂಜೆಮಾಡುತ್ತ ಫಲವ ಬೇಡುವ ಅನ್ಯಾಯಿಗಳನ್ನು ನೋಡಿ ಪ್ರಭು ಹೀಗೆ ಎಚ್ಚರಿಸುತ್ತಾನೆ:

"ಮಜ್ಜನಕ್ಕೆರೆದು ಫಲವ ಬೇಡುವರಯ್ಯ; ತಮಗೆಲ್ಲಿಯದೋ ಆ ಫಲವು ಪಾತಾಳಕ್ಕಲ್ಲದೆ? ಪತ್ರೆಪುಷ್ಪದಲ್ಲಿ ಅರ್ಚಿಸಿ ಫಲವ ಬೇಡುವರಯ್ಯ; ತಮಗೆಲ್ಲಿಯದೋ ಆ ಫಲವು ಗಿಡಗಳಿಗಲ್ಲದೆ? ಸುಯಿಧಾನವನರ್ಪಿಸಿ ಪ್ರಸಾದದ ಫಲವ ಬೇಡುವರಯ್ಯ;

ತಮಗೆಲ್ಲಿಯದೋ ಆ ಫಲವು ಹದಿನೆಂಟು ಧಾನ್ಯಗಳಿಗಲ್ಲದೆ? ಲಿಂಗದೊಡವೆಯ ಲಿಂಗಕ್ಕೆ ಕೊಟ್ಟು ಫಲವ ಬೇಡುವ ಸರ್ವಾನ್ಯಾಯಿಗಳನೇನೆಂಬೆ ಗುಹೇಶ್ವರ" ಹೀಗೆ ಪ್ರಭು ಸಕಾಮಭಕ್ತರ ಬಗ್ಗೆ ಮರುಗುತ್ತಾನೆ. ಭಕ್ತನು ದೇವನ ಅರ್ಚನೆ ಅರ್ಪಣೆಗಳಿಗೆ ಉಪಯೋಗಿಸುವ ನೀರು, ಪುಷ್ಪ, ಭೋಜ್ಯವಸ್ತುಗಳೆಲ್ಲವೂ ಲಿಂಗದೊಡವೆಯೆಂಬುದನ್ನು ತಿಳಿಯದೆ, ಇವೆಲ್ಲವೂ ತನ್ನವೆಂದು ತಪ್ಪಾಗಿ ತಿಳಿದು, ಇವನ್ನು ತಾನು ಈಶ್ವರನಿಗೆ ಕೊಟ್ಟೆನೆಂದು ಭಾವಿಸುವುದೇ ಮೊದಲನೆಯ ಅವಿವೇಕ. ತನ್ನಲ್ಲಿರುವ ವಸ್ತುಗಳನ್ನು ತಾನು ದುಡಿದು ಸಂಪಾದಿಸಿದೆನೆಂದು ಭಾವಿಸುವುದೇ ಎರಡನೆಯ ಅವಿವೇಕ. ತಾನು ಮಾಡಬೇಕಾದ ಕರ್ತವ್ಯವನ್ನು ಮಾಡಿ ಫಲ ಬೇಡುವುದು ಹೆಚ್ಚಿನ ಅವಿವೇಕ. ತಾನು ಈಶ್ವರನಿಗೆ ತೊತ್ತುಗೆಲಸವನ್ನು ಮಾಡುತ್ತ ಹೋದರೆ ತನ್ನ ಯೋಗಕ್ಷೇಮಗಳನ್ನು ಅವನೇ ವಹಿಸುವನೆಂದು ನಂಬದಿರುವುದು ಅಕ್ಷಮ್ಯವಾದ ಅವಿವೇಕ. ಭಕ್ತನು ಇಂತಹ ಅವಿವೇಕಕ್ಕೆಡೆಗೊಡದೆ, ತನ್ನಲ್ಲಿರುವುದೆಲ್ಲವೂ ಈಶ್ವರಾನುಗ್ರಹದಿಂದ ಈಶ್ವರನ ಭೋಗಕ್ಕಾಗಿಯೇ ದೊರೆತಿರುವುದೆಂದು ಭಾವಿಸಿ, ನಿರಭಿಮಾನದಿಂದ ಅವನ ಸೇವೆಯಲ್ಲಿ ನಿರತನಾಗಬೇಕು.

ಮಾನವನು ಭೋಜ್ಯವಸ್ತುಗಳನ್ನು ತನ್ನವೆಂದೂ ತನಗಾಗಿಯೆಂದೂ ಭಾವಿಸಿ, ಅವುಗಳ ಸಂಗ್ರಹದಲ್ಲಿಯೇ ಶ್ರಮಪಡತೊಡಗಿದರೆ ಭಕ್ತನಾಗಲಾರನು. ಅದರಿಂದ ಅವನಿಗೆ ನಿತ್ಯಸುಖವೂ ದೊರೆಯಲಾರದು. ಅವನ್ನು ಶ್ರಮವಹಿಸಿ ರೂಢಿಸಿದರೂ ಅವುಗಳಿಂದ ಬರುವ ಸುಖವೂ ಅತ್ಯಲ್ಪ ಮತ್ತು ಕ್ಷಣಿಕ. ಸಾಸಿವೆಯಷ್ಟು ಸುಖಕ್ಕಾಗಿ ಸಾಗರದಷ್ಟು ದುಃಖವನ್ನು ಮಾನವನು ಅನುಭವಿಸುತ್ತಿರುವನು. "ಅಲ್ಪಸ್ಯ ಹೇತೋರ್ಬಹು

ಹಾತುಮಿಚ್ಛನ್ ವಿಚಾರಮೂಢಃ ಪ್ರತಿಭಾಸಿ ಮೇ ತ್ವಂ" ಎಂದು ಕಾಳಿದಾಸನು ಹೇಳಿರುವಂತೆ ಪ್ರಭುವಿನ ಮಾತು ವಿಷಯಾಭಿಲಾಷಿಗಳಿಗೆ ಮರ್ಮಭೇದಕವಾಗಿದೆ. ಅಲ್ಪಲಾಭಕ್ಕಾಗಿ ವಿಶೇಷವಾಗಿ ದೇಹವನ್ನು ದಂಡಿಸುವವನು ಅವಿವೇಕಿಯೇ ಸರಿ. ಅಲ್ಪಶ್ರಮದಿಂದ ವಿಶೇಷ ಲಾಭಪಡೆಯುವ ಬದಲು, ಅತಿಶ್ರಮದಿಂದ ಅಲ್ಪಲಾಭ ಪಡೆಯುವ ಸಾಹಸ ಯಾರಿಗೂ ಹಿತವಾಗಲಾರದು. ಗಳಿಗೆಯ ಸುಖಕ್ಕಾಗಿ ಅವಿವೇಕಿಯು ತನ್ನನ್ನೇ ಕಳೆದುಕೊಂಡು, ಆತ್ಮಹಾನಿಯನ್ನು ಮಾಡಿಕೊಳ್ಳುತ್ತಿರುವನು. ಆದರೆ ಪಂಚೇಂದ್ರಿಯಗಳನ್ನು ಅಲ್ಲಗಳೆಯದೆ, ಕಾಮಕ್ರೋಧಗಳನ್ನು ಈಶ್ವರನ ಕಡೆಗೆ ತಿರುಗಿಸಿದರೆ, ಇಂದ್ರಿಯಗಳ ಸಹಕಾರದಿಂದಲೇ ಭಕ್ತನು ಈಶ್ವರಪ್ರಸಾದವನ್ನು ಪಡೆದು ಭೋಗಿಸುತ್ತ ನಿರ್ಲಿಪ್ತನಾಗಬಹುದು.

ಪ್ರಸಾದಭೋಗಗಳಲ್ಲಿಯೂ ಭಕ್ತನು ತುಂಬ ಎಚ್ಚರದಿಂದಿರಬೇಕು. ತನ್ನ ಮನಮುಟ್ಟಿ ತನಗೆಂಬ ಇಚ್ಛೆಯುಟ್ಟದ ಮುನ್ನವೇ ತಾನು ಭಕ್ತಿಯಿಂದ ನೀಡಿದುದು ಈಶ್ವರಾರ್ಪಣವೆನಿಸುವುದು. ತನ್ನ ಮನ ಮುಟ್ಟದೆ ನಾಲಗೆಯಲ್ಲಿ ಜೊಲ್ಲು ಸುರಿಸುತ್ತ, ಕಣ್ಣಿನಿಂದ ಮೋಹಿಸುತ್ತ ಉಣ್ಣುವುದು ಭೋಜನವೆನಿಸುವುದು. ಆದರೆ ಲಿಂಗವನ್ನು ಮುಂದುಮಾಡಿಕೊಂಡು ಲಿಂಗಕ್ಕೆ ಭಕ್ತಿಯಿಂದ ಅರ್ಪಿಸಿ, ಲಿಂಗದೊಡನೆ ಭೋಗಿಸುವವನು ಪ್ರಸಾದಿ ಎನಿಸುವನು. ತನ್ನ ಹೊಟ್ಟೆಗಾಗಿ ತಿನ್ನುವವನು ಭೋಗಿ ಎನಿಸುವನು. ಭೋಗಿ–ಪ್ರಸಾದಿ ಇವರಿಗಿರುವ ವ್ಯತ್ಯಾಸ ಇಷ್ಟೇ. ಭೋಗಿ ತನಗಾಗಿ–ತನ್ನ ಹೊಟ್ಟೆಗಾಗಿ ಮೋಹಿಸಿ ತಿನ್ನುವನು. ಪ್ರಸಾದಿ ತನ್ನಲ್ಲಿರುವ ಲಿಂಗದೇವನಿಗಾಗಿ ಭಕ್ತಿಯಿಂದ ಅರ್ಪಿಸಿ–ಅವನುಂಡು ಮಿಕ್ಕದ್ದನ್ನು ಪ್ರಸಾದವೆಂದು ಭೋಗಿಸುವನು. ತನು–ಮನ–ಭಾವ–ಹೃದಯಗಳಲ್ಲಿ ಶುದ್ಧಿ ಇರುವುದಾದರೆಯೇ ಈ ಬಗೆಯ ಅರ್ಪಣ ಸಾಧ್ಯ

ವಾಗುವುದು ಮತ್ತು ಸಾರ್ಥಕವೂ ಆಗುವುದು. ಅರ್ಪಣದಲ್ಲಿ ನಮ್ಮ ದೈನಂದಿನ ಆಧಿವ್ಯಾಧಿಗಳಾಗಲೀ, ಕುಂದುಕೊರತೆಗಳಾಗಲೀ ಆತ್ಮನಿಗೆ ಅಂಟಲಾರವು. ನಮ್ಮಲ್ಲಿ ಆಯಾ ಕಾಲದಲ್ಲಿ ಇರುವುದನ್ನು ಶುದ್ಧ ಭಾವದಿಂದ ಸಂತೋಷವಾಗಿ ನೀಡುವುದೆಲ್ಲವೂ ಶಿವಾರ್ಪಿತ ವಾಗಬಲ್ಲುದು. ಅದನ್ನು ಅರ್ಪಿಸುವಾಗ, ಅದರಲ್ಲಿರುವ ರೂಪ ರುಚಿ ತೃಪ್ತಿಗಳು ಕಣ್ಣಿಗೆ, ನಾಲಗೆಗೆ, ಮನಸ್ಸಿಗೆ ತಾಗುವ ಮುನ್ನವೇ ಇಷ್ಟಪ್ರಾಣಭಾವರೂಪನಾದ ಲಿಂಗದೇವನಿಗೆ ಸಲ್ಲುವಂತೆ ಭಕ್ತನು ಎಚ್ಚರದಿಂದ ಅರ್ಪಿಸಬೇಕು. ಇದನ್ನು ಪ್ರಭು ಬಹಳ ಹೃದಯಂಗ ಮವಾಗಿ ವಿವರಿಸಿದ್ದಾನೆ.

"ತನುವ ತಾಗದ ಮುನ್ನ, ಮನವ ತಾಗದ ಮುನ್ನ, ಆಪ್ಯಾಯನ ಬಂದು ಎಡೆಗೊಳ್ಳದ ಮುನ್ನ ಅರ್ಪಿತವ ಮಾಡ ಬೇಕು. ಎಡದ ಕೈಯಲ್ಲಿ ಕಿಚ್ಚು, ಬಲದ ಕೈಯಲ್ಲಿ ಹುಲ್ಲು ಉರಿ ಹತ್ತಿತ್ತು ಗುಹೇಶ್ವರ." ಪ್ರಸಾದಿಯು ಭೋಜ್ಯವಸ್ತುವನ್ನು ಈಶ್ವರನಿಗರ್ಪಿಸುವಾಗ, ಅದರ ರೂಪವನ್ನು ನೋಡಿ ಕಣ್ಣು ಮೋಹಿಸಬಾರದು ಮತ್ತು ಅದರ ರುಚಿಯನ್ನು ನಾಲಗೆ ಬಯಸ ಬಾರದು. ಹೀಗೆ ಮನಸ್ಸು ತೃಪ್ತಿಪಡುವ ಮೊದಲೇ ಪ್ರಸಾದಿಯು ಪದಾರ್ಥಗಳನ್ನು ಈಶ್ವರನಿಗರ್ಪಿಸುವುದರಲ್ಲಿ ಬಹಳ ಚತುರನಾಗ ಬೇಕು. ತಟ್ಟೆಯಲ್ಲಿ ಅರ್ಪಣಕ್ಕಾಗಿ ಬಡಿಸಿದ ಭಕ್ಷ್ಯ ಭೋಜ್ಯ ಗಳನ್ನು ನೋಡಿದೊಡನೆಯೇ ಕಣ್ಣಿನಲ್ಲೂ, ನಾಲಗೆಯಲ್ಲೂ ನೀರು ಸುರಿಯಲಾರಂಭಿಸಿದರೆ ಆ ಪದಾರ್ಥ ಈಶ್ವರನಿಗರ್ಪಿತವಾಗದು. ಆದರೆ ಅದು ಕೇವಲ ನಮ್ಮ ಹೊಟ್ಟೆಗೆ ಆಹಾರವಾಗುವುದು. ಅದರಿಂದ ದೇಹ ಬೆಳೆಯುವುದೇ ಹೊರತು ಆತ್ಮಶಕ್ತಿ ಬೆಳೆಯ ಲಾರದು. ಕಣ್ಣಿನಿಂದ ನಿರಭಿಮಾನದಿಂದ ನೋಡುತ್ತ, ನಾಲಗೆ ಯಲ್ಲಿ ಎಳತಾಟವಾಗುವ ಮುನ್ನವೇ, ಮನಸ್ಸು ಮೋಹಿಸುವ

ಮುನ್ನವೇ ಈಶ್ವರನಿಗೆ ಭೋಜ್ಯವಸ್ತುವನ್ನು ಅರ್ಪಿಸುವಷ್ಟು ಅವಧಾನಭಕ್ತಿ ಪ್ರಸಾದಿಯಲ್ಲಿ ಜಾಗ್ರತವಾಗಿರಬೇಕು. ಹೆಂಗಸು ಮನೆಯಲ್ಲಿ ಅಡಿಗೆಮಾಡುವಾಗ ಭೋಜ್ಯವಸ್ತುಗಳ ರೂಪ, ರುಚಿ, ತೃಪ್ತಿಗಳ ಸಂಪರ್ಕವಿದ್ದರೂ ಮೋಹಗೊಳ್ಳುವುದಿಲ್ಲ. ಅವಳು ಅವೆಲ್ಲವನ್ನೂ ಪತಿಯ ಹಿತಕ್ಕಾಗಿ ಸಿದ್ಧಪಡಿಸುತ್ತಿರುವುದರಿಂದಲೇ, ತಾನು ಅವನ್ನು ಭೋಗಿಸಬೇಕೆಂಬ ಬಯಕೆ ಅವಳಿಗೆ ಹುಟ್ಟುವುದಿಲ್ಲ. ಮಾಡುವ ಅಡಿಗೆ ತನಗಾಗಿ ಎಂಬ ಅಭಿಮಾನ ಆಕೆಗೆ ಇರದೆ, ಅದೆಲ್ಲವೂ ಪರಹಿತಕ್ಕಾಗಿ ಎಂಬ ಭಾವನೆ ನೆಲೆಯಾಗಿರುವುದರಿಂದಲೇ ಆಕೆ ಮಾಡಿದ್ದೆಲ್ಲವೂ ವಿಹಿತವಾಗಿ ಪತಿಗೆ ತೃಪ್ತಿ ಸಂತೋಷಗಳನ್ನು ಕೊಡಬಲ್ಲುದು. ಪತಿಗೆ ಸಂತೋಷಪಡಿಸುವುದರಲ್ಲಿಯೇ ಅವಳ ಅಭಿಲಾಷೆ. ತನಗೆಂಬ ಸ್ವಾರ್ಥ ಲೇಶವೂ ಅವಳಿಗಿರುವುದಿಲ್ಲ. ತಾನೇ ಮಾಡುವ ಭೋಜ್ಯವಸ್ತುಗಳನ್ನು ಆಕೆ ನಿರಭಿಮಾನದಿಂದ ನೋಡುವಳು; ಆದ್ದರಿಂದಲೇ ಅವನ್ನು ಕಂಡರೆ ಅವಳಿಗೆ ಕಣ್ಣಿನಲ್ಲಿ ಮೋಹವೂ ಹುಟ್ಟುವುದಿಲ್ಲ; ನಾಲಗೆಯಲ್ಲಿ ನೀರೂ ಸುರಿಯುವುದಿಲ್ಲ. ಹಾಗೆ ಭಕ್ತರು ಇಂದ್ರಿಯ ಸುಖಗಳನ್ನು ನಿರಭಿಮಾನದಿಂದ ಗುಹೇಶ್ವರನಿಗೆ ಅರ್ಪಿಸತೊಡಗಿದರೆ, ಅವರಿಗೆ ದುಃಖ ಅಂಟಲಾರದು. ಅವನ್ನು ಪ್ರಸಾದವಾಗಿ ಭೋಗಿಸುವುದರಿಂದ ತೃಪ್ತಿಯೂ ಪೂರ್ಣಸುಖವೂ ದೊರಕುವುವು. ತನಗೆಂಬುದೇ ದುಃಖದ ಮೂಲ. ಶಿವನಿಗೆಂದು ಭಕ್ತಿಯಿಂದ ಅರ್ಪಿಸುವುದೇ ಸುಖದ ಹಾದಿ. ಮಾನವಾಗಲಿ ಅವಮಾನವಾಗಲಿ ; ಸುಖವಾಗಲಿ ದುಃಖವಾಗಲಿ ; ಸ್ತುತಿಯಾಗಲಿ ನಿಂದೆಯಾಗಲಿ ಯಾವಾಗ ಏನೇ ಸಂಭವಿಸಲಿ ಅದನ್ನು ನಿರಭಿಮಾನದಿಂದ ಶಿವಾರ್ಪಣಮಾಡುವವನು ಅಚ್ಚಪ್ರಸಾದಿ ಎನಿಸುವನು. ಹೀಗೆ ಪ್ರಸಾದಿಗೆ ಉರಿಸಿರಿಗಳೂ, ರೋಗ ಆರೋಗ್ಯಗಳೂ ಸಮಾನವಾಗಿ ಹಿತಕರವಾಗುವುವು.

ಭಕ್ತನು ಈ ಬಗೆಯ ನಿಷ್ಠೆಯಿಂದ ಲಿಂಗದೇವನನ್ನು ಅರ್ಚಿಸುತ್ತ, ಎಚ್ಚರಿಕೆಯಿಂದ ಭೋಜ್ಯವಸ್ತುಗಳನ್ನು ಅರ್ಪಿಸುತ್ತ, ತನ್ನ ಹೃದಯದೊಳಗೆ ಈಶ್ವರನ ಪ್ರಭೆಯನ್ನು ಅನುಭವಿಸತೊಡಗುವನು. ಈ ಸ್ಥಿತಿಯಲ್ಲಿ ಅವನಿಗೆ ದೇಹವೇ ದೇಗುಲ, ಕಾಲೇ ಕಂಭಗಳು, ನಾಲಗೆಯೇ ಘಂಟೆ, ಶಿರಸ್ಸೇ ಸುವರ್ಣಕಲಶ, ಹೃದಯವೇ ಈಶ್ವರನ ಪೀಠ. ಆ ಈಶ್ವರನಿಗೆ ಆಕಾಶಗಂಗೆಯಲ್ಲಿ ಮಜ್ಜನ, ಹೂವಿಲ್ಲದ ಪರಿಮಳದ ಪೂಜೆ. ಹೃದಯ ಕಮಲದಲ್ಲಿ ಶಿವಶಿವಾ ಎಂಬ ನೆನಹು ಸಹಜವಾದ ದಿವ್ಯಪುಷ್ಪ. ಈ ಬಗೆಯ ಅರ್ಚನೆ ಅಹಂಗ್ರಹೋಪಾಸನೆ ಎನಿಸುವುದು. ಗುರುವು ಅನುಗ್ರಹಿಸಿದ ಇಷ್ಟಲಿಂಗವನ್ನು ಭಕ್ತನು ತನ್ನ ಪ್ರಾಣವೆಂದು ಭಾವಿಸಿ ಅರ್ಚಿಸುತ್ತ ಅದನ್ನು ತನ್ನೊಳಗೆ ಕಂಡು ಅನುಭವಿಸುವುದೇ ಅಹಂಗ್ರಹೋಪಾಸನೆ. ಇದನ್ನು ತಿಳಿಯದೆ ಎದೆಯಮೇಲೆ ಲಿಂಗವನ್ನು ಕಟ್ಟಿದ ಮಾತ್ರವೇ ಅದು ಸಾಧಕನ ಅನಿಷ್ಟವನ್ನು ಪರಿಹರಿಸಲಾರದು ; ಮತ್ತು ಇಷ್ಟಾರ್ಥವನ್ನು ನೆರವೇರಿಸಲಾರದು. ಲಿಂಗವೇ ಪ್ರಾಣವಾಗಿ, ಪ್ರಾಣವೇ ಲಿಂಗವಾಗಿ ಎರಡನ್ನೂ ಬೆರಸಿ ಬೇರಿಲ್ಲದಿರ್ಪ ರೀತಿಯನ್ನರಿವುದೇ ಅಹಂಗ್ರಹೋಪಾಸನೆ. ಹೀಗೆ ಅರ್ಚನೆ ಮಾಡುವವನೇ ಪ್ರಾಣಲಿಂಗಿ. ಅಂತಲ್ಲದವರನ್ನು ಗುಹೇಶ್ವರನು ಮೆಚ್ಚನು. ಶ್ರೀ ಗುರು ಪ್ರಣವಮಂತ್ರವನ್ನು ಉಪದೇಶಿಸಿ, ಅಂಗದ ಮೇಲೆ ಲಿಂಗ ಪ್ರತಿಷ್ಠೆ ಮಾಡಿದ ಬಳಿಕ ಒಳಗೂ ಹೊರಗೂ ಲಿಂಗದ ಪ್ರಭೆ ವ್ಯಾಪಿಸದೇ ಹೋದರೆ—ಕೇವಲ ಹೊರಗಿನ ಲಿಂಗದಿಂದಲೇ ಭಕ್ತನು ಉದ್ಧಾರವಾಗಲಾರನೆಂದು ಪ್ರಭು ಸ್ಪಷ್ಟವಾಗಿ ತಿಳಿಸುತ್ತಾನೆ.

“ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು? ಹಸಿವು ಹೋಹುದೇ? ಲಿಂಗದಮೇಲೆ ಲಿಂಗ ಸ್ವಾಯತ

ವಾದರೇನು ಭಕ್ತನಾಗಬಲ್ಲನೇ? ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿಕೊಂಡರೆ ಆ ಕಲ್ಲು ಲಿಂಗವೇ? ಆ ಮೆಳೆ ಭಕ್ತನೇ? ಇಟ್ಟಾತ ಗುರುವೇ? ಇಂತಪ್ಪವರ ಕಂಡಡೆ ನಾಚುವೆನಯ್ಯ, ಗುಹೇಶ್ವರ."
ಹೀಗೆ ಲಿಂಗದ ಅಂತಃಪ್ರಭೆಯನ್ನು ಒಳಗೆ ಹೊರಗೆ ಏಕಭಾವನೆಯಿಂದ ಹೊಂದಿಸಿಕೊಳ್ಳುವ ಜಾಣತನವೇ ಇಲ್ಲದವನು ಹೊರಗೆ ಲಿಂಗವನ್ನು ಎಷ್ಟುಕಾಲ ಅರ್ಚನೆಮಾಡಿದರೂ ವ್ಯರ್ಥವಾಗುವುದು. ಮಾನವನು ಬಯಲಲ್ಲೇ ಹುಟ್ಟಿ, ಬಯಲಲ್ಲೇ ಬೆಳೆದು, ಬಯಲನ್ನೇ ಲಿಂಗವಾಗಿ ಧರಿಸಿ, ಬಯಲನ್ನೇ ಆರಾಧಿಸಿ, ಬಯಲಾಗಿ ಹೋಗುವುದೇ ಪ್ರಭುವಿನ ದಿವ್ಯ ಆದರ್ಶ. ಗುರುವು ಅನುಗ್ರಹಿಸಿದ ಲಿಂಗವೂ ಶಿಷ್ಯನ ಹೃದಯದೊಳಗಿನ ಚಿತ್ಪ್ರಭೆಯೇ ಆಗಿರುವುದು. ಅದೂ ಬಯಲೇ—ಅಲ್ಲಿ ವಿಗ್ರಹಭಾವನೆಗೆ ಅವಕಾಶವಿಲ್ಲ. ಶಿಷ್ಯನ ಪ್ರಾಣವನ್ನೇ ಗುರುವು ಅರ್ಚನೆಗಾಗಿ ಹೊರಗೆಡಹುವನು. ಅದನ್ನು ಅರ್ಚಿಸುತ್ತ ಸಾಧಕನು ತನ್ನ ಸುಮನೋಮಂಟಪದೊಳಗೆ ನಿತ್ಯ ನಿರಂಜನ ಪ್ರಭೆಯ ಬೆಳಕನ್ನು ಅನುಭವಿಸಿ ನಿತ್ಯಸುಖಿಯಾಗುವನು. ಈ ಸ್ಥಿತಿಯಲ್ಲಿ ಭಕ್ತನ ಕಾಯವೇ ಕೈಲಾಸವಾಗುವುದು. ಮನವೇ ಲಿಂಗವಾಗುವುದು. ಹೀಗೆ ಲೀನನಾದವನಿಗೆ ನೆನೆ ನೆನೆ ಎಂದಡೆ ಅವನು ಏನನ್ನು ನೆನೆಯಬಹುದು. ಒಬ್ಬನೇ ತನ್ನ ಲೀಲೆಗಾಗಿ ಶಿವ–ಭಕ್ತ ಎಂದು ಎರಡಾಗಿದ್ದನು. ನಾನೆಂಬ ಭಕ್ತನು ತನ್ನ ಅನುವನರಿತು, ತನುವ ಮರೆತು, ಜೀವಭಾವರಹಿತನಾದ ಬಳಿಕ ತಾನೂ ತಾನೇ ಶಿವನಾಗಿ ನಿರ್ಲಿಪ್ತತೆಯಿಂದ ನೆಲಸುವನು.

ಈ ಸ್ಥಿತಿಯಲ್ಲಿರುವವನು ಶರಣನೆನಿಸುವನು. ಇವನಿಗೆ ನಾನೆಂಬ ಜೀವಭಾವವೂ, ನೀನೆಂಬ ಶಿವಭಾವವೂ ತೋರದು. ಆಗ ಅವನು ಬಾಲಕನಂತೆ ಮುಗ್ಧನಾಗಿರುವನು. ನೀ ನಾನೆಂಬ ಎರಡು ಅಳಿದು ಒಂದಾಗಿರುವಾಗ, ಅವನಿಗೆ ಆನಂದವಲ್ಲದೆ ಬೇರೆ ಏನೂ

ತೋರದು. ಅವನಿಗೆ ಒಳಗೂ ಹೊರಗೂ ದಿವ್ಯಪ್ರಕಾಶವೇ ಕಾಣತೊಡಗುವುದು. ಅವನು ಬದುಕಿರುವಾಗಲೇ ಸತ್ತವನಂತೆ ದೇಹಾಭಿಮಾನವನ್ನು ತೊರೆದು ನಿರ್ಲಿಪ್ತತೆಯಿಂದ ವ್ಯವಹರಿಸುವನು. ಇವನ ವರ್ತನೆ ಹೀಗಿರುವುದು :

> ನಾಹಂ ಲೋಕೇ ನ ಲೋಕೋಽ ಹಂ ಲೋಕನಿಂದಾ ಕುತೋ ಮಮ।
> ಇತಿ ನಿಶ್ಚಯವದ್ಭಾವಃ ಶಿವಜ್ಞಾನೀತಿ ಕಥ್ಯತೇ॥

ನಾನು ಲೋಕದಲ್ಲಿ ಇದ್ದರೂ ಇಲ್ಲದ ಹಾಗೆ. ಲೋಕವೂ ನಾನಲ್ಲ. ಆದ್ದರಿಂದ ಲೋಕದ ನಿಂದೆ ನನಗೆ ಅನ್ವಯಿಸುವುದಿಲ್ಲ, ಎಂಬ ನಿಶ್ಚಯಜ್ಞಾನ ಯಾವನಿಗಿದೆಯೋ ಅಂತಹ ಶಿವಯೋಗಿ ಶರಣ ಎನಿಸುವನು. ಇಂತಹ ಶರಣನು ಲೋಕದಲ್ಲಿ ಬಾಳುವಾಗಲೇ ಮನಸ್ಸಿನ ಸಮಾಧಾನಸ್ಥಿತಿಯಿಂದ ನಿತ್ಯವೂ ಸಮಾಧಿಗ್ರಸ್ತನಾಗಿರುವನು. ಹೀಗೆ ಶರಣನು ಜೀವಂತಸಮಾಧಿಯಲ್ಲಿ ದಗ್ಧಪಟದಂತೆ ತೋರಿಕೆಗೆ ಕಾಣುತ್ತಿರುವನೇ ಹೊರತು, ಅವನಿಗೆ ದೇಹದಿಂದ ಯಾವ ಪ್ರಯೋಜನವೂ ಆಗಬೇಕಾಗಿಲ್ಲ. ಅವನ ದೈಹಿಕ ವ್ಯವಹಾರವೆಲ್ಲವೂ ಲೋಕಹಿತಾರ್ಥವಾಗಿ. ಸರ್ವಜೀವಿಗಳನ್ನೂ ಸನ್ಮಾರ್ಗಕ್ಕೆ ತಿರುಗಿಸಿ, ಅವರಲ್ಲಿ ಸದ್ಬುದ್ಧಿ ಸದ್ಭಾವನೆಗಳನ್ನು ಹುಟ್ಟಿಸಲಿಕ್ಕಾಗಿಯೇ ಅವನು ಲೋಕದಲ್ಲಿ ಅಂಟಿಯೂ ಅಂಟದಂತೆ ನಿರ್ಲಿಪ್ತನಾಗಿ ಬಾಳುವನು. ಅಗಮ್ಯ ಅಗೋಚರ ಲಿಂಗವೇ ತಾನಾದ ಶರಣನಿಗೆ ಭೂಮಿಯೇ ಪೀಠ, ಆಕಾಶವೇ ಅಗ್ಗವಣೆ, ಚಂದ್ರಸೂರ್ಯರೇ ಪುಷ್ಪ, ಬ್ರಹ್ಮನೇ ಧೂಪ, ವಿಷ್ಣುವೇ ದೀಪ, ರುದ್ರನೇ ನೈವೇದ್ಯವಾಗುವನು. ಇದುವೇ ಶರಣನು ಮಾಡುವ ಗುಹೇಶ್ವರ ಲಿಂಗದ ಪೂಜೆ. ಪರತತ್ತ್ವದಲ್ಲಿ ತನ್ಮಯನಾದವನಿಗೆ ಬೇರೆ ಮತ್ತೆ ಸಾಧನೆಯ ಆವಶ್ಯಕತೆ ಎಲ್ಲಿದ್ದೀತು? ಅರಿವು ವ್ಯಾಪಿಸಿ ಮರಹು ನಷ್ಟವಾದ ಬಳಿಕ

ತಾನಾರೆಂಬ ವಿಚಾರವೇಕೆ? ಗುಹೇಶ್ವರನ ಬೆರಸಿ ಭೇದಗೆಟ್ಟ ಬಳಿಕ ಶರಣನಿಗೆ ಭವಬಂಧನಗಳೆಲ್ಲಿಂದ ಬರಬೇಕು?

ಇಂತಹ ಸ್ಥಿತಿಯನ್ನು ಮಾನವನು ಬದುಕಿರುವಾಗಲೇ, ಇಲ್ಲಿಯೇ ಈ ದೇಹದಲ್ಲಿಯೇ ಸಾಧಿಸಬೇಕೆಂಬುದೇ ಪ್ರಭುವಿನ ಬಯಕೆ. "ಸತ್ತು ಮುಂದೆ ನೀನೇನ ಕಾಂಬೆಯೋ? ಸಾಯದ ಮುನ್ನ ಸ್ವಯವನರಿದೊಡೆ ಗುಹೇಶ್ವರನೊಲಿಯುವ. ಇಂದೆ, ಇಂದೆಯೋ, ಇಂದೇ ಮಾನವ, ಗುಹೇಶ್ವರನ ಕೂಡಿದ ಕೂಟ ಇಂದು ಸುಖ, ಮುಂದೆ ಲೇಸು" ಎಂದು ಎಚ್ಚರಿಸಿದ್ದಾನೆ ಪ್ರಭು. ಇಂತಹ ಶರಣನ ಜೀವನ ಎಷ್ಟು ಸೊಗಸು ಎಂಬುದನ್ನು ಪ್ರಭು ಹೀಗೆ ತಿಳಿಸಿದ್ದಾನೆ. "ಪರಿಣಾಮದೊಳಗೆ ಮನದ ಪರಿಣಾಮವೇ ಚೆಲುವು. ಸಂಗದೊಳಗೆ ಶರಣರ ಸಂಗವೇ ಚೆಲುವು. ಕಾಯ ಗೊಂಡು ಹುಟ್ಟಿದ ಮಾನವರೆಲ್ಲರೂ ಸಾಯದ ಸಂಚನರಿವುದೇ ಚೆಲುವು." ಅದು ಹೀಗೆ ಸೊಗಸಷ್ಟೇ ಅಲ್ಲದೆ ಸರಳವೂ ಆಗಿರು ವುದೆಂದು ಪ್ರಭು ಹೇಳುತ್ತಾನೆ. ನಾನೆಂಬುದೇ ಅಜ್ಞಾನ— ನೀನೆಂಬುದೇ ಮಾಯಾಧೀನ–ನಾನೆನ್ನದೆ ನೀನೆನ್ನದೆ, ಬೇಕೆನ್ನದೆ ಬೇಡವೆನ್ನದೆ, ಅಹುದೆನ್ನದೆ ಅಲ್ಲವೆನ್ನದೆ, ತನ್ನ ತಾ ತಿಳಿದು ತನಗೆ ತಾನನ್ಯವಲ್ಲವೆಂದರಿತು ವ್ಯವಹರಿಸುವುದೇ ನಿರ್ಲಿಪ್ತತೆ. ಇದು ಪರಸುಖದ ನೆಲವೀಡು. ಇದನ್ನು ಪ್ರಭು "ನೋಡಲಿಲ್ಲದ ಶೃಂಗಾರ, ಮಾತಾಡಲಿಲ್ಲದ ಶಬ್ದ, ಬೇಡಲಿಲ್ಲದ ವರವು, ಬಾಡ ಲಿಲ್ಲದ ಸಸಿಯ ಬೆಳಸು" ಎಂದು ಮುಂತಾಗಿ ಪ್ರಶಂಸಿಸಿದ್ದಾನೆ. ಶರಣನು ತನ್ನನ್ನು ಅರಿದವನಾದ್ದರಿಂದ ಅವನಿಗೆ ಇದಿರೆಂಬುದಿಲ್ಲ. ಹೊರಗೆ ಕಾಣುವವರೆಲ್ಲರಲ್ಲೂ ಅವನು ಶಿವನನ್ನೇ ಕಾಣುವನು. ಇದೇ ವಿಶ್ವಪ್ರೇಮ. ಇಂತಹ ಪ್ರೇಮಪೂಜೆಯೇ ವೀರಶೈವನ ನಿತ್ಯಾರ್ಚನೆ, ಯಾವಜ್ಜೀವವ್ರತ, ನಿತ್ಯಯಜ್ಞ. ಈ ಸ್ಥಿತಿಯಲ್ಲಿ

ದೇವ-ಭಕ್ತ ಎಂದು ಇಬ್ಬರಿರುವುದಿಲ್ಲ. ಇಬ್ಬರೂ ಶರಣಸ್ಥಿತಿಯಲ್ಲಿ ಒಬ್ಬನೇ ಆಗಿರುವುದರಿಂದ ಶರಣನು ಯೋಗಸಮಾಧಿಯಲ್ಲಿ ಲಿಂಗೈಕ್ಯವನ್ನು ಅನುಭವಿಸುತ್ತ ಲೋಕಕಲ್ಯಾಣಕ್ಕಾಗಿ ನಿರ್ಲಿಪ್ತನಾಗಿ ವ್ಯವಹರಿಸುತ್ತಿರುವನು.

ಈ ಲಿಂಗೈಕ್ಯಸ್ಥಿತಿ ಶಿವಯೋಗದ ಕೊನೆಯ ಹಂತ. ಇದನ್ನು ಪ್ರಭು ಹೊಸ ಮುತ್ತಿನ ಸುಪ್ಪಾಣಿಗೂ, ಸ್ಫಟಿಕದ ಘಟದೊಳಗಣ ಪ್ರಭೆಗೂ ಹೋಲಿಸುತ್ತಾನೆ. ಇಂತಹ ಐಕ್ಯನನ್ನು ಪ್ರಭು ನಿಜವನರಿದ ನಿಶ್ಚಿಂತನೆಂದೂ, ಮರಣವ ಗೆಲಿದ ಮಹಾಂತನೆಂದೂ, ಘನವ ಕಂಡ ಮಹಿಮನೆಂದೂ, ಪರವನೊಳಕೊಂಡ ಪರಿಣಾಮಿಯೆಂದೂ ವರ್ಣಿಸಿದ್ದಾನೆ. ಇದು ಮಾನವನ ಸಹಜಸಮಾಧಿ. ಇದುವೇ ಜೀವನದ ಗುರಿ. ಇದಕ್ಕಾಗಿಯೇ ಮಾನವನು ದೇಹವನ್ನು ಪಡೆದಿರುವನು. "ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯ. ಬಯಲ ಜೀವನ, ಬಯಲ ಭಾವನೆ; ಬಯಲು ಬಯಲಾಗಿ ಬಯಲಾಯಿತ್ತಯ್ಯ. ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು. ನಾ ನಿಮ್ಮ ನಂಬಿ ಬಯಲಾದೆ, ಗುಹೇಶ್ವರ" ಎಂದು ಗುಹೇಶ್ವರನ ದಯೆಯಿಂದ ಮಾನವನು ಈ ದೇಹದಲ್ಲಿಯೇ ಬಯಲಾಗಿ ಲೋಕಕಲ್ಯಾಣಕ್ಕಾಗಿ ನಿರ್ಲಿಪ್ತತೆಯಿಂದ ವ್ಯವಹರಿಸುವುದನ್ನು ಪ್ರಭು ದಿವ್ಯವಾದ ಆದರ್ಶವಾಗಿ ಭಕ್ತರೆಲ್ಲರಿಗೂ ತಿಳಿಸಿದ್ದಾನೆ.

ಪ್ರಭುವಿನ ಈ ಮಾತು ಅರ್ಥಗರ್ಭಿತವಾಗಿದೆ. ತಾನು ಬಯಲಾದುದಷ್ಟೇ ಅಲ್ಲದೆ, ತನ್ನಂತೆ ಬಯಲಾಗಿರುವ ಇನ್ನೂ ಅನೇಕ ಮಹನೀಯರನ್ನು ಅವನು "ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು" ಎಂಬ ಮಾತಿನಲ್ಲಿ ಸ್ಮರಿಸಿಕೊಂಡಿ

ದ್ದಾನೆ. ಇಲ್ಲಿ ಬಯಲೆಂದರೆ ನಿರಭಿಮಾನಸ್ಥಿತಿ; ದೇಹದಲ್ಲಿದ್ದರೂ ದೇಹಕ್ಕೆ ಅಂಟದಂತೆ ವ್ಯವಹರಿಸುವ ನೈಪುಣ್ಯ ; ಇದ್ದರೂ ಇಲ್ಲದಂತೆ ದಗ್ಧಪಟದಂತೆ ತೋರುವ ಸ್ಥಿತಿ. ಪ್ರಭು ಈ ಸ್ಥಿತಿಯಲ್ಲಿದ್ದು ಲೋಕಕಲ್ಯಾಣಕ್ಕಾಗಿ ಪರಾಹಂತಾಸ್ಥಿತಿಯಲ್ಲಿ ನಿಂತು ಅನೇಕ ಸಾಧಕರಿಗೆ ಉಪದೇಶಮಾಡಿದ್ದಾನೆ. ಪರಾಹಂತಾಸ್ಥಿತಿ ಎಂದರೆ ಪ್ರಕೃತಿ ಸಂಬಂಧವಾದ ಅಹಂಕಾರವಿಲ್ಲದೆ ಶಿವಭಾವದ ಐಕ್ಯ ಸ್ಥಿತಿಯ ವ್ಯವಹಾರ. ಇವನು ಲೋಕಹಿತಕ್ಕಾಗಿ ಜ್ಞಾನೋಪದೇಶ ಮಾಡುವನು. ಮೂಲಾಹಂತಾಸ್ಥಿತಿಯಲ್ಲಿ ನಿಂತು ಕೆಲವು ಮಾನವಸಂಬಂಧವನ್ನು ಇಟ್ಟುಕೊಳ್ಳುವನು. ಇದರಿಂದ ಅವನಿಗೆ ಆಗಬೇಕಾದ ಫಲವೇನೂ ಇಲ್ಲ. ತಾನು ಮಾಡುವುದರಲ್ಲಿ ತನಗೆ ಯಾವ ಅಭಿಮಾನವೂ ಇರುವುದಿಲ್ಲ. ಇದೆಲ್ಲವೂ ಲೋಕಕಲ್ಯಾಣ ಕ್ಕಾಗಿ ನಡೆಯುವ ಲೀಲೆ. ಮನುಷ್ಯನಲ್ಲಿ ಸಹಜವಾಗಿ ನಡೆಯು ತ್ತಿರುವ ಶ್ವಾಸೋಚ್ಛ್ವಾಸಗಳಂತೆ ಶರಣನ ವ್ಯವಹಾರಗಳು ಲೋಕ ಹಿತಾರ್ಥವಾದ ಲೀಲೆ ಎನಿಸುವುವು. ಈ ಲೀಲೆ ನಡೆಯು ತ್ತಿರುವಾಗಲೂ ಐಕ್ಯನಿಗೆ ತನ್ನ ನಿರ್ಲಿಪ್ತಸ್ಥಿತಿ ಇದ್ದೇ ಇರುತ್ತದೆ. ಒಳಗೆ ಪೂರ್ಣವಿರಕ್ತಿ, ನಿರಭಿಮಾನತೆ, ನಿರ್ಲಿಪ್ತತೆ, ಬಯಲಿನ ಸ್ಥಿತಿ ಇವಿದ್ದರೂ ಹೊರಗೆ ಭಕ್ತಾನುಗ್ರಹಕ್ಕಾಗಿ ಅವನಿಗೆ ತೋರಿಕೆಯ ಆಸಕ್ತಿ ಇರುತ್ತದೆ. ಇದು ಐಕ್ಯನ ನಿರಭಿಮಾನ, ನಿರಾಡಂಬರ ಜೀವನ ; ಯೋಗಸಮಾಧಿ ; ಸಮರಸಜೀವನ. ಇಂತಹ ನಿರ್ಲಿಪ್ತ ಸ್ಥಿತಿಗೆ ಶೂನ್ಯಪೀಠವೆಂದೂ ಕೈವಲ್ಯಸ್ಥಿತಿ ಎಂದೂ ಅನುಭವಿಗಳು ಹೇಳುತ್ತಾರೆ.

ಅಲ್ಲಿಗೆ ಐಕ್ಯಸ್ಥಿತಿಯನ್ನು ಅನುಭವಿಸಿದವರಲ್ಲಿ ಸಹಜವಾಗಿ ಎರಡು ಅವಸ್ಥೆಗಳು ಇರುವುವೆಂಬುದು ಸ್ಪಷ್ಟವಾಯಿತು. ಶಿವಭಾವದ ಐಕ್ಯಾನಂದಾನುಭವ ಮತ್ತು ಲೋಕಾನುಗ್ರಹಲೀಲೆ, ಇವೆರಡೂ

ಆವರಲ್ಲಿ ಇರುತ್ತವೆ. ಐಕ್ಯಾನಂದಾನುಭವವೇ ನಿರಂಜನಾವಸ್ಥೆ ; ಜಂಗಮಸ್ಥಿತಿ ; ಶೂನ್ಯಪೀಠಾರೋಹಣ. ಲೋಕಾನುಗ್ರಹಲೀಲೆಯೇ ನಿರಭಿಮಾನದ ಉಪದೇಶ; ಅನಾಸಕ್ತಿಯ ದಿವ್ಯಬೋಧೆ. ಅಂದರೆ, ಶಿವಯೋಗಿಯು ಒಳಗೆ ಆನಂದಮಗ್ನನಾಗಿದ್ದು, ಹೊರಗೆ ಭಕ್ತಾನುಗ್ರಹಕ್ಕಾಗಿ ಲೀಲೆಗಳನ್ನು ನಡೆಸುವನೆಂದು ಹೇಳಿದ ಹಾಗಾಯಿತು. ಒಬ್ಬ ಶಿವಯೋಗಿಯೇ ಹೀಗೆ ಲೀಲೆಗಳನ್ನು ನಡೆಸುವಾಗ, ಭಕ್ತರ ಲೋಪದೋಷಗಳನ್ನು ತಿದ್ದುವಾಗ, ಅವರಿಗೆ ಮಂತ್ರೋಪದೇಶ ಮಾಡುವಾಗ ಗುರುವೆನಿಸುವನು ; ತಾನು ಏಕಾಂತದಲ್ಲಿ ಉದಾಸೀನನಾಗಿ ಶಿವೈಕ್ಯಾನಂದವನ್ನು ಅನುಭವಿಸುತ್ತ ಜಂಗಮನೆನಿಸುವನು. ಒಬ್ಬ ಶಿವಯೋಗಿಯೇ ಒಳಗೆ ಜಂಗಮನೂ, ಹೊರಗೆ ಗುರುವೂ ಆಗಿ ಲೋಕಯಾತ್ರೆಯನ್ನು ನಿರ್ವಹಿಸುವನು. ಭಕ್ತಾನುಗ್ರಹಲೀಲೆಯನ್ನು ಅನಾಯಾಸವಾಗಿ ನಡೆಸಲು ತಕ್ಕಷ್ಟು ಸಾಮರ್ಥ್ಯವನ್ನು ಶಿವಯೋಗಿಯು ಏಕಾಂತದಲ್ಲಿ ಶಿವಧ್ಯಾನಾಸಕ್ತನಾಗಿ ಶಿವನಲ್ಲಿ ಸಮರಸವಾಗಿ ಬೆರೆತು ಶಿವಾನಂದಮಗ್ನನಾಗುವುದರಿಂದಲೇ ಪಡೆಯಬೇಕು. ಲೀಲೆಯ ಜೀವಾಳವೇ ಕೈವಲ್ಯದಲ್ಲಡಗಿದೆ. ಲೀಲೆಯಿಂದ ಲೋಕದ ಹಿತಸಾಧನೆಯಾಗಬೇಕಾದರೆ ಶಿವಯೋಗಿಯು ಕೈವಲ್ಯಾನಂದವನ್ನು ಸದಾ ಅನುಭವಿಸುತ್ತಲೇ ಇರಬೇಕು. ಒಳಗೆ ಪೂರ್ಣವಾಗಿ ನಿರ್ಲಿಪ್ತನೂ ಉದಾಸೀನನೂ ಆಗಿದ್ದು, ಹೊರಗೆ ಆಸಕ್ತನೂ ಅಭಿಮಾನಿಯೂ ಆದವನಂತೆ ನಟಿಸಿ—ಭಕ್ತರನ್ನು ಉದ್ಧರಿಸುವುದು ಸಾಮಾನ್ಯವಾದ ಕೆಲಸವಲ್ಲ. ಇದೊಂದು ಅದ್ಭುತಕಾರ್ಯವೇ ಆಗಿದೆ. ಇದರ ನಿರ್ವಹಣೆಗೆ ತುಂಬ ಚಾತುರ್ಯಬೇಕು. ಇದನ್ನೇ ಯೋಗನಿಷ್ಠೆಯೆಂದೂ, ಕೈವಲ್ಯಸ್ಥಿತಿ ಎಂದೂ, ಶೂನ್ಯಸ್ಥಿತಿ ಎಂದೂ ಅನುಭವಿಗಳು ಹೇಳುತ್ತಾರೆ.

ಪ್ರಭು ಈ ಸ್ಥಿತಿಯನ್ನು ಪಡೆದಮೇಲೆಯೇ ಒಳಗೆ ನಿರಂಜನ

ಜಂಗಮನಾಗಿದ್ದು—ಹೊರಗೆ ಭಕ್ತಾನುಗ್ರಹಕ್ಕಾಗಿ ಉಪದೇಶ ಮಾಡುತ್ತ ಗುರುವೂ ಎನಿಸಿದನು. ಐಕ್ಯಸ್ಥಿತಿಯನ್ನು ಆಚರಿಸಿ ತೋರಿಸುತ್ತ ಅವನು ಜಂಗಮನಾಗಿಯೂ, ಅದೇ ಸ್ಥಿತಿಯನ್ನು ಭಕ್ತರಿಗೆ ಉಪದೇಶಿಸುತ್ತ ಗುರುವಾಗಿಯೂ ಮೆರೆದನು. ಸ್ವತಂತ್ರನೂ ಪರಿಪೂರ್ಣನೂ ಆದ ಪ್ರಭುವಿಗೆ ಎರಡು ಸ್ಥಿತಿಗಳೂ ಸಹಜವಾಗಿ ಅನ್ವಯಿಸುತ್ತಿದ್ದುವು. ತಾನು ತನ್ನೊಳಗೆ ನಿರ್ಲಿಪ್ತ ಸ್ಥಿತಿಯಲ್ಲಿದ್ದು, ಭಕ್ತರಿಗೆ ಉಪದೇಶವನ್ನು ಮಾಡುತ್ತ ಗುರುವೆನಿಸಿ ಬಹಳ ಕಾಲ ಸಂಚರಿಸಿದನು. ಅಲ್ಲಿಗೆ ಒಬ್ಬ ವ್ಯಕ್ತಿಯೇ ಶಿವತತ್ವವನ್ನು ಉಪದೇಶಿಸುವಾಗ ಗುರುವೆನಿಸಿ, ಅದೇ ಶಿವತತ್ವವನ್ನು ಆಚರಣೆಯ ಮೂಲಕ ಭಕ್ತರಿಗೆ ಎಚ್ಚರಿಸಿ, ಕೆರಳಿಸಿ, ಪ್ರೇರಿಸುವಾಗ ಜಂಗಮನೆನಿಸುವನೆಂದು ಹೇಳಿದ ಹಾಗಾಯಿತು. ಹೀಗೆ ಗುರುಜಂಗಮರಿಬ್ಬರೂ ವಾಸ್ತವವಾಗಿ ಒಬ್ಬನೇ ಆಗಿರುವರೆಂಬುದನ್ನು ಪ್ರಭು ಒತ್ತಿ ಹೇಳಿದ್ದಾನೆ. ತಾನೊಬ್ಬನೇ ಈ ಸ್ಥಿತಿಯಲ್ಲಿ ಇದ್ದುದಷ್ಟೇ ಅಲ್ಲದೆ ತನಗಿಂತ ಹಿಂದೆ ಎಷ್ಟೋ ಜನರು ಈ ಸ್ಥಿತಿಯನ್ನು ಪಡೆದಿರುವುದಾಗಿ ಪ್ರಭು ಹೇಳಿದ್ದಾನೆ. "ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು, ನಾ ನಿಮ್ಮ ನಂಬಿ ಬಯಲಾದೆ" ಎಂಬ ಮಾತಿನಲ್ಲಿ ಹಿಂದೆ ಲೀಲಾಕೈವಲ್ಯಗಳನ್ನು ನಡೆಸಿದ ಅನೇಕ ಶಿವಯೋಗಿಗಳು ನಮಗೆ ಆದರ್ಶವಾದ ದಿವ್ಯ ಜ್ಯೋತಿಗಳಾಗಿ ಶೋಭಿಸುತ್ತಿರುವುದನ್ನು ಪ್ರಭು ತಿಳಿಸಿದ್ದಾನೆ. ಅನಿಮಿಷಯ್ಯನು ಇದೇ ಸ್ಥಿತಿಯನ್ನು ಪಡೆದು ಶಿಷ್ಯನ ಬರುವಿಕೆಯನ್ನು ಕಾಯುತ್ತಿದ್ದನು. ಇದೇ ರೀತಿ ಪಂಚಾಚಾರ್ಯರೆನಿಸಿದ ರೇಣುಕಾಚಾರ್ಯ—ಪಂಡಿತಾರಾಧ್ಯ—ವಿಶ್ವಾರಾಧ್ಯ—ಮರುಳಾರಾಧ್ಯ—ಏಕೋರಾಮಾರಾಧ್ಯ ಇವರು ಭಾರತದಲ್ಲಿ ಅವತರಿಸಿ ಧರ್ಮೋಪದೇಶಮಾಡಿ ಆಗಿನ ಕಾಲದ ಶಿಷ್ಯರನ್ನು ಎಚ್ಚರಿಸಿ ತಮ್ಮ ಲೀಲಾ

ಕೈವಲ್ಯಗಳನ್ನು ಭಕ್ತರಿಗೆ ದಿವ್ಯವಾದ ಆದರ್ಶವನ್ನಾಗಿ ತೋರಿಸಿ ಕೊಟ್ಟಿದ್ದಾರೆ. ಅವರು ಸ್ಥಾಪಿಸಿರುವ ಪೀಠಗಳು ರಂಭಾಪುರಿ, ಶ್ರೀಶೈಲ, ಕಾಶಿ, ಉಜ್ಜಯಿನಿ, ಕೇದಾರ ಕ್ಷೇತ್ರಗಳಲ್ಲಿ ಈಗಲೂ ಶೋಭಿಸುತ್ತಿವೆ. ಅವರು ಐಕ್ಯಸ್ಥಿತಿಯಲ್ಲಿ ಕೈವಲ್ಯಾನಂದವನ್ನು ಅನುಭವಿಸುತ್ತಲಿದ್ದು ಲೋಕಕಲ್ಯಾಣಕ್ಕಾಗಿ ಧರ್ಮೋಪದೇಶರೂಪ ವಾದ ಲೀಲೆಗಳನ್ನು ನಡೆಸಿದ್ದಾರೆ. ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗೆ ಮಾಡಿರುವ ಶಿವತತ್ತ್ವದ ಉಪದೇಶ ಆಚಂದ್ರಾರ್ಕ ವಾಗಿ ಶೋಭಿಸುತ್ತ ಭಕ್ತವೃಂದವನ್ನು ಎಚ್ಚರಗೊಳಿಸುತ್ತಿರುವುದು. ಹೀಗೆ ಉಪದೇಶಮಾಡಿದ್ದರೂ, ಅವರು ಏಕಾಂತದಲ್ಲಿ ಶಿವಯೋಗ ನಿರತರಾಗಿ ಶಿವಾನಂದವನ್ನೂ ಅನುಭವಿಸುತ್ತ ನಿರಂಜನ ಜಂಗಮರೂ ಆಗಿದ್ದರು. ಶಿವಯೋಗಿಗೆ ಕೈವಲ್ಯವೇ ಲೀಲೆಯ ನಿರ್ವಹಣೆಗೆ ಬೇಕಾದಷ್ಟು ಶಕ್ತಿಪ್ರಕಾಶಗಳನ್ನು ದೊರಕಿಸು ವಂತಹುದು. ಆದ್ದರಿಂದ ಲೀಲೆ ಕೈವಲ್ಯಗಳೆರಡೂ ಶಿವಯೋಗಿ ಯಲ್ಲಿ ಸಹಜವಾಗಿರುವುವು. ಅವೆರಡೂ ಅವನ ಇಚ್ಛೆಗಧೀನ ವಾಗಿರುವುವು. ಭಕ್ತಾನುಗ್ರಹದ ಇಚ್ಛೆಯುಂಟಾದರೆ ಅವನು ಲೀಲೆ ನಡೆಸುವನು; ಇಲ್ಲವಾದರೆ ಆತ್ಮಾನಂದಲೀನನಾಗಿ ಚಿದರಣ್ಯ ದಲ್ಲಿ ಕೇವಲಸ್ಥಿತಿಯಲ್ಲಿರುವನು. ಆದ್ದರಿಂದಲೇ ಸ್ವತಂತ್ರನೂ, ಪರಿಪೂರ್ಣನೂ ಆದ ಶಿವಯೋಗಿಯ ವರ್ತನೆ ಲೋಕೋತ್ತರ ವೆನಿಸಿದೆ. ಇಂತಹ ಕಾರಣಪುರುಷರ ಸ್ವಭಾವವನ್ನು ಹೀಗೆಯೇ ಎಂದು ತಿಳಿಯುವುದು ಸಾಮಾನ್ಯರಿಗೆ ಸಾಧ್ಯವಾಗುವುದಿಲ್ಲ. ನಿಗ್ರಹಾನುಗ್ರಹಶಕ್ತರಾದುದರಿಂದ, ಅವರು ಅಂತರಂಗದಲ್ಲಿ ಕೈವಲ್ಯವನ್ನು ಅನುಭವಿಸುತ್ತಲೇ, ಹೊರಗೆ ಲೋಕಹಿತದೃಷ್ಟಿ ಯಿಂದ ಲೀಲೆಯನ್ನೂ ನಡೆಸುತ್ತಾ ನಮಗೆ ಮಾರ್ಗದರ್ಶಕ ರಾಗಿರುವರು.

ಲೋಕಹಿತಾರ್ಥವಾಗಿ ಆಗಾಗ್ಗೆ ಅವತರಿಸಿ ಧರ್ಮವನ್ನು ಉದ್ಧರಿಸಿರುವ ಅನೇಕ ಮಹನೀಯರನ್ನು ಪ್ರಭು ಸ್ಮರಿಸಿರುವುದು ಶ್ರುತಿ–ಬ್ರಹ್ಮಸೂತ್ರಗಳಿಗೂ ಸಮ್ಮತವಾಗಿದೆ. ಪರಮಾತ್ಮನಲ್ಲಿ ಲೀಲೆ ಕೈವಲ್ಯಗಳೆರಡೂ ಏಕಕಾಲದಲ್ಲಿ ಸಹಜವಾಗಿ ಸಂಭವಿಸುತ್ತವೆಯೆಂದು ಬಾದರಾಯಣರು 'ಲೋಕವತ್ತು ಲೀಲಾ ಕೈವಲ್ಯಂ' ಎಂಬ ಬ್ರಹ್ಮಸೂತ್ರದಲ್ಲಿ ತಿಳಿಸಿದ್ದಾರೆ. ಬ್ರಹ್ಮನಲ್ಲಿ ಮೂರ್ತ ಅಮೂರ್ತ ಸ್ಥಿತಿಗಳೆರಡೂ ಏಕಕಾಲದಲ್ಲಿ ಸಂಭವಿಸುತ್ತವೆಯೆಂಬುದನ್ನು ಬೃಹದಾರಣ್ಯಕ ಶ್ರುತಿ 'ದ್ವೇ ವಾವ ಬ್ರಹ್ಮಣೋ ರೂಪೇ ಮೂರ್ತಂ ಚಾಮೂರ್ತಂ ಚ' ಎಂದು ತಿಳಿಸಿದೆ. ಅಮೂರ್ತರೂಪವೇ ಕೇವಲಾವಸ್ಥೆ. ಮೂರ್ತರೂಪವೇ ಲೀಲಾವಸ್ಥೆ. ಈ ಎರಡು ಅವಸ್ಥೆಗಳೂ ಪರಮಾತ್ಮನಿಗೆ ಸಹಜವಾಗಿ ಅನ್ವಯಿಸುವಂತೆಯೇ, ಆಯಾ ಕಾಲದಲ್ಲಿ ಅವತರಿಸಿದ ಮಹಾತ್ಮರಿಗೂ ಅನ್ವಯಿಸುತ್ತವೆ. ಪರಮಾತ್ಮನು ಸ್ವೀಯಚಿತ್ ಶಕ್ತಿಯೊಡನೆ ವಿನೋದಿಸುತ್ತಲೇ ಜಗದ್ವ್ಯಾಪಾರಲೀಲೆಯನ್ನು ಈಗಲೂ ನಡೆಸುತ್ತಿರುವನು. ಅದರಂತೆ ರೇಣುಕಾದಿ ಆಚಾರ್ಯರು ಐಕ್ಯಾನಂದವನ್ನು ಅನುಭವಿಸುತ್ತಲಿದ್ದು ಶಿಷ್ಯೋದ್ಧರಣ ರೂಪವಾದ ಲೀಲೆಗಳನ್ನು ನಡೆಸಿದ್ದಾರೆ. ಹಾಗೆಯೇ ಪ್ರಭುವು ದೇಹಾಭಿಮಾನವನ್ನು ತೊರೆದು ಶೂನ್ಯಸ್ಥಿತಿಯಲ್ಲಿದ್ದು ಶಿಷ್ಯೋದ್ಧಾರಕ್ಕಾಗಿ ಶಿವಭಾವದಲ್ಲಿ ನಿಂತು ಉಪದೇಶಮಾಡುತ್ತ ಲೀಲೆಯನ್ನೂ ನಡೆಸಿದ್ದಾನೆ. ತನ್ನಂತೆ ಇತರ ಅನೇಕರು ಹಿಂದಿನಿಂದ ಪರತತ್ತ್ವವನ್ನುಪದೇಶಿಸುತ್ತ ಗುರುವೆನಿಸಿಯೂ—ಅದೇ ತತ್ತ್ವವನ್ನು ತಾವು ಆಚರಿಸಿ ತೋರಿಸುತ್ತ ಜಂಗಮರೆನಿಸಿಯೂ ಲೋಕಪಾವನರಾಗಿರುವರೆಂಬುದನ್ನು ಪ್ರಭು ಸ್ಪಷ್ಟಪಡಿಸಿದ್ದಾನೆ.

ಹಿಂದಿನಿಂದಲೂ ಸಂಪ್ರದಾಯಾನುಗುಣವಾಗಿ ನಡೆದುಕೊಂಡು

ಬಂದಿರುವ ಲೀಲಾಕೈವಲ್ಯಗಳನ್ನು ಪ್ರಭು "ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು. ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರ" ಎಂಬ ಮಾತಿನಲ್ಲಿ ಸ್ಮರಣಮಾಡಿಕೊಂಡಿದ್ದಾನೆ. ಭಕ್ತಾನುಗ್ರಹಲೀಲೆ ನಡೆಸುವವರೆಲ್ಲರಿಗೂ ಶೂನ್ಯಸ್ಥಿತಿಯ ಆವಶ್ಯಕತೆಯನ್ನು ಪ್ರಭು ಒತ್ತಿ ಹೇಳಿದ್ದಾನೆ. ಈ ಶೂನ್ಯಸ್ಥಿತಿ ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಗ್ಲಾನಿಯನ್ನು ಹೊಂದಿದ್ದ ಪ್ರಯುಕ್ತ ಪರಮಾತ್ಮನೇ ಅಲ್ಲಮಪ್ರಭುವಾಗಿ ಜನಿಸಿ ಲೀಲಾಕೈವಲ್ಯಗಳನ್ನು ನಡೆಸುವ ಚಾತುರ್ಯವನ್ನು ತೋರಿಸಿಕೊಟ್ಟಿದ್ದಾನೆ. ಪ್ರಭು ಮಾನವನಾಗಿ ಅವತರಿಸಿ ಕೈವಲ್ಯಸ್ಥಿತಿಯನ್ನು ಉಗ್ರಸಾಧನೆಯಿಂದ ಪಡೆದು ಅನುಭವಿಸಿ, ಮುಂದಿನ ಪೀಳಿಗೆಗೆ ಆದರ್ಶವಾದ ಮೇಲುಪಂಕ್ತಿಯನ್ನು ಹಾಕಿಕೊಟ್ಟಿದ್ದಾನೆ. ಪ್ರಭು ಒಬ್ಬನೇ ಶೂನ್ಯಪೀಠವನ್ನು ಹತ್ತಿದವನಲ್ಲ. ಇದು ಅವನ ಕಾಲಕ್ಕೇ ಸ್ಥಾಪಿತವಾದುದಲ್ಲ. ಅವನಿಗಿಂತ ಎಷ್ಟೋ ಕಾಲದ ಹಿಂದೆಯೇ ಪಂಚಾಚಾರ್ಯರಲ್ಲಿ ಒಬ್ಬರಾದ ಏಕೋರಾಮಾರಾಧ್ಯರು ಆಕಾಶತತ್ತ್ವವನ್ನು ಪ್ರತಿನಿಧಿಸುತ್ತ ಒಳಗೂ ಹೊರಗೂ ನಿರಂಜನ ಜಂಗಮರಾಗಿದ್ದರು. ಶಿವನ ಪಂಚಮುಖಗಳಿಂದ ಉದ್ಭವಿಸಿದ ಪಂಚಸಾದಾಖ್ಯಗಳನ್ನು ಪ್ರತಿನಿಧಿಸುವವರಲ್ಲಿ ಏಕೋರಾಮಾರಾಧ್ಯರು ಒಬ್ಬರು. ಇವರ ಶೂನ್ಯಪೀಠವು ಕೇದಾರದಲ್ಲಿ ಈಗಲೂ ಜಂಗಮರಿಗೆ ಆಕರ್ಷಣೀಯವಾಗಿ ನೆಲಸಿದೆ. ಭೂಲೋಕದಲ್ಲಿ ನಿರಂಜನಪೀಠವು ಭಕ್ತಾನುಗ್ರಹಕ್ಕಾಗಿ ನೆಲಸಿರುವುದಕ್ಕೆ ಇದೇ ಮೊದಲನೆಯ ನಿದರ್ಶನವಾಗಿದೆ. ಇವರ ಸೂತ್ರವನ್ನು ಅನುಸರಿಸಿಕೊಂಡು ಬಂದವನೇ ಅಲ್ಲಮಪ್ರಭು. ಈ ಶಾಖೆಯನ್ನು ಅವಲಂಬಿಸಿಕೊಂಡು ಬಂದಿರುವುದೇ ಚಿತ್ರದುರ್ಗದ ಶೂನ್ಯಸಿಂಹಾಸನ. ಇದೇ ಪೀಠವು ಸಮಯಭೇದದಿಂದ ಹಲವಾರು

ಶಾಖೆಗಳಾಗಿ ಲೋಕದಲ್ಲಿ ವ್ಯಾಪಿಸಿ ಭಕ್ತರನ್ನು ಉದ್ಧರಿಸುತ್ತಿರು ವುವು. ಹೀಗೆ ನಿರಂಜನಪೀಠವು ಪ್ರಾಚೀನಕಾಲದಿಂದಲೂ ಅನೇಕ ಶಿವಯೋಗಿಗಳಿಗೆ ಆಶ್ರಯಸ್ಥಾನವಾಗಿತ್ತು. ಏಕೋರಾಮಾರಾಧ್ಯ ರಂತಹ ಅನೇಕರು ಅದನ್ನು ಅನುಭವಿಸಿದ್ದಾರೆ. ಇದು ಶಿವನಲ್ಲಿ ಸಹಜವಾಗಿರುವ ಸ್ಥಿತಿ. "ಲೀಲೆಯಾದೊಡೆ ಉಮಾಪತಿ. ಲೀಲೆ ತಪ್ಪಿದೊಡೆ ಸ್ವಯಂಭು" ಎಂದು ಅನುಭವಿಗಳು ಶಿವನ ಲೀಲಾಕೈವಲ್ಯಗಳನ್ನು ಪ್ರಶಂಸಿಸಿದ್ದಾರೆ. ಶಿವನ ಕಾಲದಿಂದಲೂ ರೂಢಿಯಲ್ಲಿರುವ ನಿರಂಜನಸ್ಥಿತಿ ಇಂತಹದೊಂದು ನಿರ್ದಿಷ್ಟ ಕಾಲದಲ್ಲಿ ಇಂಥವರಿಂದಲೇ ಆರಂಭವಾಯಿತೆಂದು ಹೇಳುವುದು ಸಮಂಜಸವಲ್ಲ. ಶೂನ್ಯ—ಲೀಲಾಸ್ಥಿತಿಗಳು ಎರಡೂ ಶಿವನಲ್ಲಿರು ವಂತೆಯೇ ಶಿವಯೋಗಿಗಳಲ್ಲೂ ಸಹಜವಾಗಿ ಸನಾತನಕಾಲ ದಿಂದಲೂ ನೆಲಸಿರುವುದರಿಂದಲೇ ಪ್ರಭು "ನಿಮ್ಮ ಪೂಜಿಸಿ ದವರು ಮುನ್ನವೇ ಬಯಲಾದರು, ನಾ ನಿಮ್ಮ ನಂಬಿ ಬಯಲಾದೆ" ಎಂದು ಹಿಂದಿನ ಸಂಪ್ರದಾಯವನ್ನು ಮುಂದುವರಿಸಿದ್ದಾನೆ. ಪ್ರಭುವಿನ ಈ ಮಾತು ಗುರುಜಂಗಮರಿಬ್ಬರೂ ಒಬ್ಬ ಶಿವೈಕ್ಯನ ಲೀಲಾಕೇವಲಾವಸ್ಥಾವಿಶೇಷಗಳೆಂಬುದನ್ನು ಸ್ಪಷ್ಟಪಡಿಸಿದೆ ಆಚಾರ್ಯಪೀಠದ ಗುರುವನ್ನೂ—ಶೂನ್ಯಪೀಠದ ಜಂಗಮ ರನ್ನೂ ಏಕಭಾವನೆಯಿಂದ ಗೌರವಿಸಿ ಪುರಸ್ಕರಿಸುವ ಉದಾತ್ತ ವರ್ತನೆ ಭಕ್ತರ ಪಾಲಿಗೆ ಸೇರಿದ್ದು. ಗುರುವಿನಲ್ಲಿ ಜಂಗಮಭಾವ ಅಂತರಂಗದಲ್ಲಿ ಅಡಗಿದ್ದು, ಅವನ ಉಪದೇಶರೂಪವಾದ ಲೀಲೆ ಎದ್ದು ಕಾಣುತ್ತದೆ. ಜಂಗಮನಲ್ಲಿ ನಿರ್ಲಿಪ್ತಸ್ಥಿತಿ ಒಳಗೂ ಹೊರಗೂ ವ್ಯಾಪಿಸಿ, ಅವನ ಆದರ್ಶವಾದ ಶೂನ್ಯಸ್ಥಿತಿಯೇ ಹೊರಗೆ ಭಕ್ತರಿಗೆ ತಾರಕವೂ, ಉಪದೇಶವೂ, ಭಕ್ತಿವರ್ಧಕವೂ ಆಗಿ ಶೋಭಿಸುತ್ತಿರುವುದು. ಗುರುವಿನಲ್ಲಿ ಜಂಗಮಭಾವ ಅಡಗಿರು

ವಂತೆಯೇ. ಜಂಗಮನಲ್ಲಿ ಗುರುಭಾವವೂ ಅಡಗಿರುವುದು. ಆದರೆ ಗುರುವಿಗೆ ಉಪದೇಶ ಲೀಲೆಯೂ ಕರ್ತವ್ಯವೂ ಆಗಿದ್ದರೆ. ಜಂಗಮನಲ್ಲಿ ಶೂನ್ಯಸ್ಥಿತಿಯ ದಿವ್ಯ ಆದರ್ಶವೇ ಶಿಷ್ಯರನ್ನು ಉದ್ಧರಿಸಂತ್ತ ತಾರಕಮಂತ್ರವಾಗಿರುವುದು. ಗುರು ಜಂಗಮರಿಗಿ ರುವ ವೈಲಕ್ಷಣ್ಯ ಇಷ್ಟರಲ್ಲಡಗಿದೆ.

ಗೊಗ್ಗಯ್ಯನಿಗೆ ಉಪದೇಶ

ಪ್ರಭುವಿನ ಷಟ್ಸ್ಥಲೋಪದೇಶವನ್ನು ಅವರ ವಚನ ಗಳಿಂದಲೇ ಸಂಗ್ರಹಿಸಿ ಹಿಂದೆ ಕೊಡಲಾಗಿದೆ. ಆದರೂ, ಅವರು ಸಾಧಕರೆಲ್ಲರಿಗೂ ಒಂದೇ ಬಗೆಯ ಉಪದೇಶವನ್ನು ಕೊಟ್ಟಿಲ್ಲ. ಅವರವರಿಗೆ ಅವರವರ ವೃತ್ತಿಯಲ್ಲಿಯೇ ಪರಿಪೂರ್ಣತೆಯನ್ನು ಸಾಧಿಸುವ ಚಾತುರ್ಯವನ್ನು ಅವರವರ ಸ್ವಭಾವಾನುಗುಣವಾಗಿ ಬೋಧಿಸಿದ್ದಾರೆ. ಸಾಧಕರ ಬಳಿಗೆ ತಾವೇ ಹೋಗಿ ಅವರ ಸಾಧನೆಯ ಶಕ್ತಿಯನ್ನು ಎಚ್ಚರಗೊಳಿಸಿದ್ದಾರೆ. ಅವರವರ ಯೋಗ್ಯತಾನುಸಾರವಾಗಿ ಅವರಿಗೆ ಮನವರಿಕೆಯಾಗುವಂತೆ ಉಪದೇಶಮಾಡಿದ್ದಾರೆ. ಸಾಧಕರ ಸಾಧನೆಯ ಮಾರ್ಗದಮೇಲೆ ಶಿವಭಕ್ತಿಯ ಬೆಳಕನ್ನು ಬೀರಿ ನಿಜವಾದ ಗುರಿಯ ಪೂರ್ಣ ಸ್ವರೂಪವನ್ನು ಅವರಿಗೆ ತೋರಿಸಿದ್ದಾರೆ. ಅವರನ್ನು ಕಂಡ ಸಾಧಕರೆಲ್ಲರೂ ಪವಿತ್ರರಾಗಿ ವಿಕಾಸಮಾರ್ಗವನ್ನು ಹಿಡಿದರು. ಅಂತಹವರಲ್ಲಿ ಮೊದಲನೆಯವನಾಗುವ ಭಾಗ್ಯ ಗೊಗ್ಗಯ್ಯನ ದಾಗಿತ್ತು.

ಗೊಗ್ಗಯ್ಯನು ತನ್ನ ತೋಟವನ್ನೇ ಸಾಧನೆಯ ರಂಗವನ್ನಾಗಿ ಮಾಡಿಕೊಂಡಿದ್ದನು. ತೋಟದ ಕೆಲಸವೇ ಆತನ ಧ್ಯಾನ, ಪೂಜೆ

ಎಲ್ಲವೂ ಆಗಿತ್ತು. ಭೂಮಿಯನ್ನು ಅಗಿದು ಹಸನುಗೊಳಿಸುವುದು, ಗಿಡಗಳನ್ನು ಬೆಳೆಸುವುದು ಇವೆಲ್ಲವನ್ನೂ ದೇವರ ಪೂಜೆಯೋ ಎನ್ನುವಷ್ಟು ಭಕ್ತಿಯಿಂದ ಅವನು ಮಾಡುತ್ತಿದ್ದನು. ಅವನ ಏಕೈಕನಿಷ್ಠೆಯನ್ನೂ, ಕಾರ್ಯಶ್ರದ್ಧೆಯನ್ನೂ ಪ್ರಭು ಕೇಳಿದ್ದನು. ಆ ಸಾಧನೆಗೆ ಮುಂದಿನ ಹೆಜ್ಜೆಯನ್ನು ತೋರಿಸಲಿಕ್ಕಾಗಿ ಪ್ರಭು ತೋಟವನ್ನು ಪ್ರವೇಶಿಸಿದನು. ಗೊಗ್ಗಯ್ಯನು ಪ್ರಭುವನ್ನು ಕಂಡು ಚಕಿತನಾದನು. ಆ ತೋಟವನ್ನು ಅಗೆದು ಬೀಜವನ್ನು ಹಾಕಿ ಗಿಡಗಳನ್ನು ಬೆಳೆಸುವಂತೆಯೇ, ಈ ದೇಹದಲ್ಲಿ ಭ್ರಾಂತಿ ಎಂಬ ಹೆಂಟೆಯನ್ನು ಬಡಿದು ಶುದ್ಧಮಾಡಿ ಬ್ರಹ್ಮಬೀಜವನ್ನು ಬಿತ್ತಿ ಆಧ್ಯಾತ್ಮದ ಗಿಡವನ್ನು ಬೆಳೆಸುವಂತೆ ಪ್ರಭು ಅವನಿಗೆ ತಿಳಿಸುತ್ತಾನೆ. ಇಂತಹ ತೋಟವೊಂದನ್ನು ತಾನೂ ಮಾಡಿರು ವುದಾಗಿ ತೋರಿಸುತ್ತಾನೆ.

"ತನುವ ತೋಟವ ಮಾಡಿ, ಮನವ ಗುದ್ದಲಿಯ ಮಾಡಿ ಅಗೆದು ಕಳೆದೆನಯ್ಯ ಭ್ರಾಂತಿಯ ಬೇರೊಡೆದು. ಸಂಸಾರದ ಹೆಂಟೆ ಬಡಿದು ಬಿತ್ತಿದೆನಯ್ಯ ಬ್ರಹ್ಮಬೀಜವ. ಅಖಂಡಮಂಡಲ ವೆಂಬ ಬಾವಿ, ಪವನವೇ ರಾಟಾಳ, ಸುಷುಮ್ನನಾಳದಿಂದ ಉದಕವ ತಿದ್ದಿ, ಬಸವಗಳೈವರು ಹಸಗೆಡಿಸಿಹರೆಂದು, ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ, ಆವಾಗಲೂ ಈ ತೋಟದೊಳಗೆ ಜಾಗರವಿದ್ದು ಈ ಸಸಿಯ ಸಲಹಿದೆನು ಕಾಣಾ, ಗುಹೇಶ್ವರ". ಇಂತಹ ಆಧ್ಯಾತ್ಮಿಕತೋಟವೊಂಧನ್ನು ಸಾಧಕರೆಲ್ಲರೂ ಮಾಡ ಬಹುದು. ಆದರೆ ಇದರಲ್ಲಿ ಯಾವಾಗಲೂ ಎಚ್ಚರವಿದ್ದು ಸಸಿಯನ್ನು ಸಲಹಬೇಕು. ತೋಟಗಾರನು ಹಾಕಿದ ಗಿಡಗಳು ತುಂಬ ಚಿಕ್ಕವಿರುವಾಗ ಪಶುಪಕ್ಷಿ ಕ್ರಿಮಿಕೀಟಗಳು ಒಳಗೆ ನುಗ್ಗಿ ಅವನ್ನು ತಿಂದಾವೆಂಬ ಹೆದರಿಕೆಯಿಂದ ಅವುಗಳ ಸುತ್ತಲೂ ಬೇಲಿ

ಹಾಕಿ ಎಚ್ಚರದಿಂದ ಕಾಯುವರು. ಹಾಗೆಯೇ ಸಾಧಕರ ಹೃದಯವನ್ನು ಹಸನುಮಾಡಿ ಗುರುವು ಅಲ್ಲಿ ಬಿತ್ತಿದ ಬ್ರಹ್ಮ ಬೀಜವು ಸಸಿಯಾಗಿ ಬೆಳೆಯುವಾಗ, ಆ ಅಧ್ಯಾತ್ಮ ಸಸಿಯನ್ನು ತಿನ್ನಲು ಪಂಚೇಂದ್ರಿಯಗಳೆಂಬ ಎತ್ತುಗಳು ಯಾವತ್ತೂ ಹೊಂಚು ಹಾಕುತ್ತಿರುವುವು. ಸ್ವಲ್ಪ ಅವಕಾಶ ಸಿಕ್ಕಿದರೆ, ಅವು ಒಳಗೆ ನುಗ್ಗಿ ಉಗ್ರಸಾಧನೆಯಿಂದ ಬೆಳೆಸಿದ ಗಿಡವನ್ನು ನಾಶಮಾಡುತ್ತವೆ. ಅದಕ್ಕೆ ಅವಕಾಶ ಕೊಡದಂತೆ ಸಮತೆ, ಸೈರಣೆ, ಶಾಂತಿ, ಸದಾಚಾರ ಮೊದಲಾದ ಸದ್ಗುಣಗಳ ಬೇಲಿಯನ್ನು ಹಾಕಿ ಗಿಡವನ್ನು ಎಚ್ಚರಿಕೆಯಿಂದ ರಕ್ಷಿಸುತ್ತಿರಬೇಕು. ಗಿಡ ಮರವಾಗಿ ಪುಷ್ಟಿ ಹೊಂದಿದ ಮೇಲೆ ಹೊರಗಿನ ಶತ್ರುಗಳ ಕಾಟ ಕೊಂಚ ಕಡಮೆ ಯಾಗುತ್ತದೆ. ಆದರೆ ಇಂದ್ರಿಯನಿಗ್ರಹ ರೂಪವಾದ ಯೋಗ ದಲ್ಲಿ ಸಾಧಕನು ನಿಷ್ಠೆಯಿಂದ ನಿಂತು ಅಧ್ಯಾತ್ಮಸುಖವೆಂಬ ಫಲವನ್ನು ಪಡೆಯಬೇಕಾಗಿದೆ. ಹೀಗೆ ಸಾಧಕನು ಪರಿಪೂರ್ಣ ತೆಯ ಪಕ್ವಫಲವನ್ನು ಅನುಭವಿಸಬೇಕಾಗಿದೆ. ಈ ರೀತಿಯಲ್ಲಿ ಪ್ರಭು ಗೊಗ್ಗಯ್ಯನಿಗೆ ಅವನ ನಿತ್ಯವ್ಯವಹಾರದೊಡನೆ ಅಧ್ಯಾತ್ಮ ನಿಷ್ಠೆಯನ್ನು ಹೊಂದಿಸಿಕೊಂಡು ಆಚರಿಸುವಂತೆ ಉಪದೇಶಿಸಿ ಮುಂದೆ ಹೊರಡುವನು. ಅವನ ದರ್ಶನ ಪಡೆದವರೆಲ್ಲರೂ ಪಾವನರಾದರು; ಬದ್ಧರು ಸಾಧಕರಾದರು; ಸಾಧಕರು ಸಿದ್ಧ ರಾದರು.

ಮುಕ್ತಾಯಕ್ಕನಿಗೆ ಉಪದೇಶ

ಪ್ರಭುವಿನ ದಿವ್ಯಪ್ರಭೆಗೆ ಒಳಗಾದ ಸಾಧಕರೆಲ್ಲರೂ ಪೂರ್ಣತೆಯನ್ನು ಪಡೆದು ಧನ್ಯರಾದರು. ಒಮ್ಮೆ ಅವನು ಮುಕ್ತಾಯಕ್ಕನೆಂಬ ಜ್ಞಾನಿಯೋರ್ವಳನ್ನು ಸಂಧಿಸುವನು. ಮುಕ್ತಾಯಕ್ಕನು ಅಣ್ಣ ಅಜಗಣ್ಣನನ್ನು ತನ್ನ ಸಾಧನೆಗೆ ಮಾರ್ಗದರ್ಶಕನನ್ನಾಗಿ ಇರಿಸಿಕೊಂಡಿದ್ದಳು. ಅವನು ಅನಿರೀಕ್ಷಿತವಾಗಿ ಇಹಲೋಕವನ್ನು ತೊರೆಯುತ್ತಾನೆ. ಅವನ ವಿಯೋಗದಿಂದ ಮುಕ್ತಾಯಿಗೆ ದುಃಖ ಉಕ್ಕಿ ಬರುತ್ತದೆ. ಅವನ ದೇಹದ ಬಳಿ ಆಕೆ ದುಃಖಿಸುವಳು. "ನೀನಿರುವಾಗ ನಿನ್ನ ಸಿದ್ಧಿಯ ಮಹತ್ತ್ವವನ್ನು ನಾನು ಪೂರ್ಣವಾಗಿ ತಿಳಿಯಲಿಲ್ಲ. ಇನ್ನು ನನಗೆ ಮಾರ್ಗದರ್ಶಕರಾರು ?" ಇದು ಅವಳ ದುಃಖದ ಬಗೆ. ಹೀಗೆ ದುಃಖಪಡುತ್ತಿರುವ ಸ್ತ್ರೀಯನ್ನು ಕಂಡು ಪ್ರಭುವಿಗೆ ಆಶ್ಚರ್ಯವಾಗುವುದು. ಅಜಗಣ್ಣನ ಯೋಗದ ಮಟ್ಟಕ್ಕೆ ತಾನು ಏರಲಿಲ್ಲವೆಂಬುದೇ ಮುಕ್ತಾಯಕ್ಕನ ದುಃಖದ ಕಾರಣ. ಅವನಂತೆ ತಾನೂ ಶಾಶ್ವತಾನಂದವನ್ನು ಪಡೆಯಲಿಲ್ಲವೆಂದು ಆಕೆ ದುಃಖ ಪಡುತ್ತಿರುವಳು. ಪ್ರಪಂಚದಲ್ಲಿ ಇನ್ನೂ ಕೆಲವು ಕಾಲ ಬದುಕಬೇಕೆಂಬ ವ್ಯಾಮೋಹವೇನೂ ಆಕೆಗಿಲ್ಲ. ಆದರೆ ಅಧ್ಯಾತ್ಮಸುಖವನ್ನು ಅಣ್ಣನು ಪಡೆದು ತಂಗಿಯನ್ನು ಹೀಗೆ ಕೈಬಿಟ್ಟನೆಂದು ಆಕೆ ದುಃಖಪಡುತ್ತಿರುವ ರೀತಿ ಪ್ರಭುವಿಗೆ ವಿಚಿತ್ರವೆನಿಸಿತು. ಪ್ರಭು ಮುಕ್ತಾಯಿಯ ಸತ್ಯಾನ್ವೇಷಣದ ಬಯಕೆಯನ್ನು ಮೆಚ್ಚಿ ಆಕೆಗೆ ಸಮಾಧಾನ ಹೇಳುವನು. "ಅವಳು ಬಯಸುವ ಶಾಶ್ವತಾನಂದಸ್ಥಿತಿಯನ್ನು ಅವಳು ತಾನೇ ಸ್ವಶಕ್ತಿಯಿಂದ ಸಾಧಿಸಿ ಪಡೆಯಬೇಕಾದ ಪದವಿ" ಎಂದು ಅವನು ಹೇಳುವನು. "ಆ ಸ್ಥಿತಿಗೆ ಏರುವ ಮಾರ್ಗವನ್ನು

ತೋರಿಸಲಿಕ್ಕಾದರೂ ಗುರು ಬೇಡವೆ?" ಎಂದು ಮುಕ್ತಾಯಿ ಕೇಳುತ್ತಾಳೆ. "ಒಂದು ಮಟ್ಟಕ್ಕೆ ಬಂದ ಮೇಲೆ ಗುರು ಶಿಷ್ಯರೆಂಬ ಮೋಹವನ್ನು ತೊರೆದು ತನ್ನನ್ನು ತಾನೇ ಅರಿಯಬೇಕು. ಸಾಧಕನ ಅರಿವೇ ಅವನಿಗೆ ಗುರು" ಎಂದು ಪ್ರಭು ಹೇಳುತ್ತಾನೆ. "ತಾನೇ ತಾನಾಗಿ ತನ್ನ ನಿಜಸ್ವರೂಪವನ್ನು ಅರಿದ ಬಳಿಕ ಅದನ್ನು ಇದಿರಿಟ್ಟು ಹೇಳುವುದು ಸಲ್ಲದು. ಅದು ಪೂರ್ಣ ಜ್ಞಾನದ ಗುರುತಲ್ಲ. ಪರಿಪೂರ್ಣತೆ ಮೌನದಲ್ಲಿ ಕೊನೆಗಾಣಬೇಕು. ಮಾತು ಅಜ್ಞಾನದ ಗುರುತು. ನಾನೆಂಬ ಹಂಗೇ ನಿನಗೆ ಇನ್ನೂ ಬಿಡದಿರುವಾಗ ನೀನೇತರ ಅರಿವನ್ನು ನನಗೆ ಹೇಳುವೆ ಹೋಗತ್ತ ಮರುಳೇ" ಎಂದು ಮುಕ್ತಾಯಕ್ಕ ಉತ್ತರ ಕೊಡುತ್ತಾಳೆ. ಅದಕ್ಕೆ ಪ್ರಭು ಸಮಾಧಾನದಿಂದ ಉತ್ತರ ಹೇಳುತ್ತಾನೆ. "ಅರಿಯದ ಮುನ್ನ ಮಾತು ಅಜ್ಞಾನವೆಂಬುದೇನೋ ಸರಿ. ಆದರೆ, ಅರಿತು ಆಡುವ ಮಾತು ಜ್ಯೋತಿರ್ಲಿಂಗ. ತನ್ನ ತಾನರಿದು ಆಡುವ ನುಡಿಯೆಲ್ಲ ಪರತತ್ತ್ವ. ಆದ್ದರಿಂದಲೇ ಶರಣರು ನುಡಿದು ಸೂತಕಿಗಳಲ್ಲ; ನಡೆದು ಬದ್ಧರಲ್ಲ. ಅವರು ನಡೆದರೆ ನಿರ್ಗಮನ, ನುಡಿದರೆ ನಿಶ್ಶಬ್ದ. ನಿನ್ನ ಮನಸ್ಸಿನ ದುಗುಡವ ಕಳೆಯಲಿಕ್ಕಾಗಿ ನಾನು ಎಂಬ ಮಾತನ್ನು ಮುಂದುಮಾಡಿ ಹೇಳಬೇಕಾಯಿತು. ಆದರೆ ಅರಿತಮೇಲೆ ಉಪಯೋಗಿಸುವ 'ನಾನು' ಎಂಬುದು ಭವದ ಬೀಜವಲ್ಲ. ಅದು ಸುಟ್ಟ ಬಟ್ಟೆಯಂತೆ ತೋರಿಕೆಗೆ ಮಾತ್ರ ಇರುವಂತಹುದು; ಮುಟ್ಟಿದರೆ ಬೂದಿಯಾಗುತ್ತದೆ. ಆದರೆ ಅದು ಬಟ್ಟೆಯಾಗಿ ಕಂಡರೂ ಅದನ್ನು ಹೊದಿಯಲಾಗುವುದಿಲ್ಲ. ಈ ಸ್ಥಿತಿಯನ್ನು ಪಡೆದು ಪ್ರಪಂಚದಲ್ಲಿ ಈ ದೇಹದ ಮೂಲಕ ವ್ಯವಹರಿಸುತ್ತ ಇದರಲ್ಲಿ ಇದ್ದೂ ಇಲ್ಲದಂತಿರುವುದೇ ನಿಜಸಮಾಧಿ. ಅಜಗಣ್ಣ ಇಂತಹ ಪದವಿಯನ್ನು

ಪಡೆದು ಶಾಶ್ವತನಾಗಿರುವನು. ಇಂತಹ ಸ್ಥಿತಿಯನ್ನು ಪಡೆಯಲು ಯತ್ನಿಸದೆ ಗೋಳಾಡುತ್ತ, ನೀನು ಯೋಗಮಾರ್ಗದ ಸದವಕಾಶವನ್ನು ಕಳೆದುಕೊಳ್ಳುವುದು ಯುಕ್ತವಲ್ಲ" ಹೀಗೆ ಪ್ರಭು ಮುಕ್ತಾಯಿಗೆ ಸಮಾಧಾನ ಮಾಡಿ ಮುಂದಿನ ಸಾಧನೆಗೆ ಬೆಳಕನ್ನು ತೋರಿಸುವನು.

ಸಿದ್ಧರಾಮಯ್ಯನಿಗೆ ಉಪದೇಶ

ಪ್ರಭು ಮುಂದೆ ಮುಂದೆ ನಡೆಯುತ್ತಿರುವಾಗ ಸೊನ್ನಲಿಗೆಯ ಸಿದ್ಧರಾಮನ ಕೀರ್ತಿ ಅವನ ಕಿವಿಗೆ ಬಿತ್ತು. ಸಿದ್ಧರಾಮನು ಕರ್ಮಯೋಗದಿಂದ ಮಹಾತ್ಮನಾಗಿ ಬೆಳಕನ್ನು ಕಂಡವನು ಎಂಬುದನ್ನು ಪ್ರಭು ಬಲ್ಲನು. ಆದರೂ ಅವನ ಯೋಗಮಾರ್ಗವನ್ನು ಶುದ್ಧಗೊಳಿಸಿ ಅವನನ್ನು ಲಿಂಗದೇಹಿಯನ್ನಾಗಿ ಮಾಡಲು ಅವನ ಬಳಿ ಹೊರಟನು. ಸಿದ್ಧರಾಮನು ಕೆರೆ ಬಾವಿಗಳನ್ನು ಕಟ್ಟಿಸುವುದರಲ್ಲೂ, ದೇವಾಲಯದ ನಿರ್ಮಾಣದಲ್ಲೂ ಕಾಲವನ್ನು ಕಳೆಯುತ್ತಿದ್ದನು. ಪ್ರಭುವಿಗೆ ಅವನನ್ನು ಕೊಂಚ ಪರೀಕ್ಷಿಸಿ ನೋಡಬೇಕೆನ್ನಿಸಿತು. ಆಗ ಪ್ರಭು ಕೆರೆಯ ಕೆಲಸದಲ್ಲಿ ನಿರತರಾಗಿದ್ದ ಅವನ ಶಿಷ್ಯರ ಬಳಿಗೆ ಹೋಗಿ ನಗುತ್ತ "ಒಡ್ಡರಿರಾ, ನಿಮ್ಮ ಗುರು, ಆ ಹಿರಿಯ ಒಡ್ಡ ಎಲ್ಲಿರುವನು, ಅವನನ್ನು ಕರೆಯಿರಿ" ಎನ್ನುವನು. ಗುರುವನ್ನು ನಿಂದಿಸಿದ್ದಕ್ಕೆ ಅವರಿಗೆ ಕೋಪ ಬಂದಿತು. ಆದರೂ ಸಹಿಸಿಕೊಂಡು ಅವರು ಗುರುವಿಗೆ ಹೊಸ ವ್ಯಕ್ತಿಯೊಬ್ಬನು ಬಂದಿರುವುದನ್ನು ತಿಳಿಸುವರು. ಸಿದ್ಧರಾಮ ಅಲ್ಲಮರಿಬ್ಬರೂ ಸಂಧಿಸುವರು. "ನೆಲವನ್ನು ಅಗೆದು ಮುಗಿಯಿತೇ ಸಿದ್ಧರಾಮಯ್ಯ. ನೀನು ಸಂಸಾರವನ್ನು ಬಿಟ್ಟರೂ.

ಸಂಸಾರ ನಿನ್ನನ್ನು ಬಿಡಲಾರದಲ್ಲವೆ?" ಎಂದು ಪ್ರಭು ಕೇಳಿದನು. "ಈ ಸಂಸಾರದಲ್ಲಿ ನಾನಿದ್ದರೂ ಬದ್ಧನಲ್ಲ" ಎಂದು ಸಿದ್ಧರಾಮನು ಹೇಳಿದನು. "ಆದರೂ ಈ ಸಂಸಾರ ಅಪಾಯಕಾರಿ" ಎಂದು ಅಲ್ಲಮನು ಹೇಳುತ್ತಾನೆ. "ಸಂಸಾರದಲ್ಲಿ ಇದ್ದರೂ ಕೆಸರೊಳಗೆ ಇರುವ ಕಮಲದಂತೆ ನಿರ್ಲಿಪ್ತನಾಗಿರಲು ಸಾಧ್ಯವಿಲ್ಲವೇ? ಬೆಳಕನ್ನು ಕಂಡವನು ಜಗತ್ತಿನ ಉದ್ಧಾರಕ್ಕಾಗಿ ದುಡಿಯಬಾರದೇಕೆ?" ಎಂದು ಸಿದ್ಧರಾಮನು ಕೇಳುತ್ತಾನೆ. "ನಿನ್ನ ಆದರ್ಶ ದೊಡ್ಡದು. ಆದರೂ, ಶಿವಯೋಗಿಯು ಸಾಕಾರನಿಷ್ಠೆಯನ್ನೂ ದಾಟಿ ಮುಂದೆ ನಡೆಯಬೇಕು. ಕಾಯವೇ ಪೀಠ, ಪ್ರಾಣವೇ ಲಿಂಗವಾಗಿರಲು ಶರಣನು ಬೇರೆ ದೇವಾಲಯವನ್ನೇಕೆ ಮಾಡಿಸಬೇಕು? ದೇಹವೇ ದೇಗುಲವಾಗಿರಲು ಮತ್ತೆ ಬೇರೆ ದೇಗುಲವೇಕಯ್ಯ? ಲಿಂಗದ ಅರಿವು ಸಿದ್ಧಿಸಿತೆಂಬುದನ್ನು ಮಾತಿನಲ್ಲಿ ಹೇಳಬಾರದು. ಅದು ಕಾರ್ಯದಲ್ಲಿ ಸಹಜವಾಗಿ ಕಾಣಬೇಕು. ಸರ್ವವ್ಯಾಪಕ ಲಿಂಗವನ್ನು ಒಂದೆಡೆಯಲ್ಲಿ ಪ್ರತಿಷ್ಠಿಸುವುದರಿಂದ ಬೇರೆ ಎಲ್ಲಿಯೂ ಅವನು ಇಲ್ಲವೆಂಬುದನ್ನು ಎಲ್ಲರಿಗೂ ತೋರಿಸಿದಂತಾಗುವುದು. ಇದೂ ಅಲ್ಲದೆ ಕೆರೆ ದೇಗುಲಗಳ ಕಟ್ಟಡವೆಲ್ಲವೂ ಭವದ ತೆಕ್ಕೆಗೆ ಒಳಗು" ಎಂದು ಪ್ರಭು ಹೇಳುತ್ತಾನೆ. "ಹಾಗಾದರೆ ಅವುಗಳನ್ನು ಮಾಡದೆ ಮುಂದುವರಿಯುವುದು ಹೇಗೆ? ಕೃಷಿಯ ಮಾಡಿ ಉಣ್ಣದೆ ಹಸಿವು ಬಗೆಹರಿಯುವ ಪರಿ ಇನ್ನೆಂತು" ಎಂದು ಸಿದ್ಧರಾಮನು ಕೇಳುತ್ತಾನೆ. "ನಿಜ, ಕೃಷಿಯ ಮಾಡಿ ಉಣ್ಣಬೇಕು. ಆದರೆ ದಿನವೆಲ್ಲವೂ ಕೃಷಿಮಾಡುತ್ತಲೇ ಇದ್ದರೆ ಉಣ್ಣುವುದು ಯಾವಾಗ? ಸಾಯುವವರೆಗೂ ಸಾಧನೆಯನ್ನೇ ಮಾಡುತ್ತಿದ್ದರೆ, ರಣರಂಗದಲ್ಲಿ ಕಾದುವುದು ಯಾವಾಗ? ಆದ್ದರಿಂದ ದೇಹಭಾವನೆಯನ್ನು ತೊರೆದು, ದೇಹವ ಜೀವದ

ಪೊಲಿಗೆಯ ದಾರವ ಕಿತ್ತಲ್ಲದೆ ಲಿಂಗದ ಅರಿವು ಸಾಧ್ಯವಾಗದು, ಸಿದ್ಧರಾಮಯ್ಯ." ದೇಹಭಾವ ಅಳಿದಲ್ಲದೆ ಜೀವಭಾವ ಅಳಿಯದು. ಜೀವಭಾವ ಅಳಿದಲ್ಲದೆ, ಭಕ್ತಿಭಾವ ಅಳವಡದು. ಭಕ್ತಿಭಾವ ಅಳವಟ್ಟಲ್ಲದೆ, ಅರಿವು ತಲೆದೋರದು. ಅರಿವು ತಲೆದೋರಿದಲ್ಲದೆ, ಕುರುಹು ನಷ್ಟವಾಗದು. ಕುರುಹು ನಷ್ಟವಾದಲ್ಲದೆ, ಮಾಯೆ ಹಿಂಗದು. ಹೀಗೆ ದೇಹಜೀವಗಳ ಪೊಲಿಗೆಯ ದಾರವನ್ನು ಕಿತ್ತು ತನ್ನನ್ನು ಅನುಗ್ರಹಿಸುವಂತೆ ಸಿದ್ಧರಾಮನು ಪ್ರಭುವನ್ನು ಬೇಡುವನು. "ನಿನ್ನೊಳಗೆ ನೀನು ತಿಳಿದು ನೋಡಿ ನಿರ್ಲಿಪ್ತನಾಗಬೇಕು. ನೀನು ಈ ದೇಹದಲ್ಲಿ ಇರುವುದರೊಳಗೆ ಸಾಧ್ಯವಾದಷ್ಟು ಜೀವಿಗಳನ್ನು ಉದ್ಧರಿಸಬೇಕೆಂಬುದೇನೋ ಉದಾತ್ತವಾದುದೇ ಸರಿ. ಆದರೆ ನೀನು ಇದ್ದೂ ಇಲ್ಲದವನಂತೆ, ಮಾಡಿದರೂ ಮಾಡದವನಂತೆ ನಿರ್ಲಿಪ್ತನಾಗುವುದನ್ನು ಕಲಿಯಬೇಕು. ನೀನು ಇಂದು ಮಾತ್ರ ಇದ್ದು ನಾಳೆ ಹೋಗತಕ್ಕವನಲ್ಲ. ನೀನು ಎಂದೆಂದಿಗೂ ಶಾಶ್ವತವಾಗಿ ಇರತಕ್ಕವನು. ನೀನು ಮಾಡತಕ್ಕ ಕಾರ್ಯಗಳ ಪರಿಣಾಮ ಒಂದು ಗ್ರಾಮಕ್ಕೆ ಮಾತ್ರವಲ್ಲದೆ ಇಡೀ ವಿಶ್ವಕ್ಕೆ ದೊರಕಬೇಕಾದರೆ, ಈ ದೇಹದಲ್ಲಿ ಅಭಿಮಾನಿಸಿದ 'ನಾನು' ಎಂಬ ಭವದ ಬೀಜ ಅಳಿಯಬೇಕು. ನೀನು ಪರಮಾನಂದಸ್ವರೂಪನಾಗಿದ್ದು ಕೈವಲ್ಯವನ್ನು ಅನುಭವಿಸುತ್ತ—ಭಕ್ತಾನುಗ್ರಹಕ್ಕಾಗಿ ಲೀಲೆಯ ಕಾರ್ಯಗಳನ್ನು ನಡೆಸಬೇಕು. ಇದು ಶಿವಯೋಗಿಯ ನೈಜಸ್ಥಿತಿ. ನೀನು ಒಂದು ಕೆರೆ ಕಟ್ಟಿದ್ದೀಯೆ. ಅದೂ ಆವಶ್ಯಕವೆಂಬುದೇನೋ ನಿಜ, ಆದರೆ ಅದನ್ನು ಕಟ್ಟಲು ನಿನ್ನಂತಹ ಶಿವಯೋಗಿಯೇ ಬೇಕೆ? ನಾನೊಂದು ಕೆರೆಯನ್ನು ಕಟ್ಟಿದ್ದೇನೆ ನೋಡು. "ತನುವೆಂಬ ಏರಿಗೆ ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ

ತುಂಬಿ ಕೆರೆಯು ಕಟ್ಟಬಲ್ಲವರನಾರನೂ ಕಾಣೆ. ನಾ ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರ, ನಿಮ್ಮಾಣೆ, ಇಂತಹ ಕೆರೆಯನ್ನು ಕಟ್ಟಿದರೆ, ನಿನ್ನ ಕರ್ಮಯೋಗ ಸಾರ್ಥಕವಾಗುವುದಲ್ಲದೆ, ಶಿವ ಯೋಗದಲ್ಲಿ ಕೊನೆಗೊಂಡು ಪರಿಪೂರ್ಣವೆನಿಸುತ್ತದೆ." ಪ್ರಭುವಿನ ಈ ಮಾತುಗಳನ್ನು ಕೇಳಿ ಸಿದ್ಧರಾಮನು ಪೂರ್ಣಾನಂದಭರಿತ ನಾದನು. ಅಲ್ಲಿಂದ ಮುಂದೆ ಪ್ರಭು ಸಿದ್ಧರಾಮನೊಡಗೂಡಿ ಬಸವಣ್ಣನ ದರ್ಶನಕ್ಕಾಗಿ ಕಲ್ಯಾಣಕ್ಕೆ ಹೊರಡುವನು.

ಕಲ್ಯಾಣಕ್ಕೆ ಪ್ರಭುವಿನ ಭೇಟಿ

ಅಲ್ಲಮಪ್ರಭು ಸಿದ್ಧರಾಮನೊಡನೆ ಬಸವಣ್ಣನ ಧಾರ್ಮಿಕ ಸೇವೆಯನ್ನು ಪ್ರಶಂಸಿಸುತ್ತ ಕಲ್ಯಾಣಪಟ್ಟಣದ ಸಮೀಪಕ್ಕೆ ಹೋದನು. ಅವರಿಬ್ಬರೂ ಮಹಾದ್ವಾರವನ್ನು ಪ್ರವೇಶಿಸಿದಾಗ ಬಸವಣ್ಣನು ಲಿಂಗಪೂಜಾನಿರತನಾಗಿದ್ದನು. ಇಬ್ಬರು ಜಂಗಮರು ಮಹಾದ್ವಾರದಲ್ಲಿ ನಿಂತಿರುವುದಾಗಿ ಹಡಪದ ಅಪ್ಪಣ್ಣ ಹೋಗಿ ತಿಳಿಸಿದನು. ಬಸವಣ್ಣ ತಾನೇ ಹೋಗಿ ಅವರನ್ನು ಎದುರು ಗೊಂಡು ಕರೆದೊಯ್ಯಬೇಕಾಗಿತ್ತು. ಆದರೆ ಪೂಜೆ ಅರ್ಧಕ್ಕೆ ನಿಲ್ಲಬಾರದು. ಈ ಲಿಂಗ ಬೇರೆ ಆ ಜಂಗಮ ಬೇರೆ ಏನೂ ಅಲ್ಲ. ಇಬ್ಬರೂ ಒಬ್ಬನೇ ಆಗಿರುವರು. ದೇಹವೇ ಭಕ್ತ, ಪ್ರಾಣವೇ ಜಂಗಮನಾದ ಬಳಿಕ ಅಲ್ಲಿ ಇಲ್ಲಿ ಎಂಬ ಭೇದವಿಲ್ಲ. ತಾನು ಪೂಜೆಯಲ್ಲಿ ಇದ್ದುದರಿಂದ ಜಂಗಮರನ್ನು ಗೌರವಿಸಿ ಕರೆತರುವಂತೆ ಬಸವಣ್ಣ ಅಪ್ಪಣ್ಣನಿಗೆ ತಿಳಿಸುವನು. "ಒಳಗೆ ದಯಮಾಡಿಸ ಬೇಕು, ಸ್ವಾಮಿ. ಜಂಗಮಪ್ರಾಣಿ ಬಸವಣ್ಣನವರು ತಮ್ಮನ್ನು ಒಳಕ್ಕೆ ಬಿಜಯಂಗೈಸುವಂತೆ ನಿರೂಪಿಸಿದ್ದಾರೆ" ಎಂದು ಅಪ್ಪಣ್ಣ ಬೇಡಿದನು. "ಭಕ್ತನು ಭಕ್ತನ ಮನೆಗೆ ಹೋದರೆ ಭೃತ್ಯಾಚಾರವ

ಮಾಡುವುದು ಸತ್ಸಂಪ್ರದಾಯ. ಇದಿರೆದ್ದು ಹೋಗಿ ಭಕ್ತನನ್ನು ಕಾಣುವುದು ಸದಾಚಾರ. ಬಂದ ಜಂಗಮನ ಇಂಗಿತಾಕಾರವ ನರಿದು ಇದಿರೆದ್ದು ವಂದಿಸಿ, ನಡುನಡುಗಿ ಕಿಂಕರನಾಗಿ ಭೀತಿಯಿಂದ ಭೃತ್ಯನಾಗಿರಬಲ್ಲಡೆ ಅದು ಭಕ್ತಿ; ಅದು ದಾಸಭಾವ. ಬಂದವ ರಾರೆಂದರಿಯದೆ, ನಿಂದ ನಿಲವನರಿಯದೆ, ಕೆಮ್ಮನೆ ಅಹಂಕಾರವ ಹೊತ್ತುಕೊಂಡು ಇಪ್ಪವರ ಬಳಿಗೆ ಗುಹೇಶ್ವರ ಅಡಿ ಇಡುವನಲ್ಲ. ಮಾತಿನ ಮಾಲೆಯಲ್ಲಿ ಭಕ್ತಿಯಿಲ್ಲ. ಆದರೆ ದಾಸೋಹದಾ ಚರಣೆಯಲ್ಲಿ ಭಕ್ತಿ ಇರ್ಪುದು. ನಾನಾಗದ ಮುನ್ನ ತಾನಾದೆ ನೆಂಬವರಲ್ಲಿಗೆ ಗುಹೇಶ್ವರ ಅಡಿ ಇಡನು." ಹೀಗೆ ಪ್ರಭು ಅಪ್ಪಣ್ಣನಿಗೆ ಹೇಳಿ ಕಳುಹಿಸಿದನು. ಅಪ್ಪಣ್ಣನು ಆ ಮಾತನ್ನು ಹಾಗೆಯೇ ಬಸವಣ್ಣನಿಗೆ ಅರಿಕೆಮಾಡಿದನು. ಆ ವೇಳೆಗೆ ಪೂಜೆ ಮುಗಿಯುವುದರಲ್ಲಿತ್ತು. ಅವನು ಮತ್ತೆ ಹೇಳಿ ಕಳುಹಿಸಿದನು. "ಈ ಮನೆ ಜಂಗಮರ ಮನೆ. ತನ್ನ ಮನೆಗೆ ತಾ ಬರುವುದಕ್ಕೆ ಮುನಿಸೇಕೆ? ನಾನೊಬ್ಬ ಜಂಗಮರ ಮನೆಯ ಕಾವಲುಗಾರ ಅಷ್ಟೇ." ಹೀಗೆ ವಿನಯದಿಂದ ತಿಳಿಸಿ ಅವರನ್ನು ಒಳಗೆ ಕರೆದು ಕೊಂಡು ಬಾ. ಅಷ್ಟರೊಳಗೆ ನಾನೂ ಬರುತ್ತೇನೆ" ಎಂದು ಅಣ್ಣನು ಹೇಳಿ ಕಳುಹಿಸಲು ಈ ಸಾರಿಯೂ ಬಸವಣ್ಣನ ಬದಲು ಅಪ್ಪಣ್ಣನೇ ಬರುತ್ತಿರುವುದನ್ನು ಕಂಡು ಪ್ರಭುವಿಗೆ ಕೋಪ ಇಮ್ಮಡಿಸಿತು. ಬಂದ ಜಂಗಮ ಯಾರೆಂದರಿಯದೆ ಅಹಂಕಾರ ದಿಂದುಂಟಾದ ಮರೆವೆಗಾಗಿ ಪಶ್ಚಾತ್ತಾಪಗೊಂಡ ಬಸವಣ್ಣನು ಪೂಜೆ ಮುಗಿಸಿದೊಡನೆ ತಾನೇ ಪ್ರಭುವನ್ನು ಕರೆತರಲು ಹೊರಡು ವನು. ಶರಣರ ಸಮೂಹವೆಲ್ಲವೂ ಅವನನ್ನು ಹಿಂಬಾಲಿಸಿತು. ಅಣ್ಣನು ಪ್ರಭುವಿನ ಪಾದಗಳ ಮೇಲೆ ಬಿದ್ದು ವಂದಿಸಿ "ನನ್ನ ಅಹಂಕಾರದಲ್ಲಿ ನಾನು ಕೆಟ್ಟೆನು. ನನ್ನ ಅಪರಾಧವನ್ನು ಕ್ಷಮಿಸ

ಬೇಕು. ಪ್ರಭುವೇ" ಎಂದು ಬೇಡಿದನು. ಪ್ರಭುವಿನ ಸಿಟ್ಟು ಇಷ್ಟಕ್ಕೇ ಇಳಿಯುವ ಹಾಗಿರಲಿಲ್ಲ. ಅಣ್ಣನ ಮನಸ್ಸನ್ನು ಪರೀಕ್ಷಿಸಿ ಅವನ ಭಕ್ತಿಯ ಅಂತಸ್ತನ್ನು ತಿಳಿಯಬೇಕೆಂಬುದು ಪ್ರಭುವಿನ ಇಷ್ಟ. ಆಗ ಪ್ರಭು ಹೇಳುತ್ತಾನೆ. "ಜಂಗಮ ಬಂದು ಬಾಗಿಲಲ್ಲಿ ಕಾದಿರಲು ಲಿಂಗಾರ್ಚನೆ ಮಾಡುವುದೇತರ ಭಕ್ತಿ". ಬಸವಣ್ಣ! ಇಂತಹ ಆಡಂಬರದ ಭಕ್ತರ ಮನೆಗೆ ಹೋಗುವ ಜಂಗಮ ಅಜ್ಞಾನಿ." ಇದಕ್ಕೆ ಬಸವಣ್ಣನು "ಎನ್ನ ತಪ್ಪು ಅನಂತ ಕೋಟಿ. ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದರೆ ನಿಮ್ಮ ಪಾದ ಸಾಕ್ಷಿ. ಇದೊಂದು ಬಾರಿ ನನ್ನ ತಪ್ಪನ್ನು ಒಪ್ಪಮಾಡಿ ಕೊಳ್ಳಬೇಕು, ಪ್ರಭುವೆ?" ಎಂದು ಹೇಳುತ್ತ ಅಂಗಲಾಚಿ ಬೇಡುವನು. ಅಲ್ಲಿ ಸೇರಿದ್ದ ಶರಣರೆಲ್ಲರೂ ಬಸವಣ್ಣನ ಪರವಾಗಿ ಪ್ರಭುವಿನಲ್ಲಿ ಮೊರೆಯಿಡುವರು. ಬಸವಣ್ಣನ ಪಶ್ಚಾತ್ತಾಪವನ್ನು ಕಂಡು ಸಿದ್ಧರಾಮನ ಮನಸ್ಸೂ ಕರಗಿತು. "ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯ, ಹಾಲಲದ್ದು ನೀರಲದ್ದು. ಭವರೋಗ ವೈದ್ಯನೆಂದು ನಾ ನಿಮ್ಮನ್ನು ನಂಬಿದ್ದೇನೆ" ಎಂದು ಮತ್ತೊಮ್ಮೆ ಬಸವಣ್ಣನು ಪ್ರಭುವಿನ ಪಾದಗಳನ್ನು ಹಿಡಿಯುವನು. ಬಸವಣ್ಣ ನಂತಹ ನಿಜವಾದ ಭಕ್ತನ ಮೇಲೆ ಪ್ರಭುವಿಗೆ ಇಷ್ಟೊಂದು ಕೋಪವೇಕೆ? ಅವನು ನಿಜವಾದ ಭಕ್ತನಾದುದರಿಂದಲೇ ಅವನ ಭಕ್ತಿಯನ್ನು ಪಾವನಗೊಳಿಸಲು ಪ್ರಭು ಇಷ್ಟು ಪರೀಕ್ಷಿಸಬೇಕಾ ಯಿತು." "ಸೂಳೆ ಹಲವರನ್ನು ಮೋಹಿಸಿದರೂ ದೋಷವಿಲ್ಲ. ಪತಿವ್ರತೆ ತನ್ನ ಗಂಡನಲ್ಲದೆ ಮತ್ತೊಬ್ಬನ ಮುಖವನ್ನು ನೋಡಿದ್ದ ರಿಂದಲೇ ಅವಳನ್ನು ಚಂಡಾಲಗಿತ್ತಿ ಎನ್ನುವರು ಲೋಕದ ಜನರು." ಪ್ರಭುವಿನ ಈ ಮಾತನ್ನು ಕೇಳಿ ಬಸವಣ್ಣ ಮತ್ತೆ

ತಲೆಬಾಗಿ ದೈನ್ಯದಿಂದ ಹೇಳಿದನು. "ನನ್ನ ಭಕ್ತಿಯ ಆಚರಣೆ ನಿಮ್ಮಿಂದ ಪೂರ್ಣಗೊಳ್ಳಬೇಕು ಪ್ರಭುವೇ. ನೀವೇ ಮಾರ್ಗ ದರ್ಶಕರಾಗಿ ನನ್ನ ಕಾರ್ಯರಂಗದ ಮೇಲೆ ಬೆಳಕು ಬೀರಬೇಕು" ಎಂದು ಅಂಗಲಾಚಿಕೊಳ್ಳುವನು. ಪ್ರಭು ಪ್ರಸನ್ನನಾಗಿ ಬಸವಣ್ಣ ನೊಡನೆ ಅರಮನೆಗೆ ಪ್ರವೇಶಿಸಿದನು. ಒಳಗೆ ಹೊಕ್ಕೊಡನೆ ಮರುಳುಶಂಕರದೇವನೆಂಬ ಗುಪ್ತನಾದ ಭಕ್ತನೋರ್ವನು ಪ್ರಭು ವಿಗೆ ಮೊದಲು ಕಾಣಿಸುವನು. ಅವನು ಆಡಂಬರದವನಲ್ಲ. ಆದರೂ ಬಸವಣ್ಣನ ಜಂಗಮಭಂಡಾರದಲ್ಲಿ ಅನರ್ಘ್ಯವಾದ ರತ್ನ: ಅಣ್ಣನ ದಾಸೋಹದಾಚರಣೆಗೆ ಮೂಲಾಧಾರಸ್ತಂಭ. ಪಾಪಿಯ ಕಣ್ಣಿಗೆ ಪರುಷಮಣಿ ಕಲ್ಲಾಗಿ ಕಾಣುವಂತೆ ಲೋಕದಲ್ಲಿ ಶರಣರು ಗುಪ್ತವಾಗಿ ಅಡಗಿರುವರೆಂಬುದಕ್ಕೆ ಮರುಳುಶಂಕರದೇವನೇ ಸಾಕ್ಷಿ. ಅವನು ಅರಮನೆಯಲ್ಲಿ ದಾಸೋಹ ನಡೆಯುವೆಡೆಯಲ್ಲಿ ಶರಣರು ಉಂಡು ಮಿಕ್ಕ ಅನ್ನದ ಅಗುಳನ್ನು ಆರಿಸಿ—ಅಷ್ಟರಿಂದಲೇ ತೃಪ್ತನೂ, ಶಾಂತನೂ ಆಗಿದ್ದ ಸದ್ಭಕ್ತ. ಇಂತಹ ಭಕ್ತನನ್ನು ಪಡೆದ ಬಸವಣ್ಣನೇ ಧನ್ಯನೆಂದು ಪ್ರಭು ಹೇಳಿದಾಗ, ಶರಣ ರೆಲ್ಲರೂ ಆಶ್ಚರ್ಯಗೊಂಡು ಮರುಳುಶಂಕರದೇವನ ಪಾದಕ್ಕೆ ನಮಸ್ಕರಿಸುವರು.

ಪ್ರಭು ಬಸವಣ್ಣನ ಆದರಾತಿಥ್ಯವನ್ನು ಪಡೆಯಲು ಸಿದ್ಧ ನಾಗುವನು. ಬಸವಣ್ಣನು ಯಾರೇನ ಬೇಡಿದರೂ ನೀಡುವಷ್ಟು ದಾನಶೂರನೆಂದು ಲೋಕದಲ್ಲಿ ಪ್ರಸಿದ್ಧಿಯಾಗಿತ್ತು. ಈ ಬಗೆಯ ಹಮ್ಮಿನ ಸೇವೆ ಸದ್ಭಕ್ತಿಗೆ ಸಲ್ಲದೆಂದು ಪ್ರಭು ಭಾವಿಸಿದ್ದನು. ಅಣ್ಣನ ಈ ಅಹಂಕಾರವರ್ತನೆಯನ್ನು ತೊಲಗಿಸಲಿಕ್ಕಾಗಿ ಪ್ರಭು ಆರೋಗಣೆಗೆ ಕುಳಿತು ಭಕ್ಷ್ಯಭೋಜ್ಯಗಳೆಲ್ಲವನ್ನು ಉಂಡು ಮುಗಿಸಿದನು. ಜಂಗಮನಿಗೆ ತೃಪ್ತಿಯಾಗುವವರೆಗೂ ಭಕ್ತನು

ಬಡಿಸಬೇಕಾದುದು ಸಂಪ್ರದಾಯ. ಆದರೆ ಇಲ್ಲಿ ಜಂಗಮನಿಗೆ ತೃಪ್ತಿಯಾಗಲಿಲ್ಲ. ಮಾಡಿದ ಅಡಿಗೆ ಎಲ್ಲವೂ ಮುಗಿಯಿತು. ಅಣ್ಣನಿಗೆ ಅಹಂಕಾರದ ಭ್ರಮೆಯೂ ಹರಿಯಿತು; ಮಾಡಿ ನೀಡಿ ಮೆಚ್ಚಿಸಲು ತನಗೆ ಸಾಧ್ಯವಿಲ್ಲವೆಂಬ ಅರಿವಾಯಿತು. "ಅಶನಕ್ಕೆ ಬಂದವನಲ್ಲ ಪ್ರಭು. ತನಗೆ ಭಕ್ತಿಪಥವ ತೋರಿಸಲಿಕ್ಕಾಗಿ ಬಂದವನು. ಅವನಿಗೆ ತನ್ನನ್ನೇ ಭಕ್ತಿಯಿಂದ ಅರ್ಪಿಸುವುದೊಂದೇ ತನಗೆ ಉಳಿದಿರುವ ಮಾರ್ಗ" ಎಂಬ ಅರಿವು ಅಣ್ಣನಿಗುಂಟಾಯಿತು. ಶರಣರೆಲ್ಲರೂ ಅವನಿಗೆ ಆ ರೀತಿ ಮಾಡುವಂತೆ ಎಚ್ಚರಿಸಿದರು. ಆಗ ಅಣ್ಣನು ಸಾಷ್ಟಾಂಗ ಪ್ರಣಾಮಪೂರ್ವಕವಾಗಿ ಆತ್ಮಾರ್ಪಣಮಾಡುವನು. "ಮಾಡುವಾತ ನಾನಲ್ಲಯ್ಯ, ನೀಡುವಾತ ನಾನಲ್ಲಯ್ಯ. ಮಾಡುವವನು ಬೇಡುವವನು ನೀನೆಯೇ, ಮನೆಯ ತೊತ್ತು ಅಲಸಿದರೆ ಒಡತಿ ಮಾಡಿಕೊಂಬಂತೆ ನಿನಗೆ ನೀ ಮಾಡಿಕೋ, ನೀ ಕೊಟ್ಟದ್ದನ್ನು ನಿನಗೆ ನಿನ್ನವನಾಗಿ ನಾ ಬಡಿಸುವೆನು. ಬಡಿಸಲಿಕ್ಕೆ ನನ್ನದೆಂಬುದು ಏನೂ ಇಲ್ಲ. ನಿನ್ನ ಸೊಮ್ಮು ನೀ ಸಲ್ಲಿಸಿಕೋ. ಎನ್ನ ಮಾನ–ಅಪಮಾನ, ಹಾನಿ–ವೃದ್ಧಿ ಎಲ್ಲವೂ ನಿಮ್ಮದು ಸ್ವಾಮಿ. ನೀವು ಹೇಳಿದ ಹಾಗೆ ನಡೆಯುವ ಸೇವಕ ನಾನು. ತೊತ್ತಿನಮೇಲೆ ನೀವು ಏಕೆ ಇಷ್ಟು ಆಗ್ರಹಮಾಡಬೇಕು" ಎಂದು ಅಣ್ಣನು ವಿನಯದಿಂದ ಬೇಡುವನು. ಈಗ ಪ್ರಭುವಿಗೆ ತೃಪ್ತಿಯಾಯಿತು. "ನಾನೆಂಬ ಅಹಂಕಾರದಲ್ಲಿ ನಾನುಂಡೆನಾದರೆ ನನಗದೇ ಭಂಗ ನೋಡಾ. ಅಂಗೈಯಲ್ಲಿರುವ ಲಿಂಗಕ್ಕೆ ದೂರ ನೋಡಾ. ಮಾಡುವ ನೀಡುವ ಭಾವ ಮನದಲ್ಲಿ ಹೊಳೆದರೆ ಶಿವನು ಮೆಚ್ಚನು" ಎಂದು ಪ್ರಭು ನಿರಹಂಕಾರಸ್ಥಿತಿಯನ್ನು ಬಸವಣ್ಣನಿಗೆ ಬೋಧಿಸಿದನು. ಲೋಕದಲ್ಲಿ ಇದ್ದು ಎಲ್ಲವನ್ನೂ ಮಾಡುತ್ತ ನಿರ್ಲಿಪ್ತನಾಗಿರುವ ಶೂನ್ಯ

ಸ್ಥಿತಿಯನ್ನು ಪ್ರಭು ದಿವ್ಯ ಆದರ್ಶವನ್ನಾಗಿ ಅಣ್ಣನಿಗೆ ತಿಳಿಸಿದನು. ಅವನಿಗೆ ಹಸಿವು ತೃಷೆಗಳು ಅಳಿದಿದ್ದುವು ಅಂದರೆ ಉಂಬೆನೆಂಬ ಬಯಕೆ ಇರಲಿಲ್ಲ ಹಾಗೆಯೇ ಒಲ್ಲೆನೆಂಬ ವೈರಾಗ್ಯವೂ ಇರಲಿಲ್ಲ. ಅವನ ಸ್ವಭಾವ ಪೂರ್ಣತೃಪ್ತಿಯೊಳಗೆ ಅಡಗಿತ್ತು. ಇಂತಹ ದಿವ್ಯಪ್ರಭೆ ನಿತ್ಯತೃಪ್ತಿ, ಸಮದೃಷ್ಟಿ, ಆತ್ಮ ವಿಶ್ವಾಸಗಳನ್ನು ಪ್ರಭು ಬಸವಣ್ಣನ ಧಾರ್ಮಿಕ ಜೀವನದಲ್ಲಿ ಹೊಂದಿಸಿದನು.

ಅನುಭವಮಂಟಪದಲ್ಲಿ ಶರಣರಿಗೆ ಮಾರ್ಗದರ್ಶನ

ಬಸವಣ್ಣನ ಮಹಾಮನೆಯಲ್ಲಿ ಒಂದೆಡೆ ಧಾರ್ಮಿಕ ಕ್ರಾಂತಿ, ಇನ್ನೊಂದು ಕಡೆ ಸಮಾಜಸುಧಾರಣೆ, ಮತ್ತೊಂದು ಕಡೆ ದೇಶ ದೇಶಗಳಿಂದ ಬರುತ್ತಿದ್ದ ಜಂಗಮರಿಗೆ ನಿತ್ಯ ದಾಸೋಹ, ಮತ್ತೊಂದೆಡೆ ಅನುಭವಮಂಟಪದ ಚರ್ಚೆಗಳು, ಧಾರ್ಮಿಕ ಜಿಜ್ಞಾಸೆಗಳು, ಹೀಗೆ ಅನೇಕ ಚಟುವಟಿಕೆಗಳು ಉತ್ಸಾಹದಿಂದ ಸಾಗುತ್ತಿದ್ದುವು. ಇವಿಷ್ಟೇ ಅಲ್ಲದೆ ಅಣ್ಣನಿಗೆ ಇಡೀ ರಾಷ್ಟ್ರವನ್ನೇ ಆಳುವ ಪ್ರಧಾನಮಂತ್ರಿಯ ಪದವಿ ಬೇರೆ. ಇವೆಲ್ಲವನ್ನೂ ನಡೆಸಿಕೊಂಡು ಹೋಗಲು ಬಸವಣ್ಣನು ಪಡುತ್ತಿದ್ದ ಸಾಹಸ ಪ್ರಭುವನ್ನು ಮೆಚ್ಚಿಸಿತು. ಸಾಲದುದಕ್ಕೆ ಬಸವಣ್ಣ ಭಕ್ತಿ ಭಂಡಾರಿ, ಪ್ರಸಾದಜೀವಿ, ಯೋಗ್ಯವರ್ತನೆಯುಳ್ಳವನು; ಅಂಗದಮೇಲೆ ಲಿಂಗವುಳ್ಳವರೆಲ್ಲರನ್ನೂ ಸಂಗಮನಾಥನೆಂದಾದರಿಸುವಷ್ಟು ವಿಶಾಲ ಭಾವನೆಯುಳ್ಳವನು. ಅವನ ಸಾತ್ವಿಕ ವರ್ತನೆಯನ್ನು ಅನೇಕ ಕಪಟಿ ಜಂಗಮರು ದುರುಪಯೋಗ ಪಡಿಸಲಾರಂಭಿಸಿದ್ದರು. ಇಂತಹ ಸನ್ನಿವೇಶದಲ್ಲಿ ಪ್ರಭು ಅವನಿಗೆ ನೆರವಾಗಿ ಜಂಗಮರನ್ನು ನಿರ್ದಾಕ್ಷಿಣ್ಯವಾಗಿ ತಿದ್ದಿದನು. ವೇಷಕ್ಕೆ ತಕ್ಕ ಆಚರಣೆ ಇಲ್ಲದಿದ್ದರೆ

ಗುಹೇಶ್ವರ ಮೆಚ್ಚುವನಲ್ಲವೆಂದು ಅವರಿಗೆ ಸ್ಪಷ್ಟವಾಗಿ ಹೇಳಿ ಎಚ್ಚರಿಸಿದನು. ಹೊಟ್ಟೆಯ ಮೇಲೆ ಮೊಸರನ್ನವನ್ನು ಕಟ್ಟಿಕೊಂಡರೆ ಹಸಿವು ಹಿಂಗಲಾರದು. 'ದೇಹದಮೇಲೆ ಲಿಂಗವಿದ್ದ ಮಾತ್ರವೇ ತೃಪ್ತಿಯಾಗದು. ಹೊನ್ನು ಹೆಣ್ಣು ಮಣ್ಣಿನಾಸೆಯನ್ನು ತೊರೆದು, ಕೋಪತಾಪಗಳನ್ನೂ ಭ್ರಾಂತಿ ಸಂಶಯಗಳನ್ನೂ ತೊರೆದಲ್ಲದೆ ಮಾನವನು ಜಂಗಮನಾಗಲಾರನು. ಷಡುಲೋಭದ ರುಚಿ ಹಿಂಗಿ ಜಂಗಮವಾದಲ್ಲದೆ ಭವಬಾಧೆ ತೊಲಗದು. ಲಿಂಗನಾಗಿ ಪಾದಾರ್ಚನೆ ಮಾಡಿಸಿಕೊಳ್ಳುವುದು ಜಂಗಮನ ಲಕ್ಷಣ. ಭೃತ್ಯನಾಗಿ ಪಾದಾರ್ಚನೆ ಮಾಡುವುದು ಭಕ್ತನ ಲಕ್ಷಣ. ತನುಮನಧನಗಳನ್ನು ಗುರು ಲಿಂಗಜಂಗಮರ ಸೇವೆಗೆ ಸಲ್ಲಿಸುವುದು ಭಕ್ತನ ಧರ್ಮ. ಅವುಗಳ ಆಸೆಯನ್ನು ಪೂರ್ಣವಾಗಿ ತೊರೆದು ನಿತ್ಯತೃಪ್ತನಾಗಿರುವುದು ಜಂಗಮನ ಧರ್ಮ. ಬೇಡುವವನು ಜಂಗಮನಲ್ಲ–ಬೇಡಿಸಿಕೊಳ್ಳುವವನು ಭಕ್ತನಲ್ಲ. ಹೀಗೆ ಪ್ರಭು ಭಕ್ತ ಜಂಗಮರ ವರ್ತನೆಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ತಿಳಿಸುತ್ತಾನೆ.

ಶೂನ್ಯಸ್ಥಿತಿಯನ್ನು ಸಂಪಾದಿಸುವುದು ಹೇಗೆ ಎಂದು ಚನ್ನಬಸವಣ್ಣನು ಒಮ್ಮೆ ಕೇಳುವನು. ಇದನ್ನು ಪ್ರಭು ವಿವರಿಸುತ್ತಾನೆ: "ಶೂನ್ಯವೆಂದರೆ ಏನೂ ಇಲ್ಲದುದು ಎಂಬ ನಿಷೇಧಾರ್ಥವಲ್ಲ. ಆದರೆ ಎಲ್ಲವನ್ನೂ ತನ್ನಲ್ಲಿ ಒಳಗೊಂಡುದು ಎಂಬುದು ಅದರ ಅರ್ಥ. ಲೀಲೆಗಾಗಿ ಹೊರಗೆ ವಿಶ್ವದಲ್ಲಿ ವ್ಯಾಪಿಸಿದ್ದ ಜ್ಞಾನಕ್ರಿಯಾದಿ ಶಕ್ತಿಪ್ರಕಾಶಗಳನ್ನು ತನ್ನೊಳಗೆ ಅಡಗಿಸಿಕೊಂಡು ಇರುವ ಸ್ಥಿತಿ. ಇದಕ್ಕೆ ನಿಷ್ಕಲಲಿಂಗ, ಕೇವಲಾವಸ್ಥೆ, ಸಹಜಸ್ಥಿತಿ, ಸ್ವಯಂಭು ಸ್ಥಿತಿ ಎಂದು ಅನುಭವಿಗಳು ಹೇಳುತ್ತಾರೆ. ಪೂಜ್ಯ ಪೂಜಕಲೀಲೆಗೂ ಹಿಂದಿನದಾದ–ಸಕಲ ನಿಷ್ಕಲಗಳೆಂಬ ಉಭಯ ವಳಿದು ನಿತ್ಯವೂ ಬೆಳಗುತ್ತಿರುವ ಪರಂಜ್ಯೋತಿ ಶೂನ್ಯವೆನಿಸು

ವುದು. ಇದರಿಂದಲೇ ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರ ತಿರೋಧಾನ ಅನುಗ್ರಹಗಳೆಂಬ ಜಗದ್ವ್ಯಾಪಾರಲೀಲೆ ಅನಾಯಾಸವಾಗಿ ನಡೆಯುತ್ತಿರುವುದು. ಪ್ರಳಯದಲ್ಲಿ ವಿಶ್ವಕ್ಕೂ ಆಶ್ರಯವಾಗಿರುವುದರಿಂದ, ಈ ನಿಷ್ಕಲಲಿಂಗವು ಸ್ಥಲವೆನಿಸಿರುವುದು. ಅದೇ ಸ್ಥಲವೇ ಮುಕ್ತರಿಗೆ ಸಮರಸಭಾವದಿಂದ ಆಶ್ರಯವಾಗಿರುವುದು. ಆದರೆ ಪ್ರಳಯದಲ್ಲಿ ವಿಶ್ವವೆಲ್ಲವೂ ಆ ಸ್ಥಲದಲ್ಲಿ ಬೇಧಸಂಬಂಧದಿಂದಿದ್ದರೆ, ಮುಕ್ತಿದಶೆಯಲ್ಲಿ ಮುಕ್ತರು ಆ ಸ್ಥಲದಲ್ಲಿ ಅಭಿನ್ನರಾಗಿ ಬಯಲಾಗುವರು. ಹೀಗೆ ನಿಷ್ಕಲ ಸ್ಥಿತಿಯಲ್ಲಿ ಬಯಲಾಗುವುದೇ ವಿಶ್ವದ ಮುಕ್ತಿ. ಆದರೆ ನಿರ್ಮಲರಿಗೆ ಮಾತ್ರ ದೊರಕುವ ಪರಿಪೂರ್ಣಸ್ಥಿತಿ ಇದು. ಸಾಕಾರ ನಿರಾಕಾರಗಳೆರಡನ್ನೂ ಒಳಗೊಂಡ ಈ ಸ್ಥಿತಿಗೆ ಶೂನ್ಯಪೀಠವೆಂದು ಹೆಸರು. ಈ ಪೀಠದಲ್ಲಿ ಕುಳಿತಿರುವವರು ಶೂನ್ಯವೇ ಮೂರ್ತಿಗೊಂಡಂತೆ ನಿರ್ಲಿಪ್ತರಾಗಿರುವರು. ಪೂರ್ಣವಿರಕ್ತರಾಗಿ ಎಲ್ಲಾ ಆಸೆ ಅಭಿಮಾನಗಳನ್ನೂ ತೊರೆದು ಐಕ್ಯಾನಂದವನ್ನು ಅನುಭವಿಸಿದವರು ಮಾತ್ರವೇ ಈ ಶೂನ್ಯಸಿಂಹಾಸನದ ಅಧಿಕಾರಿಗಳಾಗಲರ್ಹರು. ಇಂತಹ ನಿರ್ಲಿಪ್ತತೆಯನ್ನು ಲೋಕದಲ್ಲಿ ವ್ಯವಹರಿಸುತ್ತಲೇ ಪಡೆಯುವುದಕ್ಕೆ ಶೂನ್ಯಸಂಪಾದನೆ ಎನಿಸುವುದು" ಎಂದು ಪ್ರಭು ಅರ್ಥವಿವರಣೆ ಮಾಡುತ್ತಾನೆ. ಕುಲಜಾತಿಗಳೆನ್ನದೆ, ಸ್ತ್ರೀಪುರುಷರೆನ್ನದೆ ಎಲ್ಲರಿಗೂ ಶೂನ್ಯಸಂಪಾದನೆಗೆ ಪೂರ್ಣ ಅವಕಾಶವಿದೆ. ಇದಕ್ಕೆ ವರ್ಣಾಶ್ರಮ ಧರ್ಮಗಳೂ ಬಂಧಕವಾಗಲಾರವು. ಜೀವನದ ವಿವಿಧ ರಂಗಗಳಲ್ಲಿ ವಿವಿಧ ಕಾರ್ಯಗಳಲ್ಲಿ ತೊಡಗಿದ್ದವರೆಲ್ಲ ಶೂನ್ಯ ಸಂಪಾದನೆಗೆ ಅಧಿಕಾರಿಗಳು. ಆದರೆ ಅದಕ್ಕೆ ತಕ್ಕ ಯೋಗ್ಯತೆಯನ್ನು ಪಡೆದು ಎಲ್ಲರೂ ಪ್ರವೇಶಿಸಬಹುದು. ಹೃದಯ ನೈರ್ಮಲ್ಯ, ನಡೆನುಡಿಶುದ್ಧಿ, ಗುರುಕರುಣೆ, ಆತ್ಮ

ವಿಶ್ವಾಸ, ನಿರಹಂಕಾರತೆ, ನಿರಭಿಮಾನತೆ, ಸತ್ಯ ಶುದ್ಧಕಾಯಕ, ಒಳಗೆ ಹೊರಗೆ ಲಿಂಗದ ನಿತ್ಯಸಂಪರ್ಕ ಇವು ಶೂನ್ಯಸಂಪಾದನೆಗೆ ಬೇಕಾದ ಸಾಧನಗಳೆನಿಸಿವೆ.

ಇದನ್ನು ಕೇಳಿದ ಮೇಲೆ ಸಿದ್ಧರಾಮನಿಗೆ ಒಂದು ಸಂದೇಹ ಉಂಟಾಯಿತು. "ಶೂನ್ಯಸಂಪಾದನೆಗೆ ಭಕ್ತನು ಅಂಗದ ಮೇಲೆ ಲಿಂಗದ ನಿತ್ಯಸಂಪರ್ಕ ಹೊಂದಿರಬೇಕೆ? ಒಳಗೆ ಚಿತ್ಕಲೆಯನ್ನು ಕಂಡ ಭೃತ್ಯನಿಗೆ ಲಿಂಗವನ್ನು ಹೊರಗೆ ಧರಿಸಬೇಕೆಂಬ ಹಂಗೇಕೆ?" ಎಂದು ತನ್ನ ಸಂದೇಹವನ್ನು ತಿಳಿಸುವನು. ಸಿದ್ಧರಾಮನ ಈ ಮಾತಿನಿಂದ ಅನುಭವಮಂಟಪದ ಚರ್ಚೆಗೆ ಹೊಸ ಕಳೆಯುಂಟಾಯಿತು. ಚನ್ನಬಸವಣ್ಣನು ಅನೇಕ ದೃಷ್ಟಾಂತಗಳಿಂದ ಇಷ್ಟಲಿಂಗದ ಆವಶ್ಯಕತೆಯನ್ನು ವಿವರವಾಗಿ ಆತನಿಗೆ ತಿಳಿಸಿದನು. ಆ ಸಮಯದಲ್ಲಿ ಅಲ್ಲಿ ಸೇರಿದ್ದ ಶರಣರೆಲ್ಲರೂ ಚನ್ನಬಸವಣ್ಣನ ವಾದವನ್ನೇ ಪುಷ್ಟೀಕರಿಸುತ್ತಾರೆ. ಶರಣರ ಮಾತು ಸಿದ್ಧರಾಮನಿಗೆ ಒಪ್ಪಿಗೆಯಾಗುತ್ತದೆ. ಆಗ ತಾನೂ ಇಷ್ಟಲಿಂಗಧಾರಣೆಯ ದೀಕ್ಷೆಗೆ ಒಳಗಾಗುತ್ತಾನೆ. ಅನುಭವಮಂಟಪದ ಚರ್ಚೆಯ ಫಲವಾಗಿ ಕರ್ಮಯೋಗಿ ಸಿದ್ಧರಾಮಯ್ಯ ಶಿವಯೋಗಿಯಾಗುತ್ತಾನೆ, ಶರಣನಾಗುತ್ತಾನೆ, ಶರಣರ ಕಣ್ಮಣಿಯಾಗುತ್ತಾನೆ.

ಆಯ್ದಕ್ಕಿ ಮಾರಯ್ಯನು ಕಾಯಕವನ್ನೇ ಕೈಲಾಸವೆಂದು ನಂಬಿದ್ದವನು. "ಕಾಯಕವೇ ಗುರು, ಕಾಯಕವೇ ಸರ್ವಸ್ವವಾದುದರಿಂದ ಬೇರೆ ಗುರುಲಿಂಗಜಂಗಮಗಳ ಹಂಗೇಕೆ?" ಎಂದು ತನ್ನ ಸಂಶಯವನ್ನು ಪ್ರಭುವಿನ ಮುಂದೆ ಅವನು ಇಡುವನು. ಅವನು ಜೀವನದ ನಿರ್ವಹಣೆಗಾಗಿ ಅಕ್ಕಿಯನ್ನು ಆಯ್ದು ತರುತ್ತಿದ್ದನು. ಅದರಂತೆ ಚಂದಯ್ಯ ಹಗ್ಗವನ್ನು ಹೊಸೆಯುತ್ತಿದ್ದನು. ಆದರೆ ತಮ್ಮ ತಮ್ಮ ವೃತ್ತಿಗಳಿಂದ ಬಂದ ಹಣವನ್ನು ತಮ್ಮ ಉದರ

ಪೋಷಣೆಗೆ ಮಾತ್ರ ವಿನಿಯೋಗಿಸುವುದರಿಂದ, ಆ ವೃತ್ತಿ ಕಾಯಕ ವಾಗಲಾರದು. ಕೇವಲ ಸ್ವಾರ್ಥಕ್ಕಾಗಿ ದುಡಿಯುವುದು ಕಾಯಕ ವಲ್ಲ, ಆದರೆ ಅದು ಹೊಟ್ಟೆಪಾಡಿಗಾಗಿ ಕೈಕೊಂಡ ವೃತ್ತಿ ಎನಿಸುವುದು. ನಮ್ಮ ದುಡಿಮೆ ಲೋಕಹಿತಕ್ಕಾಗಿ ವಿನಿಯೋಗ ವಾದಾಗ ಮಾತ್ರ ಅದು ಕಾಯಕವೆನಿಸುವುದು. ಅಕ್ಕಿಯನ್ನು ಆಯ್ದು ತಂದು ಅದರಿಂದ ಗುರುಲಿಂಗಜಂಗಮ ಸೇವೆ ಮಾಡಿ ದರೆಯೇ ಅದು ಕಾಯಕವೆನಿಸಬಲ್ಲದು. ಗುರುಲಿಂಗಜಂಗಮರ ಸೇವೆಯಲ್ಲಿಯೇ ಕಾಯಕ ಸಾರ್ಥಕವಾಗುವುದು. ಅದರಲ್ಲೂ ಕೊನೆಗೆ ಗುರು ಬೇರೆ, ಲಿಂಗ ಬೇರೆ, ಜಂಗಮ ಬೇರೆ, ತಾನು ಬೇರೆ ಎಂಬ ಭ್ರಾಂತಿಯನ್ನು ಬಿಟ್ಟು ಎರಡಳಿದು ಏಕೋಭಾವದಿಂದಿರ ಬೇಕು ಎಂದು ಪ್ರಭು ಅವನಿಗೆ ಎಚ್ಚರಿಸುವನು. ಹೀಗೆ ಹೇಳಿದ್ದ ರಿಂದ ಪ್ರಭು ಎಲ್ಲರಿಗೂ ಅವರವರ ಕಾಯಕದ ಬಗ್ಗೆ ಎಚ್ಚರಿಸಿ ದಂತಾಯಿತು.

ಭೇದಭಾವನೆಯಳಿದು ಏಕಭಾವನೆಯಿಂದ ಕಾಯಕವ ಮಾಡುತ್ತ, ತಾ ಮಾಡುವೆನೆಂಬ ಭ್ರಮೆಯನ್ನೂ ತೊರೆದು, ನಿಜಪದವನ್ನೈದಬೇಕೆಂದು ಪ್ರಭು ಹೇಳಿದ್ದನ್ನು ಮಾರಯ್ಯನು ಯೋಚಿಸುತ್ತಿದ್ದನು. ಅಷ್ಟರೊಳಗೆ ಕಾಯಕಕ್ಕೆ ವೇಳೆಯಾಯಿ ತೆಂದು ಅವನ ಹೆಂಡತಿ ಲಕ್ಕಮ್ಮ ಬಂದು ಅವನನ್ನು ಎಚ್ಚರ ಗೊಳಿಸುವಳು. ಅಂತರಂಗದಲ್ಲಿ ಅರಿವು–ಬಾಹ್ಯದಲ್ಲಿ ಕ್ರಿಯೆ ಇವು ವ್ಯವಸ್ಥೆಯಿಂದ ಆಯಾ ಕಾಲದಲ್ಲಿ ನಡೆಯುತ್ತಿರಬೇಕು. ಆದ್ದ ರಿಂದ ಗುರುಲಿಂಗಜಂಗಮರ ಸೇವೆಯ ನಿಯಮಕ್ಕೆ ವೇಳೆಯಾಗ ದಂತೆ ಕಾಯಕಕ್ಕೆ ಬೇಗನೆ ಹೊರಡಬೇಕು ಎಂದು ಲಕ್ಕಮ್ಮ ಗಂಡನಿಗೆ ಪ್ರೇರಿಸುವಳು. ಈ ಮಾತನ್ನು ಪ್ರಭುವೂ ಮೆಚ್ಚುವನು. "ಇದು ಸತ್ಯವಾದ ಮಾತು. ಅದ್ವೈತವನ್ನು ಬಾಹ್ಯದಲ್ಲಿ

ಬಳಸಬಾರದು. ತನ್ನೊಳಗೆ ಏಕೋಭಾವದಿಂದಿದ್ದು ಹೊರಗೆ ಕ್ರಿಯಾಚರಣೆಯನ್ನು ಆಯಾ ಕಾಲದಲ್ಲಿ ಕ್ಲುಪ್ತವಾಗಿ ನಡೆಸುತ್ತಿರ ಬೇಕು" ಎಂದು ಹೇಳುವ ಪ್ರಭುವಿನ ಈ ಮಾತನ್ನು ಕೇಳಿ ಮಾರಯ್ಯನು ಹೊರಗೆ ಹೋಗಿ ತನ್ನ ಕಾಯಕವನ್ನು ಮುಗಿಸಿ ಕೊಂಡು ಆ ದಿನ ಬೇಗನೆ ಹಿಂತಿರುಗುವನು. ಆದರೆ ಎಂದಿಗಿಂತ ಆ ದಿನ ಹೆಚ್ಚು ಅಕ್ಕಿಯನ್ನು ತಂದನು. ಈ ದಿನ ಅಷ್ಟೊಂದು ಅಕ್ಕಿ ಸಿಕ್ಕಿದ್ದರಿಂದ ಇನ್ನು ನಾಲ್ಕು ದಿನ ಕಾಯಕಕ್ಕೆ ಹೋಗ ಬೇಕಾಗಿಲ್ಲವೆಂದು ಅವನು ಹೇಳಿದನು. ಇದರಿಂದ ಲಕ್ಕಮ್ಮನಿಗೆ ಸಮಾಧಾನವಾಗಲಿಲ್ಲ. "ಇಷ್ಟೊಂದು ಅಕ್ಕಿಯ ಆಸೆ ನಮಗೇಕೆ? ಅಂದಂದಿನ ಕಾಯಕವನ್ನು ಅಂದಂದಿಗೆ ಮಾಡಿ ಶುದ್ಧರಾಗಬೇಕು. ಆಸೆ ಎಂಬುದು ಅರಸನಿಗಲ್ಲದೆ ಶಿವಭಕ್ತರಿಗೆ ಸಲ್ಲದು. ಬೇಗ ಹೋಗಿ, ಹೆಚ್ಚಾದ ಅಕ್ಕಿಯನ್ನು ಅಲ್ಲಿಯೇ ಸುರಿದು ಬನ್ನಿ" ಎಂದು ಆಕೆ ಪತಿಗೆ ತಿಳಿಸುವಳು. ಪ್ರಭು ಲಕ್ಕಮ್ಮನ ನಿಷ್ಠೆಗೆ ಮೆಚ್ಚುವನು. ಮಾರಯ್ಯ ಹೆಚ್ಚು ಅಕ್ಕಿಯನ್ನು ಹೊರಗೆ ಸುರಿಯಲು ಹೋಗುವನು. ಲಕ್ಕಮ್ಮ ಪ್ರಭುವಿನ ಸಮೇತವಾಗಿ ಎಲ್ಲರನ್ನೂ ತನ್ನ ಮನೆಗೆ ದಾಸೋಹಕ್ಕೆ ಆಹ್ವಾನಿಸುವಳು. ಅಷ್ಟೆಲ್ಲಾ ಶ್ರಮ ಹಚ್ಚಿಕೊಳ್ಳಬಾರದೆಂದು ಪ್ರಭು ತಿಳಿಸಿದಾಗ, ಆಕೆ ತನ್ನ ದಾಸೋಹದ ವೈಭವವನ್ನು ಹೀಗೆ ತಿಳಿಸುತ್ತಾಳೆ: "ಮನಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ಧ ವಾಗಿ ಕಾಯಕವ ಮಾಡುವಲ್ಲಿ ಎತ್ತ ನೋಡಿದೊಡತ್ತ ಲಕ್ಷ್ಮಿ ತಾನಾಗಿಪ್ಪಳು, ಮಾರಯ್ಯ ಪ್ರಿಯ ಅಮಳೇಶ್ವರ ಲಿಂಗದ ಸೇವೆ ಯುಳ್ಳನ್ನಕ್ಕರ." ಆಕೆಯ ಈ ಮಾತನ್ನು ಕೇಳಿ ಪ್ರಭುವಿಗೆ ತುಂಬ ಸಂತೋಷವಾಯಿತು. ಶರಣರು ಮನೆಯಲ್ಲಿ ಬಡವ ರಾದರೂ ಮನದಲ್ಲಿ ಸಂಪನ್ನರು ಎಂಬುದಕ್ಕೆ ಲಕ್ಕಮ್ಮನ ಜೀವನವೇ ಸಾಕ್ಷಿ. ಅವಳ ಕೋರಿಕೆಯಂತೆ ಪ್ರಭು ಶರಣರೆಲ್ಲ ರೊಡನೆ ಅವಳ ಮನೆಯಲ್ಲಿ ಆದರದ ಆತಿಥ್ಯವನ್ನು ಸ್ವೀಕರಿಸಿದನು.

ಅಕ್ಕಮಹಾದೇವಿಗೆ ಅನುಭವಮಂಟಪದಲ್ಲಿ ಪ್ರಭುವಿನ ಸಂದರ್ಶನ

ಉಡುತಡಿಯ ಮಹಾದೇವಿಯು ಕಲ್ಯಾಣದಲ್ಲಿ ಬಸವಾದಿ ಪ್ರಮಥರ ಶಿವಯೋಗವನ್ನು ಕೇಳಿ ಆನಂದಪಟ್ಟು ಅನುಭವ ಮಂಟಪದಲ್ಲಿ ಅವರ ಸಂದರ್ಶನಕ್ಕಾಗಿ ಬರುವಳು. ಮಹಾದೇವಿ ಮೆಲ್ಲಮೆಲ್ಲನೆ ಶೂನ್ಯ ಸಿಂಹಾಸನದ ಬಳಿಗೆ ಬಂದು ಪ್ರಭುವಿಗೆ ನಮಸ್ಕರಿಸಿದಳು. ಅವಳ ಮುಖದಲ್ಲಿ ಸಾತ್ತ್ವಿಕ ತೇಜಸ್ಸಿದ್ದರೂ ಅವಳ ಅಸದೃಶ ಸೌಂದರ್ಯ ಎಲ್ಲರನ್ನೂ ಬೆರಗುಮಾಡು ವಂತಿತ್ತು. ಇಂತಹ ಸ್ಥಿತಿಯಲ್ಲಿ ಮುಂದೇನಾಗುವುದೆಂಬುದನ್ನು ಕಾಣಲು ಶರಣರು ಕಾತುರರಾಗಿದ್ದರು. ಅಲ್ಲಮನು ಕೇಳಿದನು: "ಯೌವನವನೊಳಗೊಂಡು ನೀನು ಇತ್ತಲೇಕೆ ಬಂದೆಯವ್ವಾ, ಸತಿ ಎಂದರೆ ಮುನಿವರು ನಿಮ್ಮ ಶರಣರು. ಸತಿಗೆ ಪತಿಯೇ ಪರದೈವ. ನಿನ್ನ ಪತಿಯ ಕುರುಹನ್ನು ಹೇಳಿದರೆ ಇತ್ತ ಬಂದು ಕುಳ್ಳಿರು. ಇಲ್ಲವಾದರೆ ಅತ್ತ ತೊಲಗು ತಾಯೆ." ಈ ಮಾತನ್ನು ಕೇಳಿದೊಡನೆ ಮಹಾದೇವಿ ತನಗೆ ಉಗ್ರಪರೀಕ್ಷೆ ಕಾದಿರುವು ದೆಂದರಿತು ತನ್ನ ನಿಲುವನ್ನು ತಿಳಿಸಿದಳು. "ಯೌವನ ದೇಹ ಧರ್ಮ. ಆದರೆ ನಾನು ಯೌವನದ ಭ್ರಾಂತಿಯಲ್ಲಿ ಸಿಲುಕಿಲ್ಲ. ಅದನ್ನು ಮೀರಿದ್ದೇನೆ. ಲೋಕದ ಪತಿಗೆ ಅಂಟದೆ ಹರನೇ ಗಂಡ ನಾಗಬೇಕೆಂದು ಅನಂತ ಕಾಲ ತಪಿಸುತ್ತಿರುವೆ" ಎಂದು ಹೇಳಿ ದಳು. ಅದಕ್ಕೆ ಪ್ರಭು ಹೇಳುತ್ತಾನೆ: "ಈ ಮಾತು ಹೇಳಲು ಸುಲಭ, ಆದರೆ ಆಚರಣೆಗೆ ಸಿಲುಕದು. ನೀನು ಕೌಶಿಕನ ಹೆಂಡತಿ ಯಾಗಿದ್ದು, ಹರನೇ ಪತಿ ಎಂದು ಹೇಳಿದರೆ ಶರಣರು ಮೆಚ್ಚು ವರೆ?" ಇದನ್ನು ಕೇಳಿದಮೇಲೆ ಮಹಾದೇವಿಯು ಅಪರಾಧಿ

ಸ್ಥಾನದಲ್ಲಿ ನಿಂತು ತನ್ನ ನಿಲುವನ್ನು ಸ್ಪಷ್ಟಪಡಿಸಬೇಕಾಯಿತು. "ಕೌಶಿಕನನ್ನು ನಾನೆಂದೂ ಕನಸುಮನಸಿನಲ್ಲೂ ಪ್ರೀತಿಸಿಲ್ಲ. ಸಾವಿಲ್ಲದ ಕೇಡಿಲ್ಲದ ಚೆಲುವ ಮಲ್ಲಿಕಾರ್ಜುನನಿಗೇ ನಾನು ಈ ಸೌಂದರ್ಯವನ್ನು ಮೀಸಲಾಗಿಟ್ಟಿರುವೆನು. ತಾಯ್ತಂದೆಗಳನ್ನು ತೊಂದರೆಯಿಂದ ಬಿಡಿಸಲಿಕ್ಕಾಗಿ ಕೌಶಿಕನನ್ನು ಮದುವೆಯಾಗಲು ನಾನು ಒಪ್ಪಿದೆನು. ಅವನ ಕಾಮುಕ ದೃಷ್ಟಿಯನ್ನು ಬಿಡಿಸಲಿಕ್ಕಾಗಿ ಅವನನ್ನು ಭಕ್ತನಾಗುವಂತೆ ಕೇಳಿದೆನು. ಅವನು ಅದಕ್ಕೆ ಒಪ್ಪದೇ ಇದ್ದುದರಿಂದ ನನ್ನ ಮೈಮನಗಳನ್ನು ಅವನಿಗೊಪ್ಪಿಸದೆ, ಚನ್ನ ಮಲ್ಲಿಕಾರ್ಜುನನಿಗೆ ಒಪ್ಪಿಸಲು ಹೊರಟಿರುವೆನು. ಈ ದೇಹ ವನ್ನು ಕೌಶಿಕ ಮುಟ್ಟಿಲ್ಲ. ಆದ್ದರಿಂದ ನಿರ್ಮಲವಾದೀ ದೇಹ ಹರನಿಗೇ ಮೀಸಲಾಗಿದೆ" ಎಂದು ಮಹಾದೇವಿ ತನ್ನ ನಿಲುವನ್ನು ಸ್ಪಷ್ಟವಾಗಿ ತಿಳಿಸಿದಳು.

"ನಿನ್ನ ದೇಹದಮೇಲಿನ ಮೋಹವೇ ನಿನಗಿನ್ನೂ ಬಿಟ್ಟಿಲ್ಲ. ದೇಹಸೌಂದರ್ಯದ ಹಮ್ಮು ನಿನ್ನನ್ನು ಇನ್ನೂ ಆವರಿಸಿದೆ" ಎಂದು ಪ್ರಭು ಕೇಳುತ್ತಾನೆ. "ಈ ಸೌಂದರ್ಯದ ಹಮ್ಮು ಎಳ್ಳಷ್ಟೂ ನನಗಿಲ್ಲ. ಅಂತರಂಗ ಶುದ್ಧವಾದ ಬಳಿಕ ದೇಹ ಕರ್‍ರನೆ ಕಂದಿದರೇನು, ಮಿರ್‍ರನೆ ಮಿಂಚಿದರೇನು" ಎಂದು ಅಕ್ಕನು ಹೇಳುತ್ತಾಳೆ. "ಇದು ಬರಿಯ ಮಾತು. ಗುಹೇಶ್ವರನ ಶರಣರು ಮಾತಿನಂತೆ ನುಡಿ ಇಲ್ಲದವರನ್ನು ಒಪ್ಪುವರಲ್ಲ. ದೇಹದ ಮೋಹ ನಿನಗೆ ಅಳಿದು ಭಾವಶುದ್ಧವಾಗಿದ್ದರೆ ಉಟ್ಟ ಸೀರೆಯನ್ನು ಕಳೆದೊಗೆದ ನೀನು ಕೂದಲನ್ನು ಏಕೆ ಮರೆಮಾಡಿಕೊಂಡಿರುವೆ? ಒಳಗಿನ ನಾಚಿಕೆ ಹೊರಗೆ ತೋರುತ್ತಿದೆ. ನಿನಗೇಕೆ ಈ ಚಿಂದೀ ಬಟ್ಟೆಯ ಹಂಗು? ಈ ಕೂದಲ ತೆರೆಯಮರೆ ಏಕೆ?" ಎಂದು ಅಲ್ಲಮನು ಕೇಳುವನು. "ಈ ದೇಹಕ್ಕೆ ನಾನು ಮಾಡಿ

ಕೊಂಡಿರುವ ಮರೆ ನನಗಾಗಿ ಅಲ್ಲ; ಆದರೆ ಕಾಮನ ಮುದ್ರೆಯು ಕಂಡು ನಿಮಗೆ ನೋವಾದೀತೆಂಬ ಭಾವದಿಂದ. ಇದಕ್ಕೆ ನಿಮಗೆ ನೋವೇಕೆ? ಫಲ ಪಕ್ವವಾದಲ್ಲದೆ ಹೊರಗಿನ ಸಿಪ್ಪೆ ಒಪ್ಪಗೆಡದು" ಎಂದು ಅಕ್ಕನು ಹೇಳುವಳು. "ಇದು ಬಹಳ ಬುದ್ಧಿವಂತಿಕೆಯು ಮಾತು. ಸಿಪ್ಪೆ ಒಪ್ಪಗೆಟ್ಟಾಗ ಹಣ್ಣಿನ ರಸ ಕೊಳಕಾಗುವುದು. ಇದನ್ನು ಗುಹೇಶ್ವರನು ಒಪ್ಪನು" ಎಂದು ಪ್ರಭು ಹೇಳಿದನು. "ದೇಹದಲ್ಲಿ ಕಾಮಕ್ಕೆ ಅವಕಾಶವನ್ನು ಕಲ್ಪಿಸಿದರೆ ಹಣ್ಣಿನ ರಸ ಕೊಳಕಾಗುತ್ತದೆ ನಿಜ. ಆದರೆ ನನ್ನ ದೇಹದಲ್ಲಿ ಅದಕ್ಕೆ ಸ್ಥಾನವಿಲ್ಲ. ಚನ್ನಮಲ್ಲಿಕಾರ್ಜುನನೇ ಈ ದೇಹವನ್ನೆಲ್ಲಾ ವ್ಯಾಪಿಸಿ ಆಳುತ್ತಿದ್ದಾನೆ. ಅವನೇ ಈ ದೇಹದಲ್ಲಿ ರಸವಾಗಿದ್ದಾನೆ. ಅವನು ಎಂದಿಗೂ ಕೊಳೆಯನು ಮತ್ತು ಅಳಿಯನು. ನಾನು ಅವನನ್ನು ಒಳಹೊಕ್ಕು ಬೆರೆಸಿದ್ದೇನೆ." ಅಕ್ಕನ ಈ ಮಾತನ್ನು ಕೇಳಿ ಎಲ್ಲ ಶರಣರಿಗೂ ಸಂತೋಷವಾದರೂ ಪ್ರಭುವಿಗೆ ತೃಪ್ತಿಯಾಗಲಿಲ್ಲ. "ಚನ್ನಮಲ್ಲಿಕಾರ್ಜುನನನ್ನು ನೀನು ಹೊಕ್ಕು ಬೆರೆತಿರುವುದು ನಿಜವಾದರೆ ನೀನೇ ಅದನ್ನು ಹೇಗೆ ಹೇಳಲು ಸಾಧ್ಯ. ನಾ ಸತ್ತೆನೆಂದು ಹೆಣ ಕೂಗಿದುದುಂಟೆ? ಹೆಪ್ಪಿಟ್ಟ ಹಾಲು ಸಿಹಿಯಪ್ಪುದೆ?" ಇದಕ್ಕೆ ಅಕ್ಕನು "ಸತ್ತ ಹೆಣ ಕೂಗಿದುದುಂಟು, ಹೆಪ್ಪಿಟ್ಟ ಹಾಲು ಸಿಹಿಯಾಗುವುದೂ ಉಂಟು" ಎಂದು ಸಹಜವಾಗಿಯೇ ಉತ್ತರ ಕೊಡುವಳು. "ಅದು ಹೇಗೆ, ಹೇಳು" ಎಂದು ಪ್ರಭು ಕೇಳುವನು. "ದೀರ್ಘನಿದ್ರೆಯಲ್ಲಿ ಕನಸನ್ನು ಕಂಡವನು ಎಚ್ಚರಗೊಂಡಮೇಲೆ ಆ ಕನಸನ್ನು ಹೇಳುವಾಗ ಸತ್ತ ಹೆಣ ಎದ್ದು ಕೂಗಿದಂತಾಯಿತು. ಹೆಪ್ಪಿಟ್ಟ ಹಾಲು ಹುಳಿಯಾದರೂ ಅದರ ಮಥನದಿಂದ ಬೆಣ್ಣೆಯಾಗಿ, ತುಪ್ಪವಾದನಂತರ ಮತ್ತೆ ಸಿಹಿಯೇ ಆಗುವುದು. ನಾನು ಚನ್ನಮಲ್ಲಿಕಾರ್ಜುನನಲ್ಲಿ ವಾಸ್ತವವಾಗಿ

ಬೆರೆತಿದ್ದರೂ ತಾತ್ಕಾಲಿಕವಾಗಿ ಬೇರೆಯಾಗಿ ನಿಂತು ನುಡಿಯು ತ್ತಿರುವೆನು. ದೇಹದೊಳಗಿದ್ದರೂ ದೇಹಧರ್ಮವನ್ನು ಮೀರಿ ನಿರ್ಲಿಪ್ತತೆಯಿಂದ ಇರಬಹುದು. ಹಾವಿನ ಬಾಯ ಹಲ್ಲನ್ನು ಕಳೆದು ಹಾವನಾಡಿಸಬಲ್ಲವರಿಗೆ ಹಾವಿನಿಂದ ಏನೂ ಕೆಡುಕಾಗ ಲಾರದು. ಈ ದೇಹದಲ್ಲಿರುವ ದೇವನೊಡನೆ ಬೆರೆತವರು ನಿರ್ಲಿಪ್ತತೆಯಿಂದ ವ್ಯವಹರಿಸುವುದರಲ್ಲಿ ದೋಷವೇನು ಪ್ರಭುವೆ? ಎಂದು ತನ್ನ ನೆಲೆಯನ್ನು ತಿಳಿಸಿದಳು.

ಇಲ್ಲಿಗೆ ಪ್ರಭು ಸಂತೋಷಗೊಂಡು ಆಕೆಯಲ್ಲಿ ಭಕ್ತಿಜ್ಞಾನ ವೈರಾಗ್ಯಗಳ ಸಂಗಮವನ್ನು ಕಾಣುವನು. "ಅನುವರಿದು ಘನವ ಬೆರೆಸಿ, ಹಿರಿದು ಕಿರಿದೆಂಬ ಬೇಧವ ಮರೆದು, ಲಿಂಗದಲ್ಲಿ ಬೆರೆಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯ್ತು" ಎಂದು ಗಂಭೀರವಾಣಿಯಿಂದ ಚನ್ನಬಸವಣ್ಣನು ಅಕ್ಕನ ಮಹತ್ತ್ವ ವನ್ನು ಸಾರಿದನು. "ಕಿರಿಯರಾದರೇನು, ಹಿರಿಯರಾದರೇನು, ಅರಿವಿಂಗೆ ಹಿರಿದು ಕಿರಿದುಂಟೇ? ವಯಸ್ಸಿನಲ್ಲಿ ಕಿರಿಯಳಾದರೂ ನಮ್ಮೆಲ್ಲರಿಗೂ ಹಿರಿಯಳಾಗಿ ಮಹಾದೇವಿ ಅಕ್ಕನೆನಿಸಿದ್ದಾಳೆ" ಎಂದು ಪ್ರಭು ಸಂತೋಷದಿಂದ ಅಕ್ಕನನ್ನು ಹೊಗಳುತ್ತಾನೆ. ಶರಣರ ಈ ಹೊಗಳಿಕೆಯನ್ನು ಕೇಳಿ ಅಕ್ಕನು ಸಂಕೋಚದಿಂದ ಕುಗ್ಗಿದಳು. ಆದರೆ ಅವಳ ಅಂತರಂಗದ ತೀವ್ರ ಆಕಾಂಕ್ಷೆ ಯನ್ನರಿತು ಪ್ರಭು ಅವಳಿಗೆ ಕದಳಿಯ ವನವನ್ನು ಪ್ರವೇಶಿಸಿ ಚನ್ನಮಲ್ಲಿಕಾರ್ಜುನನಲ್ಲಿ ಬೆರೆದು ಬಯಲಾಗುವಂತೆ ನಿರೂಪಿಸಿ, ಅವಳನ್ನು ಶ್ರೀಶೈಲಕ್ಕೆ ಕಳುಹಿಸುವನು. ಅಲ್ಲಿಂದ ಮುಂದೆ ಪ್ರಭು ಸಿದ್ಧರಾಮನನ್ನು ಆಶೀರ್ವದಿಸಿ ಸೊನ್ನಲಿಗೆಗೆ ಕಳುಹಿಸಿದನು. ಲೋಕಹಿತಾರ್ಥವಾಗಿ ಲೀಲೆಗಳನ್ನಾಚರಿಸುತ್ತ ಗುರುವಿನ ಕರೆ ಹೃದಯದಲ್ಲಿ ಅಂಕುರಿಸಿದಾಗ ನಿಜಸಮಾಧಿಯಲ್ಲಿ ಲೀನನಾಗು

ವಂತೆ ಅವನಿಗೆ ಹೇಳಿಕಳಿಸಿದನು. ಅದರಂತೆಯೇ ಬಸವಣ್ಣನಿಗೂ ಧಾರ್ಮಿಕ ಸುಧಾರಣೆಯನ್ನು ಯಥಾಶಕ್ತಿ ನಡೆಸುತ್ತ ಹೃದಯದ ಕರೆ ಬಂದಾಗ, ತನ್ನ ಭಕ್ತಿಯ ಕೊನೆಯ ಹಂತದಲ್ಲಿ ಲೀನವಾಗುವಂತೆಯೂ, ಅವನ ಸಾಧನೆ ಮಾನವಲೋಕಕ್ಕೆ ಆದರ್ಶವಾಗಿ ಉಳಿಯುವಂತೆಯೂ ಆಶೀರ್ವದಿಸಿ ಪ್ರಭು ಮುಂದೆ ಹೊರಡುವನು.

ಪ್ರಭು ಬಯಲಾಗುವಿಕೆ

ಅಲ್ಲಮಪ್ರಭು ಈ ಲೋಕದಲ್ಲಿ ಅವತರಿಸಿ ಪೂರ್ಣತೆಯನ್ನು ಸಾಧಿಸಿ—ಆ ಕಾಲದ ಸಾಧಕರಿಗೆ ಬೆಳಕನ್ನು ತೋರಿಸಿ—ಹುಟ್ಟಿ ಬಂದುದಕ್ಕೆ ತಾನು ಮಾಡಬಹುದಾದ ಅತ್ಯುನ್ನತ ಕಾರ್ಯವೆಲ್ಲವನ್ನೂ ಮುಗಿಸಿ, ದೇಹಬಂಧನವನ್ನು ದಾಟಿ ಶಾಶ್ವತವಾದ ಬೆಳಕಿನಲ್ಲಿ ಬಯಲಾಗಲು ಶ್ರೀಶೈಲದ ಕಡೆಗೆ ನಡೆದನು. ಅಲ್ಲಿ ಬೇಟೆಗಾರರು ಮೃಗಗಳ ಬೇಟೆಯಾಡುತ್ತ ಹಿಂಸೆಯಲ್ಲಿಯೇ ಕಾಲ ಕಳೆಯುತ್ತಿರಲು, ಅವರಿಗೆ ದೇಹವೆಂಬ ಕಾಡಿನಲ್ಲಿ ನಿಜವಾದ ಬೇಟೆಯನ್ನು ಹೇಗೆ ಆಚರಿಸಬೇಕೆಂಬುದನ್ನು ಪ್ರಭು ತಿಳಿಸುತ್ತಾನೆ. "ಕುಂಡಲಿನೀ ಸರ್ಪದ ಹೆಡೆಯನ್ನು ಮೆಟ್ಟುವುದು, ಅರಿಷಡ್ವರ್ಗಗಳೆಂಬ ಹುಲಿಗಳನ್ನು ಅಡಗಿಸುವುದು, ಅಹಂಕಾರವೆಂಬ ಮದಗಜವನ್ನು ಮುರಿಯುವುದು, ಮಮಕಾರವೆಂಬ ಕೇಸರಿಯನ್ನು ಪಳಗಿಸುವುದು ಇವೇ ಮೊದಲಾದ ಬೇಟೆ ಆಡುವವನು ನಿಜವಾದ ಬೇಟೆಗಾರ. ಅದಿಲ್ಲದೆ ಹೊರಗೆ ಬೇಟೆಯಾಡುವುದು ಶೌರ್ಯವಲ್ಲ. ನಿಜವಾದ ಬೇಟೆಯಿಂದ ದೇಹದೊಳಗಿನ ನಿತ್ಯಸತ್ಯ ಸನಾತನವಸ್ತುವಿನ ಪರಿಚಯವುಂಟಾಗುವುದು. ಅದನ್ನು ಪಡೆ

ದಾಗಲೇ ನಮ್ಮ ಜನ್ಮ ಸಾರ್ಥಕವಾಗುವುದು ”. ಹೀಗೆ ಪ್ರಭು ದೇಹದಲ್ಲಿಯೇ ಬೇಟೆಯಾಡುವ ಆವಶ್ಯಕತೆಯನ್ನು ಒತ್ತಿ ಹೇಳಿದ್ದರಿಂದ, ಕಿರಾತರು ಪ್ರಸನ್ನರಾಗಿ ತಮ್ಮ ಶೌರ್ಯವನ್ನು ಅಂತಶ್ಶತ್ರುಗಳ ಬೇಟೆಗೆ ವಿನಿಯೋಗಿಸತೊಡಗಿದರು.

ಅಲ್ಲಿಂದ ಮುಂದೆ ಹೊರಟು ಪ್ರಭು ಯಜ್ಞಯಾಗಗಳನ್ನಾಚರಿಸುವ ಶ್ರೋತ್ರಿಯರನ್ನು ಸಂದರ್ಶಿಸುವನು. ಯಜ್ಞಾಚರಣೆ ಮನುಷ್ಯನನ್ನು ಕೊನೆಯ ಹಂತಕ್ಕೆ ಏರಿಸಲಾರದು. ಸಾಧಕರು ಅಷ್ಟರಲ್ಲಿಯೇ ನಿಂತರೆ ತಮ್ಮನ್ನು ತಾವರಿಯದೆ ಕೆಡುವರು. ಹೀಗೆ ಯಾಜ್ಞಿಕರನ್ನು ಪ್ರಭು ಎಚ್ಚರಿಸಿದಾಗ ಅವರಿಗೆ ಜ್ಞಾನೋದಯವುಂಟಾಗುವುದು. “ಯಜ್ಞದಲ್ಲಿ ಮೂಕಪ್ರಾಣಿಯನ್ನು ಬಲಿಕೊಡುವ ಬದಲು, ನಿಮ್ಮ ಅಹಂಕಾರವೆಂಬ ಪ್ರಾಣಿಯನ್ನು ಬಲಿಕೊಟ್ಟು, ಜ್ಞಾನಯಜ್ಞವನ್ನಾಚರಿಸುವಂತೆ ಪ್ರಭು ಅವರನ್ನು ಪ್ರಚೋದಿಸುವನು. ಇಂತಹ ಯಜ್ಞ ಬಂಧಕವಾಗದೆ ಅವರಿಗೆ ತಾರಕವಾಗಬಲ್ಲದೆಂದೂ, ಇದರಿಂದ ಅವರ ಶಕ್ತಿ ವಿಶ್ವವ್ಯಾಪಕವಾಗಿಯೂ ಪೂಜೆ ಪ್ರೇಮದ ಪೂಜೆಯಾಗಿಯೂ ಪರಿಣಮಿಸುವುದೆಂದೂ ಪ್ರಭು ಅವರಿಗೆ ಸಾಧನೆಯ ಸತ್ಯಾರ್ಥವನ್ನು ತೋರಿಸುವನು.

ಹೀಗೆ ಪ್ರಯಾಣಮಾಡುತ್ತ ಪ್ರಭು ಶ್ರೀಶೈಲದ ಬಳಿ ಸಾರಿದನು. ಅಲ್ಲಿ ಗೋರಕ್ಷನೆಂಬ ಸಾಧಕನು ಪ್ರಭುವಿನ ದೃಷ್ಟಿಗೆ ಬೀಳುವನು. ಹಠಯೋಗಸಾಧನೆಯಿಂದ ಅವನು ವಜ್ರಕಾಯನಾಗಿದ್ದನು. ಅವನು ಪ್ರಭುವನ್ನು ಕಂಡರೂ ತನ್ನ ಸಿದ್ಧಿಯ ಹಮ್ಮಿನಿಂದ ಕುಳಿತವನು ಮೇಲೇಳಲಿಲ್ಲ. “ನಿನಗೆ ನನ್ನಿಂದೇನಾಗಬೇಕು” ಎಂದು ಗೋರಕ್ಷನು ಕೇಳಿದನು. ಅದಕ್ಕೆ ಪ್ರಭು ನಗುತ್ತ ಹೇಳಿದನು. “ನಿನ್ನಿಂದ ನನಗೆ ಆಗಬೇಕಾದದ್ದು ಏನಿದೆ? ಈ

ದೇಹದ ಕೋಟಲೆಯಿಂದ ನಿನ್ನನ್ನು ತಪ್ಪಿಸಲಿಕ್ಕಾಗಿ ನಾನು ನಿನ್ನಲ್ಲಿಗೆ ಬಂದಿರುವೆನು. ಈ ದೇಹದಮೇಲೆ ನೀನು ಇಷ್ಟೊಂದು ಮೋಹ ಇಡುವುದು ಅವಿವೇಕ. ಈ ದೇಹದೊಳಗಿನ ಆತ್ಮನನ್ನು ತಿಳಿಯದ ಮೇಲೆ ಬರಿಯ ದೇಹಶಕ್ತಿಯನ್ನು ಸಾಧಿಸುವುದರಿಂದ ಏನೂ ಫಲವಿಲ್ಲ" ಎಂದು ಪ್ರಭು ತಿಳಿಸಿದನು. ಈ ಮಾತನ್ನು ಕೇಳಿ ಗೋರಕ್ಷನಿಗೆ ಸಿಟ್ಟಾಯಿತು. ಆಗ ಪ್ರಭು ದೇಹಕ್ಕೆ ಖಡ್ಗದಿಂದ ಹೊಡೆದು ನೋಡುವಂತೆ ಅವನು ಪ್ರಭುವಿಗೆ ತಿಳಿಸಿದನು. ಆದರೆ ಪ್ರಭು ಒಡೆದ ಕತ್ತಿಯ ಏಟುಗಳು ಗೋರಕ್ಷನ ದೇಹಕ್ಕೆ ಅಂಟಲಿಲ್ಲ. ದೇಹಕ್ಕೆ ತಗಲಿದ ಕತ್ತಿ ಹಿಂದಕ್ಕೆ ಸರಿಯಿತು. ಕತ್ತಿ ದೇಹಕ್ಕೆ ತಗಲಿದಾಗ ಢಣ್ ಢಣ್ ಎಂಬ ಶಬ್ದವುಂಟಾಯಿತು. ಅದೇ ಕತ್ತಿಯಿಂದ ತನ್ನ ದೇಹಕ್ಕೆ ಹೊಡೆಯುವಂತೆ ಪ್ರಭು ಗೋರಕ್ಷನಿಗೆ ತಿಳಿಸಿದನು. ಗೋರಕ್ಷನು ಕತ್ತಿಯನ್ನು ಮೇಲೆತ್ತಿ ಪ್ರಭುವಿನ ದೇಹದಮೇಲೆ ಬೀಸುವನು. ಆಗ ಕತ್ತಿ ಹಿಂದಕ್ಕೆ ಸರಿಯಲಿಲ್ಲ, ಢಣ್ ಢಣ್ ಎಂಬ ಶಬ್ದವೂ ಆಗಲಿಲ್ಲ. ಕತ್ತಿ ನಿಶ್ಶಬ್ದವಾಗಿ ಪ್ರಭುವಿನ ದೇಹವನ್ನು ಪ್ರವೇಶಿಸಿ ಇನ್ನೊಂದು ಕಡೆಗೆ ಸರಾಗವಾಗಿ ಹಾದುಹೋಯಿತು. ಪ್ರಭು ನಗುತ್ತ ನಿಂತಿರುವುದು ಗೋರಕ್ಷನಿಗೆ ಕಾಣಿಸುತ್ತಿತ್ತು. ಅವನು ಎಷ್ಟು ಹೊಡೆದರೂ ಬಯಲನ್ನೇ ಹೊಡೆದಂತಾಯಿತು. ಎದೆ ತಲೆ ಕಾಲು ಹೀಗೆ ಯಾವ ಭಾಗವನ್ನು ನೋಡಿ ಕತ್ತಿಯಿಂದ ತಿವಿದರೂ ಬಯಲಿಗೆ ಹೊಯ್ದಂತಾಗಿ ಅವನೇ ಮುಗ್ಗರಿಸಿದನು. ಎದುರಿಗೆ ಅಲ್ಲಮನ ದೇಹ ನಿಂತಿರುವುದು ಕಾಣುತ್ತಿತ್ತು. ಆದರೆ ಏಟು ಗಳೊಂದೂ ಅವನಿಗೆ ತಗಲುವಂತಿಲ್ಲ. ಗಾಳಿ ಗುದ್ದಿ ಮೈನೋಯಿಸಿ ಕೊಂಡಂತಾಯಿತು ಗೋರಕ್ಷನ ಸ್ಥಿತಿ. ನೀರನೀಜುವ ದೇಹ ಬಳಲುವು ದನಲ್ಲದೆ ನೀರು ಬಳಲುವುದೆ? ಧಾನ್ಯವನ್ನಳೆಯುವವನು ಬಳಲುವ

ನಲ್ಲದೆ ಕೊಳಗ ಬಳಲುವುದೆ? ನಡೆವುತ್ತ ನಡೆವುತ್ತ ಬಳಲು ವರಲ್ಲದೆ ಬಟ್ಟೆ ಬಳಲುವುದೆ? ಶ್ರಮವ ಮಾಡುತ್ತ ಮಾಡುತ್ತ ಬಳಲುವರಲ್ಲದೆ ಕೋಲು ಬಳಲುವುದೆ? ನಿಜವನರಿಯದೆ ಸಾಧಕನು ಬಳಲುವನಲ್ಲದೆ ಲಿಂಗ ಬಳಲುವುದೆ? ಗೋರಕ್ಷ ಹೊಡೆದು ಹೊಡೆದು ಬಳಲಿ ಬೆಂಡಾದನಲ್ಲದೆ, ಶೂನ್ಯಸ್ಥಿತಿಯಲ್ಲಿ ಬಯಲಾದ ಪ್ರಭು ಬಳಲುವನೆ? ಗೋರಕ್ಷನು ನಿರಾಶನಾಗಿ ಕತ್ತಿಯನ್ನು ಬಿಸಾಡಿ ಪ್ರಭುವಿನ ಪಾದಗಳಮೇಲೆ ಬಿದ್ದನು. ದೇಹವನ್ನು ಕಲ್ಲಾಗಿ ಮಾಡಿಕೊಳ್ಳುವುದಕ್ಕಿಂತಲೂ ದೇಹವಿದ್ದರೂ ದೇಹವಿಲ್ಲದಂತೆ ಮಾಡಿಕೊಳ್ಳುವುದೇ ಪೂರ್ಣ ಸಿದ್ಧಿ ಎಂಬುದನ್ನು ಅವನು ಈಗ ಪ್ರಭುವಿನಿಂದ ತಿಳಿದನು. ದೇಹದ ಮೇಲೆ ಅಧಿಕಾರಪಡೆಯುವುದೇ ಕೊನೆಯ ಸ್ಥಿತಿಯಲ್ಲ. ಅದರೊಳಗೆ ಗುಪ್ತವಾಗಿ ನೆಲೆಸಿರುವ ಗುಹೇಶ್ವರನನ್ನು ಕಂಡು ಅನುಭವಿಸು ವುದೇ ನಿಜವಾದ ಯೋಗವೆಂದು ಪ್ರಭು ಅವನಿಗೆ ತಿಳಿಸಿದನು. "ಗುಹೇಶ್ವರ ಯಾರು ಅವನನ್ನು ಅನುಭವಿಸುವುದು ಹೇಗೆ, ಸ್ವಾಮಿ" ಎಂದು ಗೋರಕ್ಷ ಕೇಳಿದನು. "ನಾನೇ ಗುಹೇಶ್ವರ. ಅಷ್ಟೇ ಅಲ್ಲ, ನೀನೂ ಗುಹೇಶ್ವರ. ನಿನ್ನ ಹೃದಯವೇ ಗುಹೆ. ಅದರಲ್ಲಿದ್ದು ಈ ದೇಹದ ಎಲ್ಲಾ ಭಾಗಗಳಲ್ಲೂ ನಿರ್ಲಿಪ್ತನಾಗಿ ವ್ಯಾಪಿಸಿದ ಚೈತನ್ಯವೇ ಈಶ್ವರ. ಎಲ್ಲರ ಹೃದಯ ಗುಹೆಯಲ್ಲೂ ಗುಹೇಶ್ವರ ಗುಪ್ತನಾಗಿ ನೆಲಸಿದ್ದಾನೆ. ಅವನನ್ನು ಕಂಡುಕೊಳ್ಳು ವುದೇ ನಿಜವಾದ ಸಿದ್ಧಿ. ಆವನನ್ನು ಅರಿತು ಅವನ ಸೇವೆ ಮಾಡುತ್ತ ಬಂದರೆ, ನೀನೂ ಅವನೇ ಆಗುವೆ. ಆಗ ನಿನ್ನ ಜನ್ಮ ಸಾರ್ಥಕವಾಗುವುದು. ಗುಹೇಶ್ವರನನ್ನು ಕಂಡನುಭವಿಸಿದವ ರೆಲ್ಲರೂ ಗುಹೇಶ್ವರನೇ ಆಗುತ್ತಾರೆ" ಇದನ್ನು ಕೇಳಿ ಗೋರಕ್ಷನು ಸಂತುಷ್ಟನಾಗಿ ಪ್ರಭುವಿಗೆ ಶರಣಾಗತನಾಗಿ ಅವನಿಂದ ಈಶ್ವರ ಸಾಧನೆಯ ಮರ್ಮವನ್ನರಿತನು.

ಹೀಗೆ ಪ್ರಭು ಗೋರಕ್ಷನಿಗೆ ಅನುಭವಮಾರ್ಗವನ್ನುಪದೇಶಿಸಿ ಅಲ್ಲಿಂದ ಮುಂದೆ ಹೊರಟು ಶ್ರೀಗಿರಿಯನ್ನು ಏರತೊಡಗಿದನು. ದೇಹವೆಂಬ ಶ್ರೀಗಿರಿಯ ಶಿಖರವನ್ನು ಏರಿ ನಿಂತಿದ್ದ ಪ್ರಭು ಪರಿಪೂರ್ಣತೆಯ ಅನಿರ್ವಚನೀಯ ಸೌಂದರ್ಯವನ್ನು ಪ್ರತ್ಯಕ್ಷವಾಗಿ ಕಂಡು, ಅದರ ಅಮರಸಂದೇಶವನ್ನು ಜಗತ್ತಿಗೆ ಸಾರಿದ್ದನು. ಈಗ ಅವನು ವಿಶ್ವಶಕ್ತಿಯ ಅವ್ಯಕ್ತರೂಪದಲ್ಲಿ ಬಯಲಾಗಲು ಸಿದ್ಧನಾಗಿರುವನು. ಶ್ರೀಗಿರಿಯ ಶಿಖರವನ್ನು ಏರಿ ಹೋದಂತೆಲ್ಲಾ ಅವನ ದೇಹ ಗಾಳಿಯಂತೆ ಹಗುರವಾಗತೊಡಗಿತು. ಆ ಶಿಖರ ಪ್ರದೇಶದಲ್ಲಿ ಕದಳಿಯ ವನವನ್ನು ಕಂಡು ಅಲ್ಲಿದ್ದ ಗುಹೆಯೊಂದನ್ನು ಪ್ರವೇಶಿಸಿ ಅದರಲ್ಲಿ ಪದ್ಮಾಸನ ಹಾಕಿ ಕುಳಿತು ಯೋಗನಿದ್ರೆಯಲ್ಲಿ ಪ್ರಭು ಕಣ್ಮುಚ್ಚಿ ಕುಳಿತನು. ದೇಹದಿಂದ ಹೊರಟ ಬೆಳಕು ಸುತ್ತಲೂ ವ್ಯಾಪಿಸಿದ್ದ ಬೆಳಕಿನೊಳಗೆ ಸೇರಿ ವಿಸ್ತಾರವಾದ ಬೆಳಕಿನ ಸಾಗರವಾಗಿ ವಿಶ್ವವನ್ನು ವ್ಯಾಪಿಸಿತು. ಈಗ ಪ್ರಭುವಿನ ದಿವ್ಯ ಜ್ಯೋತಿ ನಿರ್ಮಲಹೃದಯರೆಲ್ಲರಲ್ಲೂ ಶೋಭಿಸುತ್ತ ಅಮರವಾಗಿರುವುದು. ಸದ್ಭಕ್ತರೆಲ್ಲರನ್ನೂ ಅದು ಸದ್ಬುದ್ಧಿ ಸದ್ಭಾವನೆಗಳಿಂದ ಸತ್ಕಾರ್ಯಗಳ ಕಡೆಗೆ ಪ್ರೇರಿಸುತ್ತ ನಿತ್ಯ ಸುಂದರವೂ ನಿರಂಜನವೂ ಆಗಿ ಹೊಳೆಯುತ್ತಿರುವುದು. ವಿಶ್ವಶಕ್ತಿಯ ಈ ದಿವ್ಯಪ್ರಭೆ ಸಚ್ಚರಿತರ ನಿರ್ಮಲ ಹೃದಯದಲ್ಲಿ ಯಾವತ್ತೂ ಜಾಗೃತವಾಗಿದ್ದು, ವ್ಯವಹಾರ ಕಾಲದಲ್ಲಿ ಕತ್ತಲೆಯಲ್ಲಿ ಪರದಾಡುತ್ತಿರುವವರೆಲ್ಲರಿಗೂ ಜ್ಞಾನದ ಬೆಳಕನ್ನು ಅನುಗ್ರಹಿಸುತ್ತಿರುವುದು.

WO 21856—MUPM—10,000—20-11-80

ಕೆಲವು ಸಾಹಿತ್ಯ ಕೃತಿಗಳು

ಬೆಲೆ : ೨೫ ಪೈಸೆಗಳು

೧. ಕುಮಾರ ವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ಟಿ. ಎಸ್. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲೀಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ಟಿ. ಎಸ್. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣ
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣ
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ॥ ಹಿರಣ್ಮಯ

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಕೃಷ್ಣಮೂರ್ತಿ
೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ॥ ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ॥ ಹಿರಣ್ಮಯ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಉ. ಕಾ. ಸುಬ್ಬರಾಯಾಚಾರ್
೫೬. ಶ್ರೀ ಸಮರ್ಥರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ